ದೆಹಲಿ ಕರ್ನಾಟಕ ಸಂಘದ

# ಅಭಿಮತ

ಡಿಸೆಂಬರ್ 2014
ಬೆಲೆ ರೂ. 1



## ರಾಜ್ಯೋತ್ಸವದ ಸಂಭ್ರಮದಲ್ಲಿ ಕುಣಿದಾಡಿದ ಕನ್ನಡದ ಕಂದಮ್ಮಗಳು

ದೆಹಲಿ ಕರ್ನಾಟಕ ಸಂಘದ

# ಅಭಿಮತ

ಸಂಪುಟ 25 ಸಂಚಿಕೆ 3
ಡಿಸೆಂಬರ್ 2014, ಬೆಲೆ ರೂ. 1

**ಅಭಿಮತ ಸಂಪಾದಕ ಮಂಡಳಿ**

ಬಾಲಕೃಷ್ಣ ನಾಯ್ಕ್ ಡಿ.
ಸವಿತಾ ಇನಾಮದಾರ್
ಪ್ರಕಾಶ್ ಶೆಟ್ಟಿ ಉಳೆಪಾಡಿ
ಆಶಾಲತಾ ಎಂ.

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

ಅಧ್ಯಕ್ಷ
ವಸಂತ ಶೆಟ್ಟಿ ಬೆಳ್ಳಾರೆ: 9958697823

ಉಪಾಧ್ಯಕ್ಷರು
ಬಸವರಾಜು ಬಿ.ಕೆ.: 9810391608
ಆಶಾಲತಾ ಎಂ.: 9891249149

ಪ್ರಧಾನ ಕಾರ್ಯದರ್ಶಿ
ಸಿ.ಎಂ.ನಾಗರಾಜು: 9811325440

ಕೋಶಾಧಿಕಾರಿ
ಡಾ. ಅವನೀಂದ್ರನಾಥ್ ರಾವ್ 9868123382

ಜಂಟಿ ಕಾರ್ಯದರ್ಶಿಗಳು
ಎಸ್.ಸಿ. ಹೇಮಲತ: 9971121636
ಟಿ.ಎಂ. ಮೈಲಾರಪ್ಪ: 9868347461

ಸಮಿತಿ ಸದಸ್ಯರು
ಆಂಜನಿ ಗೌಡ: 9811165354
ರಾಧಾಕೃಷ್ಣ: 9818252183
ಪೂಜಾ ಪಿ. ರಾವ್: 9810882498
ವಿ.ವಿ.ಬಿರಾದಾರ: 9873005409
ಪಿ.ಸಿ.ಶ್ರೀನಿವಾಸ್: 9868170790
ಆನಂದ ಮುರಗೋಡ: 9312931233
ಆಶಾ ಶ್ಯಾಮಸುಂದರ್: 9871256177
ಬಸವರಾಜ ಮೇಟಿ: 9810282951
ಟಿ.ಪಿ. ಬೆಳ್ಳಿಯಪ್ಪ: 9654555795
ಕುಸುಮಾ ಪಿ. ನಂದರಗಿ 9868393955

ವಿಶೇಷ ಆಹ್ವಾನಿತರು
ಐ. ರಾಮ ಮೋಹನ್ ರಾವ್
ಡಾ. ಶರತ್ ಎಸ್. ಜವಳಿ
ಡಾ. ಪುರುಷೋತ್ತಮ ಬಿಳಿಮಲೆ

## ನೇರ ಮಾತು

ದೇಶದ ರಾಜಧಾನಿ ದೆಹಲಿಯಲ್ಲಿ ಕನ್ನಡದ ಅಸ್ಮಿತೆಯನ್ನು ಹುಡುಕಲು ಹೊರಟರೆ ಎಲ್ಲಾ ನೆಲೆಗಳಲ್ಲಿ ನಮಗೆ ದಟ್ಟವಾದ ಮತ್ತು ಪ್ರಭಾವಶಾಲಿ ಕನ್ನಡದ ಗುಂಪೊಂದು ಕಾಣಲು ದೊರಕುವುದು. ಜನಕಪುರಿಯಂತಹ ಬಡಾವಣೆಗಳಲ್ಲಿರುವ ಕನ್ನಡ ಸಾಂಸ್ಕೃತಿಕ ಸಂಘಟನೆಗಳು, ದೆಹಲಿ ಪೊಲೀಸ್, ಸುಪ್ರೀಂ ಕೋರ್ಟ್ ಸೇರಿದಂತೆ ಇತರ ಕೋರ್ಟ್‌ಗಳು, ಮಾಧ್ಯಮ ಸಂಸ್ಥೆಗಳು, ಸರಕಾರಿ ಸಂಸ್ಥೆಗಳು, ಬೃಹತ್ ಉದ್ಯಮಗಳು, ಐಟಿ ಕಂಪನಿಗಳು, ಸರಕಾರದ ವಿವಿಧ ಸಚಿವಾಲಯಗಳು, ವಿಶ್ವವಿದ್ಯಾಲಯಗಳು, ಕಲಾಕೇಂದ್ರಗಳು, ಹೋಟೇಲ್‌ಗಳು, ಕರ್ನಾಟಕದ ವಿವಿಧ ಭವನಗಳು ಇಲ್ಲೆಲ್ಲಾ ಕನ್ನಡಿಗರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ಆದರೆ ಉತ್ತರ ಭಾರತದಲ್ಲಿ ಒಂದೊಮ್ಮೆ ಮದರಾಸಿಗಳೆಂದು ಗುರುತಿಸಲಾಗಿದ್ದ ಕನ್ನಡಿಗರು ಇಂದು ಕರ್ನಾಟಕದವರು ಅಥವಾ 'ಕನ್ನಡ್' ಮಾತಾಡುವವರು ಎಂದು ಗುರುತಾಗಿದ್ದೇವೆ. ಟಿವಿ, ಅಂತರ್ಜಾಲ ಮತ್ತು ಉತ್ತರ ಭಾರತದಿಂದ ಬೆಂಗಳೂರಿಗೆ ಹೋಗಿ ಐಟಿ ಕಂಪನಿಗಳಲ್ಲಿ ಕೆಲಸ ಮಾಡಿದ ಇಂಜಿನಿಯರ್‌ಗಳ ಪ್ರಭಾವದಿಂದ ಈ ಬದಲಾವಣೆ ಆಗಿದೆ. ಹೀಗಿದ್ದರೂ ಇಲ್ಲಿ ಕನ್ನಡವನ್ನು ಮತ್ತು ಕರ್ನಾಟಕದ ಪ್ರಭಾವವನ್ನು ಗಟ್ಟಿಗೊಳಿಸುವ ಪ್ರಯತ್ನಗಳು ಮತ್ತು ಕೆಲಸಗಳು ನಡೆಯಲೇ ಇಲ್ಲ.

ದೆಹಲಿ ಕರ್ನಾಟಕ ಸಂಘವು ಇತ್ತೀಚೆಗೆ ದೇಶದ ಪ್ರತಿಷ್ಠಿತ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದಲ್ಲಿ ಕನ್ನಡ ಅಧ್ಯಯನ ಪೀಠವೊಂದನ್ನು ಸ್ಥಾಪಿಸಲು ಮಾಡಿದ ಪ್ರಯತ್ನ ಒಂದೆಡೆ ಯಶಸ್ವಿಯಾಗುವ ಭರವಸೆಯನ್ನು ತಂದಿದೆ. ಆದರೆ ನಾವು ಅಷ್ಟರಲ್ಲಿ ಸಮಾಧಾನವನ್ನು ಪಡೆಯದೇ, ಇತರ ಆಯಾಮಗಳಲ್ಲಿ ಕನ್ನಡದ ಮತ್ತು ಕರ್ನಾಟಕದ ಪ್ರಭಾವವನ್ನು ದೇಶದ ರಾಜಧಾನಿಯಲ್ಲಿ ಹೆಚ್ಚು ಮಾಡಬೇಕಾಗಿದೆ. ದೆಹಲಿಯಲ್ಲಿ ಕರ್ನಾಟಕದ ಪ್ರಗತಿ, ಸಾಹಿತ್ಯ, ಸಂಸ್ಕೃತಿ, ಶಿಕ್ಷಣ, ಜಾನಪದ ಇತ್ಯಾದಿಗಳನ್ನು ರಾಷ್ಟ್ರದ ರಾಜಧಾನಿಯಲ್ಲಿ ಪಸರಿಸುವಂತೆ ಆಗಬೇಕು.

ಈ ನಿಟ್ಟಿನಲ್ಲಿ ಕರ್ನಾಟಕದಿಂದ ಆಯ್ಕೆಯಾಗಿ ಬಂದ ಸಂಸದರು, ಸರಕಾರದ ಉನ್ನತ ಸ್ಥಾನಗಳಲ್ಲಿರುವ ಅಧಿಕಾರಿಗಳು, ಕರ್ನಾಟಕ ಸರಕಾರದ ಪ್ರತಿನಿಧಿಗಳು ಮತ್ತು ಇವೆಲ್ಲವನ್ನೂ ಸಾಮಾನ್ಯ ಪ್ರಜೆಗಳಿಗೆ ತಲುಪಿಸುವ ಜವಾಬ್ದಾರಿಯುಳ್ಳ ಮಾಧ್ಯಮದವರು ಒಂದೆಡೆ ಕುಳಿತು ಚರ್ಚಿಸಿ ಹೊಸ ರಣತಂತ್ರಗಳನ್ನು ಹೆಣೆಯುವ ಕೆಲಸವಾಗಬೇಕಾಗಿದೆ. ಇದಕ್ಕಾಗಿ ಈಗಿರುವ ದೆಹಲಿಯ ಕರ್ನಾಟಕದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕಾರ್ಯಾಲಯವನ್ನು ವಿಸ್ತರಿಸಿ ಒಂದು ಸುಸಜ್ಜಿತವಾದ 'ಕರ್ನಾಟಕ ಮಾಧ್ಯಮ ಕೇಂದ್ರ'ವನ್ನು ಆರಂಭಿಸಬೇಕಾದ ಅಗತ್ಯವಿದೆ. ಇಲ್ಲಿ ಕರ್ನಾಟಕದ ವಿವಿಧ ಕ್ಷೇತ್ರಗಳಲ್ಲಿ ಆಗಬೇಕಾದ ಪ್ರಗತಿಯ ಕುರಿತು ಅಭಿವೃದ್ಧಿಯ ಕುರಿತು ಚರ್ಚೆಯಾಗಬೇಕು. ಅ

***ವಸಂತ ಶೆಟ್ಟಿ ಬೆಳ್ಳಾರೆ, ಅಧ್ಯಕ್ಷರು***

## ಮುನ್ನೋಟ

ಕಳೆದ ತಿಂಗಳಿಡೀ ದೆಹಲಿಯ ಕನ್ನಡಿಗರಿಗೆ ರಾಜ್ಯೋತ್ಸವದ ಅಂಗವಾಗಿ ನಿರಂತರವಾಗಿ ಕನ್ನಡ ಕಾರ್ಯಕ್ರಮಗಳನ್ನು ನೀಡುವುದರಲ್ಲಿ ದೆಹಲಿ ಕರ್ನಾಟಕ ಸಂಘವು ತೊಡಗಿಸಿಕೊಂಡಿತ್ತು. ಸಾಂಸ್ಕೃತಿಕ ಕಾರ್ಯಕ್ರಮಗಳ ಜತೆಗೆ ಡಾ. ಕೆ. ಶಿವರಾಮ ಕಾರಂತ ಪ್ರಶಸ್ತಿ ಪ್ರದಾನ, ವಿಶಿಷ್ಟ ಕನ್ನಡಿಗ ಪ್ರಶಸ್ತಿ ಪ್ರದಾನ ಸಮಾರಂಭಗಳು, ಸಂಘದ ವಾರ್ಷಿಕ ಸಾಂಸ್ಕೃತಿಕ ಮತ್ತು ಆಟೋಟ ಸ್ಪರ್ಧೆಗಳಲ್ಲಿ ಹಾಗೂ ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಪಂದ್ಯಾವಳಿಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣೆ ಕಾರ್ಯಕ್ರಮಗಳೂ ನಡೆದವು. ಸ್ಥಳೀಯ ಕನ್ನಡ ಕಲಾವಿದರು ನಡೆಸಿದ ಜಾನಪದ ನೃತ್ಯ ಕಾರ್ಯಕ್ರಮವೂ ದೆಹಲಿ ಕನ್ನಡಿಗರ ಮನ ಗೆಲ್ಲುವಲ್ಲಿ ಯಶಸ್ವಿಯಾಯಿತು.

ಕರ್ನಾಟಕದ ಸಂಸ್ಕೃತಿ, ಕಲೆ ಮತ್ತು ಸಾಹಿತ್ಯವನ್ನು ದೆಹಲಿಯಲ್ಲಿ ಮೆರೆಸುವುದರ ಜತೆಗೆ ಭಾಷೆಯ ಕುರಿತು ಅಧ್ಯಯನ ನಡೆಸಲು ನವದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದಲ್ಲಿ ಕನ್ನಡ ಅಧ್ಯಯನ ಪೀಠವನ್ನು ಪ್ರಾರಂಭಿಸುವಲ್ಲಿಯೂ ದೆಹಲಿ ಕರ್ನಾಟಕ ಸಂಘವು ತನ್ನ ಅಮೂಲ್ಯವಾದ ಕೊಡುಗೆಯನ್ನು ನೀಡಿದೆ.

ಕರ್ನಾಟಕದ ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯನವರು, ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಸಚಿವೆ ಶ್ರೀಮತಿ ಉಮಾಶ್ರೀ, ಇಲಾಖೆಯ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್, ನಿರ್ದೇಶಕ ಶ್ರೀ ದಯಾನಂದ ಮೊದಲಾದವರು ದೆಹಲಿಯಲ್ಲಿ ಕನ್ನಡ ಭಾಷೆಗೆ ಸಂಬಂಧಿಸಿದಂತೆ ಇಂತಹ ದೊಡ್ಡ ಕಾರ್ಯವನ್ನು ಮಾಡಿದ್ದಾರೆ. ಜತೆಗೆ ನಮ್ಮೊಂದಿಗಿರುವ ವಿದ್ವಾಂಸರಾದ ಡಾ. ಪುರುಷೋತ್ತಮ ಬಿಳಿಮಲೆ, ಡಾ. ವೆಂಕಟಾಚಲ ಹೆಗಡೆ, ಡಾ. ಸುಧಾ ಪೈ ಮತ್ತು ಡಾ. ಟಿ.ಎಸ್. ಸತ್ಯನಾಥ್ ಅವರು ಬಹಳಷ್ಟು ಶ್ರಮಿಸಿದ್ದಾರೆ. ಈ ಐತಿಹಾಸಿಕ ಕ್ಷಣದಲ್ಲಿ ಇವರೆಲ್ಲರಿಗೂ ನಮ್ಮ ಮನದಾಳದ ಕೃತಜ್ಞತೆಗಳನ್ನು ಸಲ್ಲಿಸುವಲ್ಲಿ ಸಂಘದ ಸದಸ್ಯರೆಲ್ಲರೂ ಜತೆಯಾಗುವಿರಿ ಎಂದುಕೊಳ್ಳುತ್ತಿದ್ದೇನೆ.

ಜನವರಿಯಲ್ಲಿ ಸಂಘವು ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಸಹಯೋಗದೊಂದಿಗೆ ಎರಡು ದಿನಗಳ ಹೊರನಾಡ ಕನ್ನಡಿಗರ ಮಹಾಮೇಳವನ್ನು ಆಯೋಜಿಸಿದೆ. ಜತೆಗೆ ಕರ್ನಾಟಕದ ತಂಡಗಳಿಂದ ಎರಡು ಮತ್ತು ದೆಹಲಿಯ ಕಲಾವಿದರಿಂದ ಒಂದು ಉತ್ತಮ ನಾಟಕಗಳನ್ನು ಸಂಘದಲ್ಲಿ ಪ್ರದರ್ಶಿಸಲಾಗುವುದು. ಎಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿರಿ ಎಂದು ಕೇಳಿಕೊಳ್ಳುವೆನು. ಅ

***ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ***

## ದೆಹಲಿ ಕರ್ನಾಟಕ ಸಂಘದಲ್ಲಿ ತಿಂಗಳ ಕಾರ್ಯಕ್ರಮ

**21 ಡಿಸೆಂಬರ್ 2014 ಭಾನುವಾರ ಸಂಜೆ 4.00ಕ್ಕೆ**

**ಸಾಹಿತ್ಯ ವೈವಿಧ್ಯ :** ಹಿರಿಯ ರಂಗ ಕಲಾವಿದ ಶ್ರೀ ಎಚ್.ಎಸ್. ಕುಲಕರ್ಣಿ ಅವರ 'ದೇವರು ಎದ್ದು ಬಂದಾಗ' ಮತ್ತು 'ಕಿತ್ತೂರು ರಾಣಿ ಚೆನ್ನಮ್ಮ' ನಾಟಕಗಳ ಕೃತಿ ಬಿಡುಗಡೆ

### ತಿಂಗಳ ನಾಟಕ

**21 ಡಿಸೆಂಬರ್ 2014 ಭಾನುವಾರ ಸಂಜೆ : 5.00ಗಂಟೆಗೆ**

**ನಾಟಕ : ಉರುಗವ್ವ**
ಬೆಸಗರಹಳ್ಳಿ ರಾಮಣ್ಣ ಅವರ 'ತಾಯಿ' ಕತೆ ಆಧಾರಿತ
ನಾಟಕರೂಪ : ಡಾ.ಎಂ. ಬೈರೇಗೌಡ
ನಿರ್ದೇಶನ : ಶಿವಾನಂದ ಇಂಗಳೇಶ್ವರ
ಪ್ರಸ್ತುತಿ : 'ದಿನಕರ'

**24 ಮತ್ತು 25 ಜನವರಿ 2015 ಶನಿವಾರ ಮತ್ತು ಭಾನುವಾರ**

ದೆಹಲಿ ಕರ್ನಾಟಕ ಸಂಘವು ಕರ್ನಾಟಕದ ಪ್ರತಿಷ್ಠಿತ ಕರ್ನಾಟಕ ವಿದ್ಯಾವರ್ಧಕ ಸಂಘ ಧಾರವಾಡದ ಸಹಯೋಗದೊಂದಿಗೆ ಎರಡು ದಿನಗಳ ಹೊರನಾಡ ಕನ್ನಡಿಗರ ಮಹಾಮೇಳವನ್ನು ಆಯೋಜಿಸಿದೆ.

### ಸಂಘದ ಆರ್ಟ್ ಗ್ಯಾಲರಿಯಲ್ಲಿ ಚಿತ್ರ ಕಲಾ ಪ್ರದರ್ಶನ

**23 ರಿಂದ 28 ಡಿಸೆಂಬರ್ 2014**

**ಯೋಗೀಶ ಚ. ಮಠದ** ಅವರಿಂದ ಚಿತ್ರಕಲಾ ಪ್ರದರ್ಶನ

**29 ಡಿಸೆಂಬರ್ ರಿಂದ 1 ಜನವರಿ 2015**

**ಕರ್ನಾಟಕ ಫೈನ್ ಆರ್ಟ್ಸ್ ಯುನಿವರ್ಸಿಟಿ, ಬಾದಾಮಿ 20 ಜನ ಚಿತ್ರ ಕಲಾವಿದರಿಂದ** ಚಿತ್ರಕಲಾ ಪ್ರದರ್ಶನ

### ವೈದ್ಯಕೀಯ ಸಲಹೆಗಳು

**ಡಾ. ನಿರಂಜನ್ ನಾಯ್ಕ್,** MBBS, MS (AIIMS), ONCO-SURGERY (IRCH, AIIMS) ಅವರಿಂದ ಕ್ಯಾನ್ಸರ್ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 21 ಡಿಸೆಂಬರ್ 2014ರಂದು ಬೆಳಿಗ್ಗೆ 10 ಗಂಟೆಯಿಂದ.

**ಡಾ. ಸಾಯಿಪ್ರಶಾಂತಿ ಶೆಟ್ಟಿ** B.A.M.S., Msc, Yoga Therapy ಅವರಿಂದ ಆಯುರ್ವೇದ ಮತ್ತು ಯೋಗ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 21 ಡಿಸೆಂಬರ್ 2014ರಂದು ಸಾಯಂಕಾಲ 4 ಗಂಟೆಯಿಂದ.

**ಡಾ. ಗುರುರಾಜ ಸಂಗೊಂದಿಮಠ** MS, FNB, Spine Surgeon, ಅವರಿಂದ ಬೆನ್ನು ಮೂಳೆಗೆ ಸಂಬಂಧಿತ ರೋಗಗಳಿಗೆ ಉಚಿತ ವೈದ್ಯಕೀಯ ಸಲಹೆ ಭಾನುವಾರ 28 ಡಿಸೆಂಬರ್ 2014 ರಂದು ಬೆಳಿಗ್ಗೆ 11 ಗಂಟೆಯಿಂದ.

**ಡಾ. ಭೀಮ್ ಭಟ್** M.D. (AYU) ಅವರಿಂದ ಉಚಿತ ಆಯುರ್ವೇದ ವೈದ್ಯಕೀಯ ಸಲಹೆ ಭಾನುವಾರ 28 ಡಿಸೆಂಬರ್ 2014 ರಂದು ಸಾಯಂಕಾಲ 4 ಗಂಟೆಯಿಂದ.




'ಅಭಿಮತ' ಬೆಳ್ಳಿ ಸಂಪುಟದ ಸಂದರ್ಭದಲ್ಲಿ ಮುಂಬರುವ ತಿಂಗಳುಗಳಲ್ಲಿ ಒಂದು ವಿಶೇಷಾಂಕವನ್ನು ಪ್ರಕಟಿಸುವ ಯೋಜನೆಯಲ್ಲಿದೆ.

ಅಭಿಮತದ ಪ್ರೀತಿಯ ಓದುಗರು, ಬರಹಗಾರರು ಸಂಪಾದಕರ ಮಂಡಳಿಯಲ್ಲಿ ಕೆಲಸ ಮಾಡಿದವರು ಅಲ್ಲದೇ ಸಂಘದ ಸದಸ್ಯರು, ಈ ವಿಶೇಷ ಸಂಚಿಕೆಗೆ ತಮ್ಮ ಅನುಭವದ, ಅಪರೂಪದ ಬರಹಗಳನ್ನು ಕಳುಹಿಸಿಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇವೆ.

ಬರಹಗಳನ್ನು ಈಮೇಲ್ (dksangha@gmail.com) ಮೂಲಕ ಅಥವಾ ಅಂಚೆ ಮೂಲಕ ಸಂಘದ ಕಛೇರಿಗೆ ಡಿಸೆಂಬರ್ 25ರ ಒಳಗಾಗಿ ಕಳುಹಿಸಬಹುದು.

### ವಧೂ–ವರರ ಮಾಹಿತಿ

ಕರ್ನಾಟಕದಿಂದ ದೆಹಲಿಗೆ ಬಂದು ನೆಲೆನಿಂತ ಹಲವಾರು ಕನ್ನಡಿಗರು ಹತ್ತು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಲೇ ಬಂದಿರುತ್ತಾರೆ. ಇದರಲ್ಲಿ ಮುಖ್ಯವಾಗಿ ತಮ್ಮ ಮಕ್ಕಳ ವಿವಾಹದ ಕುರಿತು ಹೆಚ್ಚು ಸಮಸ್ಯೆಗಳಿಗೆ ಒಳಗಾಗುತ್ತಾರೆ. ಇದನ್ನು ಮನಗಂಡ ದೆಹಲಿ ಕರ್ನಾಟಕ ಸಂಘವು ಹುಡುಗ–ಹುಡುಗಿಯರ ಮಾಹಿತಿಯನ್ನು ಸಂಗ್ರಹಿಸುತಿದೆ.

ದೆಹಲಿಯಲ್ಲಿರುವ ಕರ್ನಾಟಕದ ಪೋಷಕರು/ಹುಡುಗ/ಹುಡುಗಿಯರು ಪ್ರತಿ ಭಾನುವಾರ ಸಂಜೆ ಸಂಘದ ಕಾರ್ಯಾಲಯಕ್ಕೆ ಬಂದು ಸಂಘದಲ್ಲಿರುವ ಮಾಹಿತಿಯನ್ನು ನೋಡಬಹುದು. ಹಾಗೂ ಮಾಹಿತಿಯನ್ನು ನೋಂದಾಯಿಸಬಹುದು. ನೋಂದಣಿ ಉಚಿತವಾಗಿರುತ್ತದೆ. ವೈವಾಹಿಕ ಸಂಬಂಧಗಳ ಕುರಿತು ಪೋಷಕರು/ಹುಡುಗ/ಹುಡುಗಿಯರು ಪರಸ್ಪರ ವ್ಯವಹರಿಸಿಕೊಳ್ಳತಕ್ಕದ್ದು. ಸಂಬಂಧಗಳ ಕುರಿತು ಸಂಘ ಯಾವುದೇ ರೀತಿಯ ವ್ಯವಹಾರ ಮಾಡುವುದಿಲ್ಲ ಮತ್ತು ಜವಾಬ್ದಾರರಾಗುವುದಿಲ್ಲ. ಅ



**ದೆಹಲಿ ಕರ್ನಾಟಕ ಸಂಘದ ಸುಸಜ್ಜಿತವಾದ ಆರ್ಟ್ ಗ್ಯಾಲರಿ ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ.**
**ಹೆಚ್ಚಿನ ಮಾಹಿತಿಗಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿರಿ. ಫೋನ್ : 8860848585 – 011-26109615, 26104818**

# ಸಂಘದಲ್ಲಿ ನೃತ್ಯ ಕಲಾವಿದೆ ಮಾಯಾ ರಾವ್ ನೆನಪು



ಖ್ಯಾತ ಕಥಕ್ ನೃತ್ಯ ಕಲಾವಿದೆ ದಿ. ಮಾಯಾ ರಾವ್ ನೆನಪು ಕಾರ್ಯಕ್ರಮವನ್ನು ದೆಹಲಿ ಕರ್ನಾಟಕ ಸಂಘದಲ್ಲಿ ಇದೇ ನವೆಂಬರ್ 9ರಂದು ಹಮ್ಮಿಕೊಳ್ಳಲಾಗಿತ್ತು. ಸಮಾರಂಭದ ಅಧ್ಯಕ್ಷತೆಯನ್ನು ಭಾರತ ಸರಕಾರದ ಮಾಜಿ ಪ್ರಧಾನ ವಾರ್ತಾಧಿಕಾರಿ ಶ್ರೀ ಐ. ರಾಮಮೋಹನ ರಾವ್ ಅವರು ವಹಿಸಿದರು. ಮುಖ್ಯ ಅತಿಥಿಯಾಗಿ ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಸಚಿವ ಶ್ರೀ ಅನಂತ ಕುಮಾರ್ ಅವರು ಪಾಲ್ಗೊಂಡಿದ್ದರು.

ಮಾಯಾ ರಾವ್ ಅವರ ನೆನಪಿನಲ್ಲಿ ದೆಹಲಿ ಕರ್ನಾಟಕ ಸಂಘವು ರಾಜ್ಯೋತ್ಸವ ಸಂದರ್ಭದಲ್ಲಿ ಕಾರ್ಯಕ್ರಮವೊಂದನ್ನು ಹಮ್ಮಿಕೊಂಡಿರುವುದು ಶ್ಲಾಘನೀಯ ಎಂದು ಶ್ರೀ ಅನಂತಕುಮಾರ್ ಈ ಸಂದರ್ಭದಲ್ಲಿ ಹೇಳಿದರು. ಮಾಯಾ ರಾವ್ ಅವರ ಶಿಷ್ಯೆ ಶ್ರೀಮತಿ ಶಾಲಿನಿ ಪ್ರಸಾದ್ ಅವರು ಸಂಸ್ಮರಣಾ ಭಾಷಣ ಮಾಡಿದರು. ಮಾಯಾರಾವ್ ಅವರು 1987ರಲ್ಲಿ ನಾಟ್ಯ ಇನ್ಸಿಟ್ಯೂಟ್ ಆಫ್ ಕಥಕ್ ಕೊರಿಯೋಗ್ರಫಿಯನ್ನು ಬೆಂಗಳೂರಿನಲ್ಲಿ ಪ್ರಾರಂಭಿಸಿದಾಗ, ಹೆಚ್ಚಾಗಿ ಭರತನಾಟ್ಯ ನೃತ್ಯ ಶೈಲಿಯೇ ಅಭ್ಯಾಸದಲ್ಲಿತ್ತು. ಅವರು ಉತ್ತರಾದಿ ಸಂಪ್ರದಾಯವನ್ನು ನಮಗೆಲ್ಲಾ ಪರಿಚಯಿಸಿದ್ದು ಮಾತ್ರವಲ್ಲದೆ, ಇತರ ನೃತ್ಯ ಶೈಲಿಯ ದಿಗ್ಗಜರನ್ನು ಕರೆಸಿ ಶಿಬಿರವನ್ನು ನಡೆಸುತ್ತಿದ್ದರು. ಸೊನಾರ್‌ಚಂದ್ ಅವರಿಂದ ಮಾರ್ಷಿಯಲ್ ಆರ್ಟ್ಸ್, ಶಶಿಧರ್ ಆಚಾರ್ಯ ಅವರಿಂದ ಛೌ ನೃತ್ಯ, ಒಡಿಸ್ಸಿ ಶೈಲಿಯನ್ನು ವಿಶ್ವವಿಖ್ಯಾತಗೊಳಿಸಿದ ಕೇಲುಚರನ್ ಮೊಹಾಪಾತ್ರ ಅವರ ಪ್ರತ್ಯಕ್ಷ ನೃತ್ಯ ಪ್ರದರ್ಶನ–ಹೀಗೆ ಹಲವಾರು ನೃತ್ಯ ಶೈಲಿಗಳ ಪರಿಚಯ ಮಾಡಿದರು. ಮಾಯಾ ರಾವ್ ಎಲ್ಲಾ ನೃತ್ಯ ಶೈಲಿಗಳಿಗೂ ಪ್ರೋತ್ಸಾಹ ನೀಡುತ್ತಿದ್ದು, ಅವರು ದೆಹಲಿಯಲ್ಲಿ ಇದ್ದಾಗ ಯಕ್ಷಗಾನದ ಪ್ರಚಾರಕ್ಕೆ ಶ್ರಮಿಸಿದ್ದರು ಎಂದು ಶಾಲಿನಿ ಪ್ರಸಾದ್ ಅವರು ಹೇಳಿದರು.

ಮಾಯಾರಾವ್ ಅವರು ವೇದಿಕೆಯನ್ನು ಸಮಗ್ರವಾಗಿ ಬಳಸುವ ರೀತಿ, ಬೆಳಕಿನ ಮತ್ತು ಶಬ್ದದ ಮಹತ್ವ, ವೇದಿಕೆಯ ಮೇಲೆ ನೃತ್ಯಾಂಗನೆಯರ ಚಲನೆ ಮೊದಲಾದ ತಾಂತ್ರಿಕ ವಿವರಣೆಗಳಿಗೂ ಒತ್ತು ಕೊಟ್ಟು ತಮ್ಮ ಶಿಷ್ಯವೃಂದದಲ್ಲಿ ಈ ಕುರಿತು ಅರಿವು ಮೂಡಿಸಿದರು, ಎಂದು ಅವರು ಹೇಳಿದರು.

ಇದೇ ಸಂದರ್ಭದಲ್ಲಿ ಕಲಾವಿದೆ ದಿ. ಮಾಯಾ ರಾವ್ ನೆನಪಿನಲ್ಲಿ ಕೆರೆಮನೆ ಶಿವಾನಂದ ಹೆಗಡೆ ಅವರ ನೇತೃತ್ವದಲ್ಲಿ ಶ್ರೀ ಇಡಗುಂಜಿ ಮಹಾಗಣಪತಿ ಯಕ್ಷಗಾನ ಮಂಡಳಿ ಮೇಳದಿಂದ ಸುಭದ್ರ ಕಲ್ಯಾಣ ಯಕ್ಷಗಾನ ಪ್ರದರ್ಶನಗೊಂಡಿತು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಪ್ರಾಸ್ತವಿಕ ನುಡಿಗಳನ್ನಾಡಿದರು. ಸಂಘದ ಕೋಶಾಧಿಕಾರಿ ಡಾ. ವೈ. ಅವನೀಂದ್ರನಾಥ್ ರಾವ್ ಕಾರ್ಯಕ್ರಮ ನಿರೂಪಿಸಿದರು. ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ವಂದಿಸಿದರು. ಅ

***ಅಭಿಮತ ವರದಿ***

## ಮಾಯಾರಾವ್ ಒಂದು ಪರಿಚಯ



ಬೆಂಗಳೂರಿನ ಮಲ್ಲೇಶ್ವರಂನಲ್ಲಿ ನೆಲೆಸಿದ್ದ ಕೊಂಕಣಿ ಸಾರಸ್ವತ ಬ್ರಾಹ್ಮಣರ ಮನೆಯವರಾಗಿದ್ದ ಡಾ. ಮಾಯಾ ರಾವ್ ಅವರು 1928 ಜನಿಸಿದರು. ಅವರು ಚಿಕ್ಕವರಿದ್ದಾಗ ಸಂಗೀತದಲ್ಲಿ ಅದರಲ್ಲೂ ದಿಲ್‌ರುಬಾ ವಾದನದಲ್ಲಿ ತರಬೇತಿ ಪಡೆಯುತ್ತಿದ್ದರು. ಆದರೆ ಅವರು 12 ವರ್ಷದವರಾಗಿದ್ದಾಗ, ವಿಶ್ವವಿಖ್ಯಾತ ನೃತ್ಯಪಟು ಉದಯಶಂಕರ್ ಅವರ ತಂಡದ ನೃತ್ಯ ನಾಟಕವನ್ನು ವೀಕ್ಷಿಸಿ ನೃತ್ಯದ ಕಡೆಗೆ ಒಲವು ಮೂಡಿಸಿದರು. ಮಾಯಾ ರಾವ್ ಅವರ ಕಥಕ್ ನೃತ್ಯ ತರಬೇತಿ ಪ್ರಾರಂಭವಾಯ್ತು. ಶಾಲಾ ಕಾಲೇಜುಗಳಲ್ಲಿ ನೃತ್ಯ ಸಂಯೋಜನೆಯನ್ನು ಮಾಡುತ್ತಿದ್ದರು. ಜೈಪುರ ಘರಾನಾದ ಗುರುಗಳಾದ ಸೋಹನ್‌ಲಾಲ್ ಮತ್ತು ಸುಂದರ್ ಪ್ರಸಾದ್ ಅವರುಗಳಿಂದ ತರಬೇತಿ ಪಡೆದರು. ತಮ್ಮ ಉನ್ನತ ತರಬೇತಿಯನ್ನು ಲಕ್ನೋ ಘರಾನಾದ ಹೆಸರಾಂತ ಗುರು ಶಂಭು ಮಹರಾಜ್ ಅವರಲ್ಲಿ ಪಡೆದರು.

ಇದೇ ಸಮಯದಲ್ಲಿ ದೆಹಲಿಯ ನಿವಾಸಿಯಾಗಿದ್ದ ಅವರಿಗೆ 1960ರಲ್ಲಿ ನೃತ್ಯ ಸಂಯೋಜನೆಯಲ್ಲಿ ಸ್ನಾತಕೋತ್ತರ ಪದವಿ ಪಡೆಯಲು ಯು.ಎಸ್.ಎಸ್.ಆರ್. ಕಲ್ಚರಲ್ ಸ್ಕಾಲರ್‌ಶಿಫ್ ಇನ್ ಕೋರಿಯೋಗ್ರಫಿ ದೊರೆಯಿತು. ಈ ಅನುಭವ ಅವರ ನೃತ್ಯಕ್ಕೆ, ನೃತ್ಯ ಸಂಯೋಜನೆಗೆ ಹೊಸ ಆಯಾಮವನ್ನೇ ನೀಡಿತು. 1964ರಲ್ಲಿ ಭಾರತಕ್ಕೆ ಹಿಂತಿರುಗಿದ ಮಾಯಾ ಅವರು ಅಂದಿನ, ಸಂಗೀತ ನಾಟಕ ಅಕಾಡೆಮಿಯ ವೈಸ್ ಚೆಯರ್ ಪರ್ಸನ್ ಆಗಿದ್ದ ಕಮಲಾದೇವಿ ಚಟ್ಟೋಪಾಧ್ಯಾಯ ಅವರ ಸಹಾಯದೊಂದಿಗೆ ದೆಹಲಿಯ ಭಾರತೀಯ ನಾಟ್ಯ ಸಂಘದ ಅಡಿಯಲ್ಲಿ 'ನಾಟ್ಯ ಇನ್ಸಿಟ್ಯೂಟ್ ಆಫ್ ಕೋರಿಯೋಗ್ರಫಿ' ಪ್ರಾರಂಭಿಸಿದರು. ಇದೇ ಸಮಯದಲ್ಲಿ ಸಂಗೀತಗಾರ, ಸಂಗೀತ ನಿರ್ದೇಶಕ ಎಂ.ಎಸ್. ನಟರಾಜನ್ ಅವರೊಂದಿಗೆ ಅವರ ದಾಂಪತ್ಯ ಜೀವನ ಪ್ರಾರಂಭವಾಯ್ತು.

ಕರ್ನಾಟಕದ ಅಂದಿನ ಮುಖ್ಯಮಂತ್ರಿ ರಾಮಕೃಷ್ಣ ಹೆಗ್ಡೆಯವರ ಆಮಂತ್ರಣದ ಮೇರೆಗೆ ಬೆಂಗಳೂರಿಗೆ ಹೋದ ಮಾಯಾರಾವ್, ಪತಿಯೊಂದಿಗೆ 1987ರಲ್ಲಿ ನಾಟ್ಯ ಇನ್ಸಿಟ್ಯೂಟ್ ಆಫ್ ಕಥಕ್ ಅಂಡ್ ಕೋರಿಯೋಗ್ರಫಿ ಸ್ಥಾಪಿಸಿದರು. ಆರ್ಟ್ ಅಂಡ್ ಲೈಫ್, ಫಗ್‌ಲೀಲಾ, ಗೋವರ್ಧನ ಲೀಲಾ, ಕುವೆಂಪು ಅವರ ರಾಮಾಯಣ ದರ್ಶನಂ, ಹೊಯ್ಸಳ ವೈಭವ, ವಿಜ್ಡನ್ ಆಫ್ ಅಮಿರ್ ಕುಸ್ರು, ತುಳಸಿ ಕೆ ರಾಮ್, ಭಾಸನ ಊರುಭಂಗ, ಕೃಷ್ಣದೇವರಾಯ, ವಿಜಯನಗರ ವೈಭವ, ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಅವರ ಕಾಮನಬಿಲ್ಲು–ಇವು ಅವರ ಹೆಸರಾಂತ ನೃತ್ಯ ನಾಟಕಗಳಲ್ಲಿ ಕೆಲವು.

ಅವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, ಶಾಂತಲಾ ಪ್ರಶಸ್ತಿ, ಸಂಗೀತ ನಾಟಕ ಅಕಾಡೆಮಿಯಿಂದ "ಟಾಗೋರ್ ರತ್ನ" ಪ್ರಶಸ್ತಿ ಮೊದಲಾದ ಗೌರವಗಳು ದೊರೆತಿವೆ. ಅ







# ಸಂಘ ಪ್ರಕಟಿಸಿದ 'ಜರ್ನಿ ಟು ವಾರ್ಧಾ' ಪುಸ್ತಕ ಬಿಡುಗಡೆ


ಗಾಂಧೀಜಿಗೆ ತಾನು ಮಾಡುವ ಕೆಲಸಗಳು ಕರ್ತವ್ಯ ಮತ್ತು ಆರಾಧನೆಯಾಗಿತ್ತು ಎಂಬುದಾಗಿ ಹಿರಿಯ ಗಾಂಧೀವಾದಿ ಡಾ. ಎನ್.ಎಸ್. ಸುಬ್ಬರಾವ್ ಅವರು ಅಭಿಪ್ರಾಯಪಟ್ಟರು. ಅವರು ದೆಹಲಿ ಕರ್ನಾಟಕ ಸಂಘದಲ್ಲಿ ಇದೇ ನವಂಬರ್ 9ರಂದು 'ಜರ್ನಿ ಟು ವಾರ್ಧಾ' ಆಂಗ್ಲ ಕೃತಿ ಬಿಡುಗಡೆಗೊಳಿಸಿ ಮಾತನಾಡುತ್ತಿದ್ದರು. ಗಾಂಧೀಜಿಯವರು ವಾರ್ಧಾದಲ್ಲಿನ ತಮ್ಮ ಆಶ್ರಮದ ಮೂಲಕ ಪ್ರತಿ ಮಾನವನು ತನ್ನ ಆತ್ಮ ಬಲವನ್ನು ಅರಿಯುವಂತೆ ಮಾಡಿದರು ಎಂದು ಸುಬ್ಬರಾವ್ ತಿಳಿಸಿದರು.

ದೆಹಲಿ ಕರ್ನಾಟಕ ಸಂಘವು ಪ್ರಕಟಿಸಿದ ಈ ಕೃತಿಯ ಬಿಡುಗಡೆ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ಮಾತಾಡಿದ ಶ್ರೀ ಐ. ರಾಮಮೋಹನ ರಾವ್ ಅವರು ಗಾಂಧೀ ಆಶ್ರಮವನ್ನು ಕನ್ನಡಿಗನೊಬ್ಬನು ಕಂಡು ಬರೆದ ಈ ಕೃತಿಯು ಗಾಂಧೀಜಿಯ ಆತ್ಮಕತೆಯಷ್ಟೇ ಮಹತ್ವ ಪಡೆದಿದೆ ಎಂದರು. ಕನ್ನಡದ ಮೂಲ ಕೃತಿಗೆ ಮುನ್ನುಡಿ ಬರೆದ ತಿರುಮಲೆ ತಾತಾಚಾರ್ಯ ಶರ್ಮರು ಭಾರತದ ರಾಷ್ಟ್ರೀಯ ಚಳುವಳಿಯ ಕುರಿತು ಕನ್ನಡದಲ್ಲಿ ಯಾವುದೇ ಪುಸ್ತಕಗಳಿಲ್ಲ. ಆದ್ದರಿಂದ ಕನ್ನಡಿಗರಿಗೆ ಈ ಕೃತಿಯು ವರವಾಗಿದೆ ಎಂದು 1939ರಲ್ಲಿ ಬರೆದ ಮುನ್ನುಡಿಯಲ್ಲಿ ಹೇಳಿದ್ದಾರೆ. ಕನ್ನಡದಲ್ಲಿಯೂ ವಿದ್ವಾಂಸರಾಗಿದ್ದ ಶಾರದಾಪ್ರಸಾದ್ ಅವರು ಕೃತಿಯ ಭಾಷಾಂತರದಲ್ಲೂ ಕನ್ನಡದ ಕಂಪನ್ನು ಉಳಿಸಿಕೊಂಡಿದ್ದಾರೆ. ಗಾಂಧೀಜಿ ಹಾಗೂ ಸ್ವಾತಂತ್ರ್ಯ ಚಳುವಳಿಯ ಕುರಿತು ತಿಳಿಯಬಯಸುವ ಓದುಗರಿಗೆ ಇದೊಂದು ಉತ್ತಮ ಕೃತಿಯಾಗಿದೆ.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಹಾಗೂ ದಿ. ಎಚ್.ವೈ. ಶಾರದಾ ಪ್ರಸಾದ್ ಅವರ ಪುತ್ರ ಪ್ರೊ. ಸಂಜೀವ ಪ್ರಸಾದ್ ಮಾತನಾಡಿದರು. ಸಂಘದ ಕೋಶಾಧಿಕಾರಿ ಡಾ. ವೈ. ಅವನೀಂದ್ರನಾಥ್ ರಾವ್ ಕಾರ್ಯಕ್ರಮ ನಿರೂಪಿಸಿದರು. ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ವಂದಿಸಿದರು. ಅ

*ಅಭಿಮತ ವರದಿ*

ಸಾಹಿತಿ ಸಿದ್ದವನಹಳ್ಳಿ ಕೃಷ್ಣ ಶರ್ಮರು 1939ರಲ್ಲಿ ಕನ್ನಡದಲ್ಲಿ ಬರೆದು ಪ್ರಕಟಿಸಿದ ವಾರ್ಧಾ ಯಾತ್ರೆ ಕೃತಿಯನ್ನು ಕನ್ನಡ ಮತ್ತು ಇಂಗ್ಲಿಷ್‌ಗಳೆರಡರಲ್ಲೂ ವಿದ್ವಾಂಸರಾಗಿದ್ದ ಎಚ್.ವೈ. ಶಾರದಾಪ್ರಸಾದ್ ಅವರು ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯ ಸುದ್ದಿ ಸಂಪಾದಕರಾಗಿದ್ದಾಗ ಕಳೆದ ಶತಮಾನದ ಐವತ್ತರ ದಶಕದ ಆರಂಭದಲ್ಲಿ ಇಂಗ್ಲಿಷ್‌ಗೆ ಅನುವಾದಿಸಿದ್ದರು. ಶಾರದಾಪ್ರಸಾದ್ ಅವರು ಅಮೇರಿಕಾದಲ್ಲಿ ಶಿಕ್ಷಣವೇತನವೊಂದನ್ನು ಪಡೆದರು. ಅದರ ನಂತರ ಅವರಿಗೆ ಭಾರತ ಸರಕಾರದ ಪ್ರಕಾಶನಾ ವಿಭಾಗದಲ್ಲಿ ಕೆಲಸ ದೊರೆಯಿತು. ನಂತರ ಶಾರದಾಪ್ರಸಾದ್ ಅವರು ಪ್ರಧಾನಮಂತ್ರಿ ಇಂದಿರಾಗಾಂಧಿಯವರ ಮಾಧ್ಯಮ ಸಲಹಾಗಾರರಾದರು. ಈ ನಡುವೆ 2008ರಲ್ಲಿ ಅವರ ನಿಧನದ ನಂತರ ಅವರ ಪತ್ನಿ ದಿ. ಕಮಲಮ್ಮನವರು ಇಂಗ್ಲಿಷ್ ಅನುವಾದದ ಈ ಹಸ್ತಪ್ರತಿಯನ್ನು ಹೊರಗೆ ತೆಗೆದರು. ಭಾರತ ಸರಕಾರದ ಮಾಜಿ ಪ್ರಧಾನ ವಾರ್ತಾಧಿಕಾರಿ ಶ್ರೀ ಐ. ರಾಮಮೋಹನ ರಾವ್ ಅವರು ಈ ಕೃತಿಯನ್ನು ಪ್ರಕಟಿಸುವ ಆಲೋಚನೆಯನ್ನು ಮಾಡಿ, ದೆಹಲಿ ಕರ್ನಾಟಕ ಸಂಘಕ್ಕೆ ಒಪ್ಪಿಸಿದರು. ಅ



# ಜೆಎನ್‌ಯುನಲ್ಲಿ ಕನ್ನಡ ಅಧ್ಯಯನ ಪೀಠ ಸ್ಥಾಪನೆಗೆ ಕರ್ನಾಟಕ ಸರಕಾರದಿಂದ ಹಣ ಬಿಡುಗಡೆಗೆ ಆದೇಶ

ದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯ (ಜೆಎನ್‌ಯು)ದಲ್ಲಿ ಕನ್ನಡ ಅಧ್ಯಯನ ಪೀಠ ಸ್ಥಾಪನೆಗೆ ಕರ್ನಾಟಕ ಸರಕಾರದಿಂದ ಹಣ ಬಿಡುಗಡೆಯಿಂದ ದೆಹಲಿ ಕರ್ನಾಟಕ ಸಂಘವು ಮಾಡಿದ ಪ್ರಯತ್ನವು ಸಾರ್ಥಕವಾಗಿದೆ ಎಂದು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಹೇಳಿದರು. ಅವರು ಕನ್ನಡ ಪತ್ರಕರ್ತರನ್ನು ಉದ್ದೇಶಿಸಿ ಸಂಘದಲ್ಲಿ ನವಂಬರ್ 15 ರಂದು ಮಾತಾಡುತ್ತಿದ್ದರು.




ಅಧ್ಯಯನ ಪೀಠ ಸ್ಥಾಪನೆಗೆ ಕರ್ನಾಟಕ ಸರಕಾರವು 45 ಲಕ್ಷ ರೂಪಾಯಿಗಳ ಬಿಡುಗಡೆಗೆ ನೀಡಿರುವ ಆದೇಶವು ಸಂಘವು ಬಹಳ ದಿನಗಳಿಂದ ಮಾಡುತ್ತಿರುವ ಹಲವು ಪ್ರಯತ್ನಗಳಿಗೆ ದೊರೆತ ಫಲವಾಗಿದೆ. ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಮನ್ನಣೆಯ ನಂತರ ರಾಷ್ಟ್ರಮಟ್ಟದಲ್ಲಿ ಕನ್ನಡವನ್ನು ಕನ್ನಡವನ್ನು ಆಳವಾಗಿ ಮತ್ತು ಶೈಕ್ಷಣಿಕವಾಗಿ ಉನ್ನತ ಮಟ್ಟದಲ್ಲಿ ಅಧ್ಯಯನ ಮಾಡಲು ದೊರೆತ ಅಪೂರ್ವವಾದ ಅವಕಾಶವಾಗಿದೆ ಎಂದು ಅವರು ಹೇಳಿದರು.

ದೆಹಲಿ ಕರ್ನಾಟಕ ಸಂಘವು 2013ರಲ್ಲಿ ಜೆಎನ್‌ಯುನಲ್ಲಿ ಕನ್ನಡ ಅಧ್ಯಯನ ಪೀಠ ಸ್ಥಾಪನೆಗಾಗಿ ಒಂದು ಸಮನ್ವಯ ಸಮಿತಿಯನ್ನು ರಚಿಸಿತ್ತು. ಅದರಲ್ಲಿ ಸಂಘದ ಮಾಜೀ ಅಧ್ಯಕ್ಷರುಗಳಾದ ಡಾ.ಪುರುಷೋತ್ತಮ ಬಿಳಿಮಲೆ ಮತ್ತು ಡಾ. ವೆಂಕಟಾಚಲ ಹೆಗಡೆ, ದೆಹಲಿ ವಿಶ್ವವಿದ್ಯಾಲಯದ ನಿವೃತ್ತ ಪ್ರೊಫೆಸರ್ ಡಾ. ಟಿ.ಎಸ್.ಸತ್ಯನಾಥ್, ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ.ನಾಗರಾಜ ಅವರಿದ್ದರು. ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಪಿ.ಸಿ. ಶ್ರೀನಿವಾಸ್ ಅವರು ಸಂಚಾಲಕರಾಗಿದ್ದರು.

ಆರಂಭದಲ್ಲಿ ಈ ಸಮನ್ವಯ ಸಮಿತಿಯು ಜೆಎನ್‌ಯುನಲ್ಲಿ ಕನ್ನಡ ಅಧ್ಯಯನ ಪೀಠ ಸ್ಥಾಪನೆಯ ರಚನೆಗೆ ಬೇಕಾದ ಪ್ರಸ್ತಾವವೊಂದನ್ನು ಜೆಎನ್‌ಯುವಿನ ರೆಕ್ಟರ್ ಡಾ. ಸುಧಾ ಪೈ ಮತ್ತು ಕುಲಪತಿ ಪ್ರೊ. ಸುಧೀರ್ ಅವರಿಗೆ ಸಲ್ಲಿಸಿತ್ತು. ಈ ಪ್ರಸ್ತಾವನೆಯನ್ನು ಪರಿಶೀಲಿಸಿ ಜೆಎನ್‌ಯುನಲ್ಲಿ ಕನ್ನಡ ಅಧ್ಯಯನ ಪೀಠ ಸ್ಥಾಪನೆಗೆ ಬೇಕಾಗುವ ಧನ ಸಹಾಯ ಹಾಗೂ ಮತ್ತಿತರ ಸೌಲಭ್ಯಗಳನ್ನು ಕುರಿತು ಜೆಎನ್‌ಯು ವಿವರವಾದ ವರದಿಯನ್ನು ಮಾಡಿತ್ತು. ಅದನ್ನು ಕರ್ನಾಟಕ ಸರಕಾರಕ್ಕೆ ದೆಹಲಿ ಕರ್ನಾಟಕ ಸಂಘವು ಕಳುಹಿಸಿಕೊಟ್ಟಿತ್ತು. ಸರಕಾರವು ಇದಕ್ಕೆ ಪೂರಕವಾಗಿ ಸ್ಪಂದಿಸಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರನ್ನು ಹೆಚ್ಚಿನ ಮಾತುಕತೆಗಾಗಿ ಕಳೆದ ಅಗಸ್ಟ್ ತಿಂಗಳಿನಲ್ಲಿ ಜೆಎನ್‌ಯು ವಿಗೆ ಕಳುಹಿಸಿಕೊಟ್ಟಿತ್ತು. ನಿರ್ದೇಶಕರು ಜೆಎನ್‌ಯುನಲ್ಲಿ ನಡೆದ ಸಭೆಯ ನಿರ್ಣಯಗಳನ್ನು ಸರಕಾರಕ್ಕೆ ಸಲ್ಲಿಸಿದ್ದರು.

ಈ ನಡುವೆ ದೆಹಲಿ ಕರ್ನಾಟಕ ಸಂಘ ಮತ್ತು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಜಂಟಿಯಾಗಿ ಕರ್ನಾಟಕದ ಕೇಂದ್ರ ಸಚಿವರು, ಸಂಸದರು ಹಾಗೂ ಶ್ರೀಮತಿ ಸೋನಿಯಾ ಗಾಂಧಿ ಇವರಿಗೆ ಹುಲಿ ವೇಷ ನೃತ್ಯದೊಂದಿಗೆ ಕನ್ನಡ ಅಧ್ಯಯನ ಪೀಠವನ್ನು ಕೂಡಲೇ ಪ್ರಾರಂಭಿಸುವಂತೆ ಮನವಿಯನ್ನು ಸಲ್ಲಿಸಿತ್ತು.

ಕಳೆದ ಅಕ್ಟೋಬರ್‌ನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ ಶ್ರೀಮತಿ ಶಾಲಿನಿ ರಜನೀಶ್ ಅವರು ಈ ಸಂಬಂಧ ದೆಹಲಿ ಕರ್ನಾಟಕ ಸಂಘದಲ್ಲಿ ನಡೆಸಿದ ಸಭೆಯ ನಂತರದ ಫಲಶೃತಿಯಾಗಿ ಪೀಠ ಸ್ಥಾಪನೆಗೆ 43 ಲಕ್ಷ ರೂಪಾಯಿಗಳ ಬಿಡುಗಡೆ ಮಾಡಿ ಕರ್ನಾಟಕ ಸರ್ಕಾರ ಆದೇಶ ನೀಡಿದೆ.

ಜೆಎನ್‌ಯುವಿನಲ್ಲಿ ಕನ್ನಡ ಅಧ್ಯಯನ ಪೀಠ ಸ್ಥಾಪನೆಯಿಂದ ಕನ್ನಡದಲ್ಲಿ ಉನ್ನತ ಶಿಕ್ಷಣದಲ್ಲಿ, ಸಂಶೋಧನೆಯಲ್ಲಿ ಮತ್ತು ಇತರ ಭಾಷಿಕರಿಗೆ ಕನ್ನಡದ ಕುರಿತು ಆಸಕ್ತಿ ಮೂಡಲು ಬಹಳಷ್ಟು ಸಾಧ್ಯತೆಗಳಿವೆ. ಜೆಎನ್‌ಯುನಂತಹ ಪ್ರತಿಷ್ಠಿತ ವಿಶ್ವವಿದ್ಯಾಲಯದಲ್ಲಿ ಈ ಪೀಠದ ಮೂಲಕ ಕನ್ನಡದ ಕುರಿತು ನಡೆಯುವ ಅಧ್ಯಯನಗಳು ಕನ್ನಡಕ್ಕೆ ರಾಷ್ಟ್ರಮಟ್ಟದಲ್ಲಿ ಮಾತ್ರವಲ್ಲ ಅಂತಾರಾಷ್ಟ್ರ ಮಟ್ಟದಲ್ಲೂ ಅಪಾರವಾದ ಆಸಕ್ತಿಯನ್ನು ಮೂಡಿಸಿ ಕನ್ನಡದ ಬೆಳವಣಿಗೆಗೆ ಬಹಳಷ್ಟು ಸಹಕಾರಿಯಾಗಲಿವೆ.

ಕರ್ನಾಟಕದಲ್ಲಿಯೇ ಕನ್ನಡವು ನೆಲೆ ತಪ್ಪುತ್ತಿರುವ ಇಂದಿನ ಸಂದರ್ಭದಲ್ಲಿ ಇಂಥ ಕೇಂದ್ರಗಳು ಕನ್ನಡ ಓದುವ ಮಕ್ಕಳ ಆತ್ಮ ವಿಶ್ವಾಸವನ್ನು ಹೆಚ್ಚಿಸುತ್ತದೆ. ಕನ್ನಡಕ್ಕೆ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಅಸ್ತಿತ್ವ ಇದೆ ಎಂಬುದನ್ನು ನಾವು ಸಾಬೀತು ಪಡಿಸದೇ ಹೋದರೆ, ಕನ್ನಡ ಕಲಿಯಲು ಈ ಕಾಲದ ಮಕ್ಕಳು ಮುಂದೆ ಬರುವುದಿಲ್ಲ.



*ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವೆ ಶ್ರೀಮತಿ ಉಮಾಶ್ರೀ ಮತ್ತು ಸರ್ಕಾರದ ಪ್ರಧಾನ ಕಾರ್ಯದರ್ಶಿ ಶ್ರೀಮತಿ ಶಾಲಿನಿ ರಜನೀಶ್ ಅವರನ್ನು 27 ನವೆಂಬರ್ 2014ರಂದು ಕರ್ನಾಟಕ ಭವನದಲ್ಲಿ ಭೇಟಿ ಮಾಡಿ ಜೆ.ಎನ್.ಯು. ಅಧ್ಯಯನ ಪೀಠ ಸ್ಥಾಪಿಸಲು ಹಣ ಬಿಡುಗಡೆ ಮಾಡಿದ್ದಕ್ಕೆ ಅಭಿನಂದನೆಯನ್ನು ಸಲ್ಲಿಸಲಾಯಿತು.*

ರಾಜ್ಯದ ಸಮಸ್ಯೆಗಳನ್ನು ಲೋಕಸಭೆಯಲ್ಲಿ ಸಮರ್ಥವಾಗಿ ಮಂಡಿಸಿ, ಕೇಂದ್ರ ಸರಕಾರವನ್ನು ಹೇಗೋ ಹಾಗೆ, ಇತರ ಭಾಷಿಕ ಸಂಸದರನ್ನು ತನ್ನೆಡೆಗೆ ಆಕರ್ಷಿಸುವಂತ ಪ್ರತಿಭಾವಂತ ಸಂಸದರಿಗೆ ರಾಜ್ಯ, ರಾಷ್ಟ್ರ, ಭಾಷೆ, ಅಭಿವೃದ್ಧಿ, ಆಧುನಿಕ ತಂತ್ರಜ್ಞಾನ ಮತ್ತಿತರ ವಿಷಯಗಳ ಬಗೆಗೆ ಮಾಹಿತಿ ನೀಡುವ ಕೇಂದ್ರವಾಗಿ ಜೆಎನ್‌ಯು ಕನ್ನಡ ಅಧ್ಯಯನ ಕೇಂದ್ರ ಕೆಲಸ ಮಾಡುತ್ತದೆ. ಜೆಎನ್‌ಯುವಿನ ಅಧ್ಯಯನ ವಿಭಾಗಗಳು ತುಂಬಾ ಮುಕ್ತವಾಗಿರುವುದರಿಂದ ಅಲ್ಲಿ ಇಂಥ ಅನೇಕ ಕೆಲಸಗಳನ್ನು ಮಾಡಲು ಸಾಧ್ಯ.

ನಮ್ಮ ದೇಶದ ಇತರ ರಾಜ್ಯಗಳ ಜೊತೆಗೆ, ಮತ್ತು ಜಗತ್ತಿನ ಹಲವು ದೇಶಗಳ ಜೊತೆಗೆ ಒಂದು ಬಗೆಯ ಬೌದ್ಧಿಕ ಅನುಸಂಧಾನ ಏರ್ಪಡಬೇಕಾದ್ದು ಕರ್ನಾಟಕದ ಇಂದಿನ ಅಗತ್ಯಗಳಲ್ಲೊಂದು. ಜೆಎನ್‌ಯು ಅಂತಾರಾಷ್ಟ್ರೀಯ ಮಟ್ಟದ ವಿಶ್ವವಿದ್ಯಾಲಯವಾದ್ದರಿಂದ ಈ ಬಗೆಯ ಅನುಸಂಧಾನ ಅಲ್ಲಿ ಸುಲಭವಾಗಿ ಸಾಧ್ಯವಾಗುತ್ತದೆ. ಈಗ ಇಲ್ಲಿ ಸುಮಾರು 40 ದೇಶಗಳ ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದಾರೆ. ಕನ್ನಡ ಅಧ್ಯಯನ ಕೇಂದ್ರ ಆರಂಭವಾದರೆ ಕನ್ನಡದ ಕಂಪು ಬೇರೆ ದೇಶಗಳಲ್ಲಿ ಹರಡಲು ಸಾಧ್ಯ. ಕನ್ನಡ ಭಾಷೆಯ ಸೃಜನಶೀಲ ನೆಲೆಗಳನ್ನು ಜಗತ್ತಿಗೆ ಪರಿಚಯಿಸುವ ಕೆಲಸ ತುರ್ತಾಗಿ ಆಗಬೇಕು. ಈ ವಿಷಯದಲ್ಲಿ ಬಾಂಗ್ಲಾ, ಹಿಂದಿ ಮತ್ತು ತಮಿಳು ಭಾಷೆಗಳು ನಮ್ಮಿಂದ ಒಂದು ಶತಮಾನದಷ್ಟು ಮುಂದಿವೆ. ಅ

***ಅಭಿಮತ ವರದಿ***

# ಕನ್ನಡಿಗರು ಪ್ರತ್ಯೇಕತೆಯ ಕೂಗನ್ನು ನಿರ್ಲಕ್ಷಿಸಬೇಕು ಸಂಘದಲ್ಲಿ ಅಪ್ಪಾಜಿ ನಾಡಗೌಡ ಕರೆ




"ಕರ್ನಾಟಕ ಯಾವಾಗಲೂ ನದಿಗಳ ವಿಚಾರದಲ್ಲಿ ವ್ಯಾಜ್ಯಗಳಲ್ಲಿ ಸಿಲುಕಿರುವುದು ದುರದೃಷ್ಟಕರ. ಬೆಳಗಾವಿಯ ವಿಚಾರವಾಗಿ ಕನ್ನಡದವರು ಎಂದಿಗೂ ನಿರಾಶಾವಾದಿಗಳಲ್ಲ. ಉಗ್ರ ಚಳುವಳಿಗಳಲ್ಲಿ ತೊಡಗುವುದಿಲ್ಲ ಎಂಬುದು ತಪ್ಪು, ಕನ್ನಡಿಗರು ಎಲ್ಲಾ ಸಮಸ್ಯೆಗಳ ಬಗ್ಗೆ ವಿರೋಧ ವ್ಯಕ್ತಪಡಿಸುವಾಗ ಜಾಣತನ ಪ್ರದರ್ಶನ ಮಾಡಿದ್ದಾರೆ. ಕರ್ನಾಟಕದ ಎಲ್ಲಾ ಭಾಷೆಗಳಿಗೂ ಮನ್ನಣೆ ಸಿಗಬೇಕು. ಯಾವುದೇ ಭಾಷೆ ನಶಿಸದ ಹಾಗೆ ನಾವು ಗೌರವಿಸಬೇಕು ಹಾಗೆಯೇ ಭಾಷೆಯನ್ನೇ ಮೂಲವಾಗಿಟ್ಟುಕೊಂಡು ಪ್ರತ್ಯೇಕತೆಯ ವಿಚಾರ ಮಾಡುವುದು ಸರಿಯಲ್ಲ" ಎಂದು ಕರ್ನಾಟಕ ಸರ್ಕಾರದ ದೆಹಲಿಯ ವಿಶೇಷ ಪ್ರತಿನಿಧಿ ಶ್ರೀ ಅಪ್ಪಾಜಿ ನಾಡಗೌಡರು ದೆಹಲಿ ಕರ್ನಾಟಕ ಸಂಘವು ಏರ್ಪಡಿಸಿದ ಏಕೀಕೃತ ಕರ್ನಾಟಕ–ಹೊಸ ಸವಾಲುಗಳು ಎಂಬ ವಿಷಯದ ಮೇಲೆ ಮಾತನಾಡುತ್ತ ಹೇಳಿದರು.

ಇಡೀ ಜಗತ್ತು ವೈಶ್ವೀಕರಣದತ್ತ ದಾಪುಗಾಲು ಹಾಕುತ್ತಿರುವ 21ನೆಯ ಶತಮಾನದಲ್ಲಿ ಪ್ರತ್ಯೇಕತೆ, ವಿಭಜನೆಯ ವಿಚಾರವಾಗಿ ಮಾತನಾಡುವುದು ಮೂರ್ಖತನ, ನಾವೆಲ್ಲಾ ಒಗ್ಗಟ್ಟಾಗಿ ಮುಂದುವರಿದು ಅಭಿವೃದ್ಧಿಯತ್ತ ಸಾಗಿದಾಗ ಮಾತ್ರ ನಾವು ಸರ್ವತೋಮುಖವಾಗಿ ಏಳಿಗೆಯಾಗಲು ಸಾಧ್ಯ. ಮೈಸೂರು ರಾಜಮನೆತನದ ಅರಸರ ಕಾಲದಲ್ಲಿ ನೀರಾವರಿ, ಶೈಕ್ಷಣಿಕ ಸಂಸ್ಥೆಗಳು, ಕೈಗಾರಿಕೆಗಳು ಮುಂತಾದ ಅಭಿವೃದ್ಧಿ ಕಾರ್ಯಕ್ರಮಗಳು ಹಳೆಯ ಮೈಸೂರು ಭಾಗಕ್ಕೆ ಸೀಮಿತವಾಗಿರಿಸಿದ್ದರಿಂದ ಉತ್ತರ ಕರ್ನಾಟಕದ ಭಾಗ ಪ್ರಾದೇಶಿಕ ಅಸಮಾನತೆಗೊಳಗಾಗಿತ್ತು. ಕರ್ನಾಟಕದ ಮೊದಲ ಮುಖ್ಯಮಂತ್ರಿಯಾದ ಶ್ರೀ ಕೆ.ಸಿ. ರೆಡ್ಡಿಯವರು ಕರ್ನಾಟಕದಲ್ಲಿ ಔದ್ಯೋಗಿಕರಣಕ್ಕೆ, ದಲಿತರ ಮತ್ತು ರೈತರ ಏಳಿಗೆಗೆ ಬಹಳಷ್ಟು ಕೊಡುಗೆ ನೀಡಿದ್ದನ್ನು ಸ್ಮರಿಸಿದರು. ಆದರೆ ಪರಿಸ್ಥಿತಿ ಈಗ ಹಾಗಿಲ್ಲ. ಕರ್ನಾಟಕ ಸರ್ಕಾರ ಪ್ರೊ. ನಂಜುಂಡಪ್ಪನವರ ವರದಿಯಂತೆ ಒಣಗಾಡು ಪ್ರದೇಶಗಳಿಗೆ ನೀರಾವರಿ, ಸೌರವ್ಯವಸ್ಥೆ, ಮಾಹಿತಿ ತಂತ್ರಜ್ಞಾನ, ಶೈಕ್ಷಣಿಕ ಸಂಸ್ಥೆಗಳು, ಕೈಗಾರಿಕೆಗಳು, ತೋಟಗಾರಿಕೆ, ವಿಶ್ವವಿದ್ಯಾನಿಲಯಗಳು, ವಿಮಾನ ನಿಲ್ದಾಣಗಳನ್ನು ಮೇಲ್ದರ್ಜೆಗೇರಿಸುವುದು ಮುಂತಾದ ಸರ್ಕಾರದ ಮುಖ್ಯ ಅಭಿವೃದ್ಧಿ ಕಾರ್ಯಕ್ರಮಗಳ ಮೂಲಕ ಪ್ರಾದೇಶಿಕ ಅಸಮಾನತೆಯನ್ನು ಹೋಗಲಾಡಿಸಲು ಕಟಿಬದ್ಧವಾಗಿ ಕೆಲಸ ಮಾಡುತ್ತದೆ. ಕರ್ನಾಟಕದಲ್ಲಿ ನೈಸರ್ಗಿಕ ಸಂಪನ್ಮೂಲಗಳ ಕೊರತೆಯುಂಟಾಗದಂತೆ ಸರಿದೂಗಿಸುವ ಕೆಲಸವನ್ನು, ಉತ್ತರ ಕರ್ನಾಟಕ ಭಾಗದ ರೈತರಿಗೆ ವ್ಯವಸಾಯಕ್ಕೆ ಅನುಕೂಲಕ್ಕೋಸ್ಕರ ಹೆಚ್ಚು ವಿದ್ಯುತ್ ಸರಬರಾಜು ವ್ಯವಸ್ಥೆಯನ್ನು ಸರ್ಕಾರ ಮಾಡುತ್ತಿದೆ. ಹೀಗಾಗಿ ಕರ್ನಾಟಕದ ಎಲ್ಲ ಭಾಗದ ಜನರು ಮತ್ತು ಭಾಷಿಗರು ಪ್ರತ್ಯೇಕತೆಯ ಕೂಗನ್ನು ನಿರ್ಲಕ್ಷಿಸಬೇಕೆಂದು ಶ್ರೀ ನಾಡಗೌಡರು ಕರೆ ನೀಡಿದರು.

ಸುಪ್ರಿಂಕೋರ್ಟಿನ ನ್ಯಾಯವಾದಿಗಳಾದ ಶ್ರೀ ಸಿ.ಎಂ. ಅಂಗಡಿ ಮಾತನಾಡಿ ನಾವು ಕನ್ನಡಿಗರು ಹೊರನಾಡಿನಲ್ಲಿದ್ದುಕೊಂಡು ಕರ್ನಾಟಕ ಮತ್ತು ಕನ್ನಡದ ಬಗ್ಗೆ ಕಾಳಜಿ ಹೊಂದಿ ಈ ರೀತಿಯ ಕಾರ್ಯಕ್ರಮಗಳನ್ನು ನಡೆಸುತ್ತಿರುವುದು ಸಂತೋಷದ ಸಂಗತಿ. ನಮ್ಮ ಹಿರಿಯರು ಸುಂದರವಾದ ಚೆಲುವ ಕನ್ನಡ ನಾಡನ್ನು ಕಟ್ಟಿಕೊಟ್ಟಿದ್ದಾರೆ. ಆದರೆ ಇತ್ತೀಚಿನ ಕೆಲವು ಘಟನೆಗಳು ಆಘಾತವನ್ನುಂಟು ಮಾಡಿದೆ. ತಮ್ಮ ಸ್ವಾರ್ಥ ಸಾಧನೆಗಾಗಿ ಕೆಲವು ರಾಜಕೀಯ ವ್ಯಕ್ತಿಗಳು ಜನರನ್ನು ಪ್ರಚೋದಿಸುವ ಕಾರ್ಯದಲ್ಲಿ ತೊಡಗಿದ್ದಾರೆ. ಇದಕ್ಕೆ ಜನರು ಹೆಚ್ಚು ಒತ್ತು ಕೊಡಬಾರದು, ಯಾವ ಭಾಗದ ಜನರಿಗೆ ಯಾವುದೇ ಸಮಸ್ಯೆ ಇದ್ದರೂ ಪರಸ್ಪರ ಮಾತುಕತೆಯ ಮೂಲಕ ಪರಿಹಾರ ಕಂಡುಕೊಳ್ಳಬೇಕೇ ಹೊರತು ವಿಭಜನೆಯೇ ಪರಿಹಾರ ಅಲ್ಲ ಎಂದು ತಮ್ಮ ಅಭಿಪ್ರಾಯವನ್ನು ತಿಳಿಸಿದರು.

ಜೆ.ಎಸ್.ಎಸ್. ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಡಾ. ಟಿ.ಎನ್. ನಾಗಭೂಷಣ ಅವರು ಮಾತನಾಡುತ್ತ ಎಲ್ಲ ಆಯಾಮಗಳಿಂದ ನೋಡಿದರೆ, ಕರ್ನಾಟಕ ಒಂದು ಶ್ರೀಮಂತ ರಾಜ್ಯ. ಅನೇಕ ಕವಿಗಳು, ಚಿಂತಕರು, ಬರಹಗಾರರು, ರಾಜಕೀಯ ನೇತಾರರು, ರಾಜರು ತಮ್ಮ ಪರಿಶ್ರಮ ಮತ್ತು ಕಾಳಜಿಯಿಂದ ಏಕೀಕೃತ ಕರ್ನಾಟಕವನ್ನು ನಮಗೆ ಕಟ್ಟಿಕೊಟ್ಟಿದ್ದಾರೆ. ಆ ಚೆಲುವಿನ ನಾಡನ್ನು ಒಡೆಯದ ಹಾಗೆ ಅಭಿವೃದ್ಧಿ ಪಥದಲ್ಲಿ ಕೊಂಡೊಯ್ಯುವ ಜವಾಬ್ದಾರಿ ನಮ್ಮ ಮತ್ತು ನಮ್ಮ ಮುಂದಿನ ತಲೆಮಾರಿನ ಮೇಲಿದೆ. ವಿಶೇಷವಾಗಿ ಬೋಧಕ ವರ್ಗ, ವಿದ್ಯಾರ್ಥಿಗಳಲ್ಲಿ ಏಕೀಕರಣಕ್ಕಾಗಿ ನಡೆದ ಹೋರಾಟ, ತ್ಯಾಗ, ಬಲಿದಾನಗಳ ಬಗ್ಗೆ ಅರಿವು ಮೂಡಿಸುವುದರ ಜೊತೆಜೊತೆಗೆ ಒಗ್ಗಟ್ಟಿನಲ್ಲಿ ಬಲವಿರುವ ಮಂತ್ರವನ್ನು ಮಕ್ಕಳ ಮನಸ್ಸಿನಲ್ಲಿ ಬೇರೂರಿಸಬೇಕು ಎಂದರು.

ಸಂವಾದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಏಕೀಕೃತ ಕರ್ನಾಟಕದಲ್ಲಿ ಇಂದು ನಮ್ಮ ಮುಂದೆ ಹಲವು ಹೊಸ ಸವಾಲುಗಳು ಹುಟ್ಟಿಕೊಂಡಿವೆ. ಬೆಳಗಾಂನಲ್ಲಿ ಸಮಸ್ಯೆ ಆದಾಗ ನಾವು ಅದನ್ನು ಖಂಡಿಸಿ ಹೋರಾಟಕ್ಕಿಳಿಯುತ್ತೇವೆ. ಆದರೆ ಕಾಸರಗೋಡಿನಲ್ಲಿ ನಮ್ಮ ಕನ್ನಡಿಗರು ಚಕಾರ ಎತ್ತಿದಾಗ, ಅದನ್ನು ನಾವು ಸಮರ್ಥಿಸುತ್ತೇವೆ. ಏಕೆ ಈ ವಿರೋಧಾಬಾಸ? ಹಾಗೆಯೇ ಕೊಡಗಿನವರು ಯಾವಾಗಲೂ ನಮಗೆ ಪ್ರತ್ಯೇಕರಾಜ್ಯ ಬೇಕು ಎಂಬ ಹೋರಾಟವನ್ನು ನಡೆಸುತ್ತಲೇ ಬಂದಿದ್ದಾರೆ ಮತ್ತು ಪಂಚದ್ರಾವಿಡ ಭಾಷೆಗಳಾದ ಕನ್ನಡ, ತೆಲುಗು, ತಮಿಳು, ಮಲಯಾಳಂಗಳಿಗೆ ಪ್ರತ್ಯೇಕ ರಾಜ್ಯಗಳಿವೆ. ಆದರೆ ತುಳು ಕೂಡಾ ಒಂದು ಪಂಚದ್ರಾವಿಡ ಭಾಷೆ, ಅದಕ್ಕೆ ಪ್ರತ್ಯೇಕ ರಾಜ್ಯವಿಲ್ಲ ಎಂಬ ಬೇಡಿಕೆಯ ಬಗ್ಗೆ ಈಗಾಗಲೇ ಕೆಲವರು ಧ್ವನಿ ಎತ್ತಿದ್ದಾರೆ. ಆದರೆ ಬಹುತೇಕ ತುಳುವರು ಮತ್ತು ಕೊಡವರು ಕನ್ನಡವನ್ನು ಪ್ರೀತಿಸಿ ಗೌರವಿಸುತ್ತಾರೆ, ಅಲ್ಲದೆ ಇಂತಹ ಬೇಡಿಕೆಗಳನ್ನು ವಿರೋಧಿಸುತ್ತಾರೆ. ಆದರೆ ಕೊಡವರು ಮತ್ತು ತುಳುವರು ತಮ್ಮ ಭಾಷೆಯನ್ನು ರಾಜ್ಯದ ಅಧಿಕೃತ ಭಾಷೆಯನ್ನಾಗಿಸಬೇಕೆನ್ನುವ ಬೇಡಿಕೆಯನ್ನಿಟ್ಟಿದ್ದಾರೆ. ಇಂತಹ ಸಾಮಾನ್ಯ ಬೇಡಿಕೆಯನ್ನು ಸರಕಾರ ಪರಿಗಣಿಸದೇ ಹೋದರೆ ಮುಂದಿನ ದಿನಗಳಲ್ಲಿ ಇಂತಹ ಬೇಡಿಕೆಗಳು ಚಳುವಳಿಗಳಾಗಿ ಮಾರ್ಪಾಡಗಬಹುದಾದ ಸಾಧ್ಯತೆಗಳಿದೆ ಎಂದರು.

ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ಪಿ.ಸಿ. ಶ್ರೀನಿವಾಸ ಅವರು ಕಾರ್ಯಕ್ರಮ ನಿರೂಪಿಸಿದರು. ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ವಂದನಾರ್ಪಣೆ ಸಲ್ಲಿಸಿದರು. ಅ

*ಪಿ.ಸಿ. ಶ್ರೀನಿವಾಸ*

# ಪ್ರಸಾರ ಭಾರತಿಯ ಅಧ್ಯಕ್ಷ ಎ. ಸೂರ್ಯಪ್ರಕಾಶ್ ಅವರಿಗೆ ಅಭಿನಂದನೆ



ಪ್ರಸಾರ ಭಾರತಿಯ ನೂತನ ಅಧ್ಯಕ್ಷರಾಗಿ ಆಯ್ಕೆಗೊಂಡ ಪತ್ರಕರ್ತ ಅರಕಲಗೂಡು ಸೂರ್ಯಪ್ರಕಾಶ್ ಅವರನ್ನು ದೆಹಲಿ ಕರ್ನಾಟಕ ಸಂಘದಲ್ಲಿ ಇದೇ ನವಂಬರ್ 30ರಂದು ನಡೆದ ಸಮಾರಂಭವೊಂದರಲ್ಲಿ ಅಭಿನಂದಿಸಲಾಯಿತು. ಸುಪ್ರೀಂ ಕೋರ್ಟಿನ ಹಿರಿಯ ಅಡ್ವಕೇಟ್ ಶ್ರೀ ಶರತ್ ಎಸ್. ಜವಳಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಸೂರ್ಯಪ್ರಕಾಶ್ ಅವರನ್ನು ಸನ್ಮಾನಿಸಿದರು. ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಮತ್ತು ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ್ ಅವರು ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಮಾತಾಡುತ್ತಾ ಶ್ರೀ ಸೂರ್ಯಪ್ರಕಾಶ್ ಅವರು ಕರ್ನಾಟಕದಿಂದ ದೆಹಲಿಗೆ ಬಂದು ನೆಲೆಸುವವರ ಸಂಖ್ಯೆಯು ಕಳೆದ ಮೂರು ದಶಕಗಳಿಂದ ಕ್ರಮೇಣ ಹೆಚ್ಚಾಗುತ್ತಿದೆ. ಹಿಂದೆ ಮಾಧ್ಯಮ ಕ್ಷೇತ್ರದಲ್ಲಿ ಕೇವಲ ಬೆರಳೆಣಿಕೆಯ ಕನ್ನಡಿಗರಿದ್ದರೆ, ಇಂದು ಸುಮಾರು ಐವತ್ತರಷ್ಟು ಕನ್ನಡಿಗರು ಪತ್ರಿಕೆ ಮತ್ತು ಟಿವಿ ಚಾನೆಲ್ ಮಾಧ್ಯಮಗಳಲ್ಲಿ ದೆಹಲಿಯಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ನುಡಿದರು. ಅದೇ ರೀತಿ ಐಟಿ ಕ್ಷೇತ್ರದಲ್ಲಿ ಕೂಡಾ ಬಹಳಷ್ಟು ಜನರು ದೆಹಲಿ ಮತ್ತು ಗುರ್‌ಗಾಂವ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ಅವರು ಹೇಳಿದರು. ಐಟಿ ಕ್ಷೇತ್ರವು ಬೆಂಗಳೂರಿನಿಂದ ಗುರ್‌ಗಾಂವ್‌ವರೆಗೆ ಇಂದು ಬೆಳೆದಿದೆ ಎಂದು ಅವರು ನುಡಿದರು.

ಕರ್ನಾಟಕದಿಂದ ಹೊರಬಂದ ಸರಳ ಮತ್ತು ಸ್ನೇಹಶೀಲ ಜೀವನ ನಡೆಸುವ ಕನ್ನಡಿಗರನ್ನು ದೆಹಲಿಯಲ್ಲಿ ಇತರ ಭಾಷಿಕರು ಗೋಳು ಹೊಯ್ಯುವಾಗ, ನಾವು ದೆಹಲಿಯು ನಮಗೂ ಎರಡನೆ ಮನೆಯಿದ್ದಂತೆ, ಇದು ನಮ್ಮದೂ ರಾಜಧಾನಿ. ಇಲ್ಲಿ ಎಲ್ಲರಿಗೂ ಸಮಾನ ಅವಕಾಶವಿದೆ ಎಂದು ಮನವರಿಕೆಮಾಡಬೇಕು ಎಂದು ಶ್ರೀ ಸೂರ್ಯ ಪ್ರಕಾಶ್ ಅವರು ನುಡಿದರು.

ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಪಿ.ಸಿ. ಶ್ರೀನಿವಾಸ್ ಅವರು ಶ್ರೀ ಸೂರ್ಯ ಪ್ರಕಾಶ್ ಅವರ ಪರಿಚಯ ಮಾಡಿ ಸ್ವಾಗತಿಸಿದರು. ಅ

***ಅಭಿಮತ ವರದಿ***

# ಬಹುಮಾನ ವಿತರಣಾ ಸಮಾರಂಭದಲ್ಲಿ ಸಿಆರ್‌ಪಿಎಫ್ ಸ್ಪೆಶಲ್ ಡ್ಯೂಟಿ ಗ್ರೂಪ್‌ನ ಕಮಾಂಡೆಂಟ್ ಶ್ರೀ ಪ್ರಭಾಕರ್ ತ್ರಿಪಾಠಿ



ದೆಹಲಿ ಕರ್ನಾಟಕ ಸಂಘದ ವಾರ್ಷಿಕ ಆಟೋಟ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳ ಬಹುಮಾನ ವಿತರಣಾ ಸಮಾರಂಭದ ಮುಖ್ಯ ಅತಿಥಿಯಾಗಿ ಕೇಂದ್ರ ಮೀಸಲು ಪೊಲೀಸ್ ಪಡೆಯ ಸ್ಪೆಶಲ್ ಡ್ಯೂಟಿ ಗ್ರೂಪ್‌ನ ಕಮಾಂಡೆಂಟ್ ಶ್ರೀ ಪ್ರಭಾಕರ್ ತ್ರಿಪಾಠಿ ಅವರು ಆಗಮಿಸಿದ್ದರು.

ಕಳೆದ ಎರಡು ವರ್ಷಗಳಿಂದ ದೆಹಲಿ ಕರ್ನಾಟಕ ಸಂಘವು ವಾರ್ಷಿಕ ಆಟೋಟಗಳನ್ನು ಮತ್ತು ಅಂಬಿಕೇಶ್ ಮೆಮೋರಿಯಲ್ ಕ್ರಿಕೆಟ್ ಟೂರ್ನಮೆಂಟ್ ಅನ್ನು ಕೇಂದ್ರ ಮೀಸಲು ಪೊಲೀಸ್ ಪಡೆಯ ಕ್ರೀಡಾಂಗಣವಾದ ಹಳೇ ಜೆಎನ್‌ಯು ಕ್ಯಾಂಪಸ್‌ನಲ್ಲಿ ನಡೆಸಲು ಅವರು ಸಹಕರಿಸಿದ್ದರು.

ಕ್ರೀಡಾಂಗಣದಲ್ಲಿರುವ ಬ್ಯಾಡ್‌ಮಿಂಟನ್ ಹಾಲ್, ಫುಟ್ಬಾಲ್ ಗ್ರೌಂಡ್, ಇತ್ಯಾದಿ ಸವಲತ್ತುಗಳನ್ನು ದೆಹಲಿ ಕರ್ನಾಟಕ ಸಂಘವು ಉಪಯೋಗಿಸುವುದರಲ್ಲಿ ನಮಗೆ ಹೆಮ್ಮೆಯಿದೆ. ಯಾಕೆಂದರೆ ಕೇಂದ್ರ ಮೀಸಲು ಪೊಲೀಸ್ ಪಡೆಯಲ್ಲಿ ಬಹಳಷ್ಟು ಕರ್ನಾಟಕದ ಮೂಲದ ಸಿಬಂದಿಗಳೂ ಇದ್ದಾರೆ ಎಂದು ಅವರು ಹೇಳಿದರು.

ಆಟೋಟ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತರಾದವರಿಗೆ ಬಹುಮಾನ ವಿತರಣೆಯ ಕಾರ್ಯಕ್ರಮವನ್ನು ಕಾರ್ಯಕಾರಿ ಸಮಿತಿಯ ಸದಸ್ಯ ಶ್ರೀ ಟಿ.ಪಿ. ಬೆಳ್ಳಿಯಪ್ಪ ಅವರು ನಡೆಸಿಕೊಟ್ಟರು. ಸ್ಪರ್ಧೆಗಳಲ್ಲಿ ವಿಜೇತರಾದವರೆಲ್ಲರಿಗೂ ಗಣ್ಯರು ಬಹುಮಾನ ವಿತರಿಸಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ್ ಅವರು ಶ್ರೀ ಪ್ರಭಾಕರ್ ತ್ರಿಪಾಠಿ ಅವರಿಗೆ ಹೂಗುಚ್ಛ ಮತ್ತು ಸಂಘದ ಸ್ಮರಣಿಕೆ ನೀಡಿ ಗೌರವಿಸಿದರು. ಕಾರ್ಯಕ್ರಮದ ಆರಂಭದಲ್ಲಿ ಸಂಘದ ಸದಸ್ಯರು ನಾಡಗೀತೆ ಹಾಡಿದರು. ಅ

***ಅಭಿಮತ ವರದಿ***



ದೆಹಲಿ ಕರ್ನಾಟಕ ಸಂಘ ಪ್ರತಿವರ್ಷ ನೀಡುತ್ತಿರುವ ವಿಶಿಷ್ಟ ಕನ್ನಡಿಗ ಪ್ರಶಸ್ತಿಯನ್ನು ಈ ಬಾರಿ ಮಾಜಿ ವಾರ್ತಾಧಿಕಾರಿ ಶ್ರೀ ಟಿ.ಎಂ. ಶಿರೂರು ಮತ್ತು ಚಿತ್ರಕಲಾವಿದ ಕೆ.ಆರ್. ಸುಬ್ಬಣ್ಣ ಅವರಿಗೆ ಇದೇ ನವಂಬರ್ 30ರಂದು ಸಂಘದ ಸಭಾಂಗಣದಲ್ಲಿ ನಡೆದ ವಿಶೇಷ ಸಮಾರಂಭದಲ್ಲಿ ನೀಡಿ ಗೌರವಿಸಲಾಯಿತು. ಸಮಾರಂಭದ ಅಧ್ಯಕ್ಷತೆಯನ್ನು ಸುಪ್ರೀಂ ಕೋರ್ಟ್‌ನ ಹಿರಿಯ ಅಡ್ವಕೇಟ್ ಶ್ರೀ ಶರತ್ ಎಸ್. ಜವಳಿ ಅವರು ವಹಿಸಿದ್ದರು.

ದೆಹಲಿಯ ಕನ್ನಡಿಗರು ಒಂದೇ ವೇದಿಕೆಯಲ್ಲಿ ಬಂದು ಸೇರಿ ಕನ್ನಡ ಸಂಸ್ಕೃತಿಯನ್ನು ಮೆರೆಸುವಂತಹ ಕೆಲಸ ಮಾಡಲು ಅವಕಾಶ ಮಾಡಿಕೊಡುವ ದೆಹಲಿ ಕರ್ನಾಟಕ ಸಂಘದ ಕೊಡುಗೆ ಅನುಪಮವಾದುದು ಎಂದು ಶ್ರೀ ಜವಳಿ ಅವರು ಈ ಸಂದರ್ಭದಲ್ಲಿ ಮಾತಾಡುತ್ತಾ ನುಡಿದರು. ತಮ್ಮ ಪ್ರತಿಭೆಗಳಿಂದ ಸಾಧನೆ ಮಾಡಿದವರನ್ನು ಮತ್ತು ತಮ್ಮ ಕ್ಷೇತ್ರಗಳಲ್ಲಿ ಉನ್ನತ ಸ್ಥಾನಗಳನ್ನು ಪಡೆದ ಕನ್ನಡಿಗರನ್ನು ಪುರಸ್ಕರಿಸುವ ಕೆಲಸ ಬಹಳ ಸ್ಫೂರ್ತಿದಾಯಕವಾದುದು ಎಂದು ಅವರು ಹೇಳಿದರು. 50 ವರ್ಷಗಳ ಹಿಂದೆ ದೆಹಲಿಯಲ್ಲಿ ಕನ್ನಡಿಗರ ಸಂಖ್ಯೆ ಕಡಿಮೆಯಿದ್ದು ಆಗ ನಾವೆಲ್ಲ ದಾರಿಯಲ್ಲಿ ಸಿಕ್ಕಿದ ಕನ್ನಡಿಗರನ್ನೆಲ್ಲಾ ಮಾತಾಡಿ ಅವರ ಜತೆ ಗೆಳೆತನ ಎಂದು ಕನ್ನಡಿಗರ ಒಳ್ಳೆಯ ಮನಸ್ಸನ್ನು ಶ್ಲಾಘಿಸಿದರು.

ವಿಶಿಷ್ಟ ಕನ್ನಡಿಗ ಪ್ರಶಸ್ತಿ ಪಡೆದ ಕೆ.ಆರ್. ಸುಬ್ಬಣ್ಣ ಅವರು ಮಾತಾಡುತ್ತಾ 1978ರಲ್ಲಿ ದೆಹಲಿಗೆ ಬಂದ ಅವರು ದೆಹಲಿ ಕನ್ನಡ ಶಾಲೆಯಲ್ಲಿ ಚಿತ್ರಕಲಾ ಶಿಕ್ಷಕರಾಗಿ ಬಂದರೂ ತಾನು ಕಲಾವಿದನಾಗಿ ಬೆಳೆಯಲು ದೆಹಲಿಯಲ್ಲಿ ಬಹಳಷ್ಟು ಅವಕಾಶಗಳಿರುವುದನ್ನು ಕಂಡು ದೆಹಲಿಯ ಕನ್ನಡಿಗನಾಗಿಯೇ ಉಳಿದೆ ಎಂದರು. ಆರಂಭದಲ್ಲಿ ಎಚ್. ಎಸ್. ಕುಲಕರ್ಣಿ, ಗಿರೀಶ್ ಕಾರ್ನಾಡ್, ಬಿ.ವಿ. ಕಾರಂತ, ಎಂ.ಎಸ್. ಸತ್ಯು ಮೊದಲಾದವರ ಜತೆ ನಾಟಕಗಳಲ್ಲಿ ಭಾಗವಹಿಸಿದರೂ ನಂತರ ತನ್ನ ಚಿತ್ರಕಲೆಯ ಅಭಿರುಚಿಯನ್ನು ಇನ್ನೂ ಬೆಳೆಸಲು ತಾನು ಲಲಿತ ಕಲಾ ಅಕಾಡೆಮಿಯ ಶಿಬಿರಕ್ಕೆ ಸೇರಿದೆ ಎಂದು ಅವರು ಹೇಳಿದರು. ಶಿಬಿರಕ್ಕೆ ಸೇರಿದ ಎರಡೇ ವರ್ಷಗಳಲ್ಲಿ ತನಗೆ ಕರ್ನಾಟಕ ಲಲಿತ ಕಲಾ ಅಕಾಡೆಮಿಯ ಪ್ರಶಸ್ತಿ ದೊರೆಯಿತು. ಆ ನಂತರ ಆರು ವರ್ಷಗಳಲ್ಲಿ ಕೇಂದ್ರದ ಲಲಿತ ಕಲಾ ಅಕಾಡೆಮಿ ಪ್ರಶಸ್ತಿ ಬಂತು. ಅದರ ನಂತರ ಹಿಂದುರುಗಿ ನೋಡಲೇ ಇಲ್ಲ. ದೇಶ ವಿದೇಶಗಳಲ್ಲಿ ಬಹಳಷ್ಟು ಅವಕಾಶಗಳು ದೊರೆತವು ಎಂದು ಸುಬ್ಬಣ್ಣ ನವರು ನುಡಿದರು. ಲಲಿತಾ ಅಕಾಡೆಮಿಯ ದೆಹಲಿ ಪ್ರತಿನಿಧಿ, ನಂತರ ಉಪಾಧ್ಯಕ್ಷ ಅದರ ನಂತರ ಅಧ್ಯಕ್ಷ



# ಸಂಘದ ವಿಶಿಷ್ಟ ಕನ್ನಡಿಗ ಪ್ರಶಸ್ತಿ ಪ್ರದಾನ

ಬೆಳೆಸುತ್ತಿದ್ದೇವು ಎಂದು ಅವರು ನೆನಪಿಸಿದರು. ವೈದ್ಯಕೀಯ, ಉದ್ಯಮ, ಸರ್ಕಾರದ ಸೇವೆ ಇತ್ಯಾದಿ ವಿವಿಧ ಕ್ಷೇತ್ರಗಳಲ್ಲಿರುವ ವ್ಯಕ್ತಿಗಳ ಒಂದು ಡೈರೆಕ್ಟರಿಯನ್ನು ಸಂಘವು ಪ್ರಕಟಿಸುವುದು ಉಚಿತ ಎಂದು ಶ್ರೀ ಜವಳಿ ಅವರು ಸಲಹೆ ಮಾಡಿದರು.

ಮನೆಯಲ್ಲಿ ವಿನಮ್ರನಾಗಿರುವುದರ ಜತೆಗೆ ದೆಹಲಿ ಕರ್ನಾಟಕ ಸಂಘದ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು ಮತ್ತು ಕನ್ನಡ ಪುಸ್ತಕ ಹಾಗೂ ನಿಯತಕಾಲಿಕಗಳನ್ನು ಓದುವುದರಿಂದ ದೆಹಲಿಯಲ್ಲಿರುವ ನಾವು ಸುಖ ಸಂತೋಷದಿಂದಿರಬಹುದು ಎಂದು ವಿಶಿಷ್ಟ ಕನ್ನಡಿಗ ಪ್ರಶಸ್ತಿ ಪುರಸ್ಕೃತ ಶ್ರೀ ಟಿ.ಎಂ. ಶಿರೂರು ಅವರು ಮಾತಾಡುತ್ತಾ ಹೇಳಿದರು. ಹುಯಿಲಗೋಳ ನಾರಾಯಣರಾಯರ ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು, ಕುವೆಂಪು ಅವರ ಬಾಗಿಲೊಳು ಕೈಮುಗಿದು ಒಳಗೆ ಬಾ ಯಾತ್ರಿಕನೇ ಹಾಗೂ ವರಕವಿ ಬೇಂದ್ರೆಯವರ ಇನ್ನು ಯಾಕೆ ಬರಲಿಲ್ಲಾಂವ ಹುಬ್ಬಳ್ಳಿಯಾಂವ ಗೀತೆಗಳನ್ನು ಸುಶ್ರಾವ್ಯವಾಗಿ ಹಾಡಿದರು. 1925ರಲ್ಲಿ ಮಹಾತ್ಮಗಾಂಧಿಯವರು ಬೆಳಗಾವಿಗೆ ಬಂದ ಸಂದರ್ಭದಲ್ಲಿ ಪ್ರಯಾಣಿಸುತ್ತಿದ್ದಾಗ ಅವರ ಕಾರಿನಲ್ಲಿ ಹಾವೊಂದು ನುಸುಳಿ ಬಂದಿತ್ತು. ಅವರ ಸಹಪ್ರಯಾಣಿಕರು ಗಾಂಧೀಜಿಯವರನ್ನು ಎಚ್ಚರಿಸಿದಾಗ ಗಾಂಧಿಜಿಯವರು ಇದು ಕರ್ನಾಟಕದ ಹಾವು ಏನೂ ಮಾಡೋಲ್ಲ ಎಂದು ಹೇಳಿ ಕನ್ನಡಿಗರು ಎಷ್ಟು ನಿರುಪದ್ರವಿಗಳು ಎಂದು ತಮಾಷೆಯ ಮೂಲಕ ಹೇಳಿದ್ದನ್ನು ಶಿರೂರು ಅವರು ಸಭಿಕರಿಗೆ ತಿಳಿಸಿದರು. ದೆಹಲಿಯ ಕನ್ನಡಿಗರು ಕರ್ನಾಟಕದ ಬೇರೆ ಬೇರೆ ಪ್ರಾಂತ್ಯಗಳಿಂದ ಬಂದಿದ್ದಾರೆ ಆದರೂ ಎಲ್ಲರೂ ಪ್ರೀತಿಯಿಂದ ಹೊಂದಿಕೊಂಡು ಹೋಗುತ್ತಾರೆ. ಯಾರಿಗೂ ತೊಂದರೆ ಮಾಡುವುದಿಲ್ಲ ಸ್ಥಾನವೂ ತನಗೆ ದೊರಕಿತು. ಈಗ ತಾನು ಸೌತ್ ಝೋನ್ ಕಲ್ಚರಲ್ ಸೆಂಟರ್‌ನ ಕಮಿಶನರ್ ಆಗಿ ಕಾರ್ಯನಿರ್ವಹಿಸುತ್ತಿದ್ದೇನೆ. ತನ್ನ ಬೆಳವಣಿಗೆಗೆ ಪ್ರೋತ್ಸಾಹ ನೀಡಿದ ಸಂಘವನ್ನು ಸುಬ್ಬಣ್ಣ ಅವರು ಕೊಂಡಾಡಿದರು.

ದೆಹಲಿಯಲ್ಲಿ ಕನ್ನಡವನ್ನು ಉಳಿಸಿ, ಬೆಳೆಸುವ ಹಲವಾರು ಕಾರ್ಯಕ್ರಮಗಳನ್ನು ಸಂಘವು ನಡೆಸಿಕೊಂಡು ಬರುತ್ತಿದೆ ಎಂದು ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಸ್ವಾಗತ ಭಾಷಣ ಮಾಡುತ್ತಾ ಹೇಳಿದರು. ಕರ್ನಾಟಕ ಸಂಸ್ಕೃತಿಯನ್ನು ದೆಹಲಿಗೆ ಪರಿಚಯಿಸುವಂತಹ ಕೆಲಸಗಳನ್ನು ಮಾಡಲು ದೆಹಲಿಯಲ್ಲಿ ಸುಸಜ್ಜಿತವಾದ ಒಂದು ಮಾಧ್ಯಮ ಕೇಂದ್ರದ ಅಗತ್ಯವಿದೆ. ಕನ್ನಡದ ಮಾಧ್ಯಮದವರಿಗೆ ಬೇಕಾಗುವ ಎಲ್ಲಾ ಸವಲತ್ತುಗಳಿರುವಂತಹ ದೊಡ್ಡ ಮಟ್ಟದ ಒಂದು ಮೀಡಿಯಾ ಸೆಂಟರ್‌ನ ಅಗತ್ಯವನ್ನು ಪೂರೈಸಲು ದೆಹಲಿ ಕರ್ನಾಟಕ ಸಂಘವು ಮುಂಚೂಣಿಯಲ್ಲಿದ್ದು ಕೆಲಸ ಮಾಡುವುದು ಎಂದು ಶ್ರೀ ಬೆಳ್ಳಾರೆ ಅವರು ಹೇಳಿದರು.

ಸಂಘದ ಕಾರ್ಯಕಾರಿ ಸಮಿತಿ ಸಮಿತಿ ಸದಸ್ಯ ಶ್ರೀ ವಿ.ವಿ. ಬಿರಾದಾರ ಅವರು ಸನ್ಮಾನ ಪತ್ರವನ್ನು ವಾಚಿಸಿದರು. ಪ್ರಸಾರ ಭಾರತಿಯ ನೂತನ ಅಧ್ಯಕ್ಷರಾಗಿ ಆಯ್ಕೆಗೊಂಡ ಪತ್ರಕರ್ತ ಅರಕಲಗೂಡು ಸೂರ್ಯಪ್ರಕಾಶ್ ಅವರೂ ಉಪಸ್ಥಿತರಿದ್ದರು. ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ್ ಅವರು ವಂದನಾರ್ಪಣೆ ಸಲ್ಲಿಸಿದರು. ಸಂಘದ ಕಾರ್ಯಕಾರಿ ಸಮಿತಿ ಉಪಾಧ್ಯಕ್ಷೆ ಶ್ರೀಮತಿ ಆಶಾಲತಾ ಎಂ ಅವರು ಕಾರ್ಯಕ್ರಮ ನಿರೂಪಿಸಿದರು. ಅ

*ಪಿ.ಸಿ. ಶ್ರೀನಿವಾಸ್*

# ಕೋಟಿಗಾನಹಳ್ಳಿ ರಾಮಯ್ಯ ಅವರಿಗೆ
# ಡಾ. ಕೆ. ಶಿವರಾಮ ಕಾರಂತ ಪ್ರಶಸ್ತಿ ಪ್ರದಾನ


ದೆಹಲಿ ಕರ್ನಾಟಕ ಸಂಘವು ಪ್ರತಿ ಎರಡು ವರ್ಷಗಳಿಗೊಮ್ಮೆ ನೀಡುವ ಡಾ. ಕೋಟ ಶಿವರಾಮ ಕಾರಂತ ಪ್ರಶಸ್ತಿಯನ್ನು ಮಕ್ಕಳ ಸಾಹಿತ್ಯ ಕ್ಷೇತ್ರದಲ್ಲಿ ವಿಶೇಷ ಸಾಧನೆ ಮಾಡಿರುವ ಕೋಟಿಗಾನಹಳ್ಳಿ ರಾಮಯ್ಯ ಅವರಿಗೆ ನೀಡಿ ಸನ್ಮಾನಿಸಲಾಯಿತು. ಇದೇ ನವಂಬರ್ 16ರಂದು ಸಂಘದ ಸಭಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಸುಪ್ರೀಂ ಕೋರ್ಟಿನ ನ್ಯಾಯಾಧೀಶರಾದ ಜಸ್ಟಿಸ್ ಶ್ರೀ ಗೋಪಾಲ ಗೌಡ ಅವರು ರಾಮಯ್ಯ ಅವರಿಗೆ ಪ್ರಶಸ್ತಿಯ 25 ಸಾವಿರ ರೂಪಾಯಿ ನಗದು, ಅಭಿನಂದನಾ ಪತ್ರ, ಸ್ಮರಣಿಕೆಗಳನ್ನು ನೀಡಿ ಗೌರವಿಸಿದರು. ಸಮಾಜದ ಅತ್ಯಂತ ಕೆಳವರ್ಗದ ಜನರ ಸಾಮಾಜಿಕ ಹಾಗೂ ಸಾಂಸ್ಕೃತಿಕ ಅಭಿವೃದ್ಧಿಗೆ ಗ್ರಾಮೀಣ ಪ್ರದೇಶದಲ್ಲಿ ಆದಿಮದಂತಹ ಸಂಸ್ಥೆಯನ್ನು ಕಟ್ಟಿ ಆ ಮೂಲಕ ರಂಗಭೂಮಿ, ಶಿಕ್ಷಣ, ಸಂಘಟನೆ ಮತ್ತು ಹೋರಾಟ ಮಾಡುತ್ತಾ ಬಂದಿರುವ ರಾಮಯ್ಯ ಅವರಿಗೆ ಡಾ. ಶಿವರಾಮ ಕಾರಂತ ಪ್ರಶಸ್ತಿಯನ್ನು ನೀಡಿರುವುದು ಸಂಘವು ಮಾಡಿರುವ ಗೌರವಾನ್ವಿತ ಕೆಲಸವೆಂದು ಶ್ರೀ ಗೋಪಾಲ ಗೌಡ ಅವರು ಹೇಳಿದರು. ರಾಮಯ್ಯನವರ ಪ್ರಗತಿಶೀಲ ವಿಚಾರ ಮಂಥನಗಳು ಅವರ ಕವಿತೆಗಳ ಮುಖಾಂತರ, ನಾಟಕಗಳ ಮುಖಾಂತರ ಮಕ್ಕಳಿಗೆ ವಿಮೋಚನಾ ಶಕ್ತಿಯನ್ನು ನೀಡಬಲ್ಲುದು ಎಂದು ಅವರು ಹೇಳಿದರು.

ಪ್ರಶಸ್ತಿ ಸ್ವೀಕರಿಸಿ ಭಾಷಣ ಮಾಡಿದ ರಾಮಯ್ಯನವರು ನಾವಿಂದು ಒಂದು ಸಂದಿಗ್ದ ಕಾಲದಲ್ಲಿದ್ದೇವೆ, ಅಭಿವೃದ್ಧಿ ಎನ್ನುವುದು ನಮ್ಮ ಸಮಾಜದ ಅತ್ಯಂತ ಕೆಳಸ್ತರದ ಸಮುದಾಯದ ಸಂಸ್ಕೃತಿಯನ್ನು ನಾಶ ಪಡಿಸುವಂತಾಗಬಾರದು ಎಂದರು. ನಾಡಿನಿಂದ ಹೊರಗಿರುವ ದೆಹಲಿಯ ಕರ್ನಾಟಕ ಸಂಘ ತನ್ನನ್ನು ಹುಡುಕಿ ಈ ಗೌರವಾನ್ವಿತ ಪ್ರಶಸ್ತಿಯನ್ನು ನೀಡಿದುದಕ್ಕೆ ಸಂತಸ ವ್ಯಕ್ತ ಪಡಿಸಿದರು.

ಪ್ರಶಸ್ತಿಯ ಆಯ್ಕೆ ಸಮಿತಿಯಲ್ಲಿದ್ದ ಹಿರಿಯ ಜಾನಪದ ವಿದ್ವಾಂಸ ಡಾ. ಪುರುಷೋತ್ತಮ ಬಿಳಿಮಲೆ ಅವರು ಈ ಸಂದರ್ಭದಲ್ಲಿ ಮಾತಾಡುತ್ತಾ 20ನೇ ಶತಮಾನದ ಇತರ ಬರಹಗಾರರಿಗಿಂತ ಶಿವರಾಮ ಕಾರಂತರು ಭಿನ್ನರಾಗಿದ್ದರು. ಅವರು ಬರೆದಿರುವ ಎಲ್ಲ ಕಾದಂಬರಿಗಳು ಕೂಡಾ ಜಗತ್ತಿನ ಎಲ್ಲ ಸಾಹಿತ್ಯ ಪರಂಪರೆಗೆ ಸೇರುವಂತಹದ್ದು. ಆದರೆ ಕಾರಂತರಿಗೆ ಕನ್ನಡ ನಾಡಿನಲ್ಲಿಯೇ ಅನ್ಯಾಯವಾಗಿದೆ. ಕನ್ನಡದ ಇತರ ಬರಹಗಾರರಿಗೆ ಇರುವಂತೆ ಕಾರಂತರ ಹೆಸರಲ್ಲಿ ಯಾವುದೇ ದೊಡ್ಡ ಕೆಲಸಗಳು ನಡೆದಿಲ್ಲ ಎಂದು ಅವರು ವಿಷಾದಿಸಿದರು. ಹಿರಿಯ ಪತ್ರಕರ್ತ ಶ್ರೀ ಡಿ. ಉಮಾಪತಿ ಮತ್ತು ಸಂಚಾಲಕರಾಗಿ ಡಾ. ವೈ ಅವನೀಂದ್ರನಾಥ್ ರಾವ್ ಅವರು ಆಯ್ಕೆ ಸಮಿತಿಯಲ್ಲಿದ್ದು ಸಂಘವು ನೀಡುವ ಶಿವರಾಮ ಕಾರಂತ ಪ್ರಶಸ್ತಿಗೆ ರಾಮಯ್ಯನವರ ಆಯ್ಕೆಯು ಒಮ್ಮತದ ಹಾಗೂ ಎಲ್ಲರೂ ಮೆಚ್ಚುವಂತಹ ಆಯ್ಕೆ ಎಂದು ಅವರು ಹೇಳಿದರು.

ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ಪ್ರಾಸ್ತವಿಕ ಮಾತುಗಳನ್ನಾಡುತ್ತ ರಾಜ್ಯೋತ್ಸವದ ಈ ಸುಸಂದರ್ಭದಲ್ಲಿ ಕರ್ನಾಟಕ ಸರ್ಕಾರವು ಜವಹರಲಾಲ ನೆಹರೂ ವಿಶ್ವವಿದ್ಯಾಲಯದಲ್ಲಿ ಕನ್ನಡ ಅಧ್ಯಯನ ಪೀಠ ಸ್ಥಾಪನೆಗೆ 43 ಲಕ್ಷ ರೂಪಾಯಿಗಳ ಬಿಡುಗಡೆ ಮಾಡಿ ಆದೇಶ ಹೊರಡಿಸಿದೆ. ಅದಕ್ಕಾಗಿ ಸಂಘವು ಬಹಳಷ್ಟು ಶ್ರಮಿಸಿದೆ ಎಂದು ನುಡಿದರು. ಡಾ. ಕೋಟ ಶಿವರಾಮ ಕಾರಂತರು ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗಾಗಿ ಕೆಲಸ ಮಾಡುತ್ತಿದ್ದರು. ಅವರ ಚಟುವಟಿಕೆಗಳಲ್ಲಿ ಸಾಹಿತ್ಯರಚನೆ, ರಂಗಭೂಮಿ, ಚಿತ್ರಕಲೆ, ಯಕ್ಷಗಾನ, ಪಠ್ಯಪುಸ್ತಕರಚನೆ, ಬಾಲವನ, ವಿಶ್ವಕೋಶರಚನೆ ಇತ್ಯಾದಿಗಳು ಸೇರಿದ್ದವು. ಆ ಆಶಯವನ್ನು 21ನೇ ಶತಮಾನದ ಬದಲಾಗುತ್ತಿರುವ ಸಾಮಾಜಿಕ ಸಂದರ್ಭಕ್ಕೆ ಸರಿ ಹೊಂದಿಸಿ ಕೆಲಸ ಮಾಡುತ್ತಿರುವವರಲ್ಲಿ ಶ್ರೀ ಕೋಟಗಾನಹಳ್ಳಿ ರಾಮಯ್ಯನವರು ಪ್ರಮುಖರು. ಹಾಗಾಗಿ ಅವರಿಗೆ ಕಾರಂತ ಪ್ರಶಸ್ತಿಯನ್ನು ನೀಡಿ ಗೌರವಿಸುವುದು ಸಂಘಕ್ಕೆ ಹೆಮ್ಮೆ ಎಂದರು. ಸಂಘದ ಜಂಟೀ ಕಾರ್ಯದರ್ಶಿ ಶ್ರೀಮತಿ ಹೇಮಲತ ಎಸ್.ಸಿ. ಕಾರ್ಯಕ್ರಮ ನಿರೂಪಿಸಿದರು ಹಾಗೂ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ವಂದಿಸಿದರು. ಅ

***ಅಭಿಮತ ವರದಿ***



ದೆಹಲಿ ಕರ್ನಾಟಕ ಸಂಘವು ಹಿರಿಯ ಸಾಹಿತಿ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ. ಕೋಟ ಶಿವರಾಮ ಕಾರಂತ ಅವರ ನೆನಪಿನಲ್ಲಿ ಸಂಘದ ಸುವರ್ಣ ವರ್ಷದ ಸಂದರ್ಭದಲ್ಲಿ 1998ರಲ್ಲಿ ಈ ಪ್ರತಿಷ್ಠಿತ ಪ್ರಶಸ್ತಿಯನ್ನು ಆರಂಭ ಮಾಡಿತ್ತು. ಮೊದಲ ಪ್ರಶಸ್ತಿಯನ್ನು ಹೊರನಾಡಿನಲ್ಲಿದ್ದು ಸಾಹಿತ್ಯ ಕ್ಷೇತ್ರದಲ್ಲಿ ಮಾಡಿದ ಮಹತ್ತರ ಸಾಧನೆಗಾಗಿ ಡಾ. ಯಶವಂತ ಚಿತ್ತಾಲ ನೀಡಲಾಯಿತು. ನಂತರ ವಿಜ್ಞಾನ ಮತ್ತು ಪರಿಸರ ಕ್ಷೇತ್ರಗಳಲ್ಲಿ ಮಹತ್ವದ ಸಾಧನೆ ಮಾಡಿದ ಜಿ.ಟಿ. ನಾರಾಯಣರಾವ್ ಅವರಿಗೆ ನೀಡಲಾಯಿತು. ಕಾರಂತರಿಗೆ ಪ್ರಿಯವಾಗಿದ್ದು, ಅವರು ಮಹತ್ತರ ಸಾಧನೆ ಮಾಡಿದ್ದ ಯಕ್ಷಗಾನ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಬನ್ನಂಜೆ ಸಂಜೀವ ಸುವರ್ಣ ಅವರಿಗೆ ಮತ್ತು ಪರಿಸರಕ್ಷೇತ್ರದಲ್ಲಿ ಸಾಧನೆಗೈದ ಸಾಲುಮರದ ತಿಮ್ಮಕ್ಕನವರಿಗೆ ಸಂಘವು ಡಾ. ಶಿವರಾಮ ಕಾರಂತ ಪ್ರಶಸ್ತಿಯನ್ನು ನೀಡಿದೆ. ಡಾ. ಕೋಟ ಶಿವರಾಮ ಕಾರಂತರು ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗಾಗಿ ಕೆಲಸ ಮಾಡುತ್ತಿದ್ದರು. ಅವರ ಚಟುವಟಿಕೆಗಳಲ್ಲಿ ಸಾಹಿತ್ಯ ರಚನೆ, ರಂಗಭೂಮಿ, ಚಿತ್ರಕಲೆ, ಯಕ್ಷಗಾನ, ಪಠ್ಯಪುಸ್ಕಕ ರಚನೆ, ಬಾಲವನ, ವಿಶ್ವಕೋಶ ರಚನೆ ಇತ್ಯಾದಿಗಳು ಸೇರಿದ್ದವು. ಅ



ಡಾ. ಶಿವರಾಮ ಕಾರಂತ ಪ್ರಶಸ್ತಿಯ ಘನತೆ ಮತ್ತು ಒಳಗೊಳ್ಳುವಿಕೆಯ ಒಡಲು ಹೆಮ್ಮೆ ಪಡುವಂತಹದ್ದು. ದೆಹಲಿ ಕರ್ನಾಟಕ ಸಂಘ ಸಾಹಿತ್ಯ, ಸಂಸ್ಕೃತಿ, ರಂಗಭೂಮಿ ಕ್ಷೇತ್ರಗಳಲ್ಲಿ ನಡೆಸುತ್ತಾ ಬಂದಿರುವ ಅನುಸಂಧಾನಗಳು ಮೆಚ್ಚುವಂಥವು ಮಾತ್ರವಲ್ಲ, ಸಂಘಗಳ ಹೆಸರಲ್ಲಿ ನಡೆದಿರುವ ಚಟುವಟಿಕೆಗಳಿಗೆ ಮಾದರಿಯಾಗಿರುವಂತದ್ದು. ಇಂಥ ಹೆಮ್ಮೆಯ ಪ್ರಶಸ್ತಿಯನ್ನು ನನಗೆ ನೀಡುತ್ತಿರುವುದಕ್ಕೆ ದೆಹಲಿ ಕರ್ನಾಟಕ ಸಂಘವನ್ನೂ ಅಂತೆಯೇ ಆಯ್ಕೆ ಸಮಿತಿಯ ನ್ಯಾಯವಂತಿಕೆ ಮತ್ತು ಪಾರದರ್ಶಕತೆಯನ್ನೂ ಅಭಿನಂದಿಸುತ್ತೇನೆ. ಯಾಕೆಂದರೆ ನನಗಿಂತಲೂ ಹಿಂದೆ ಈ ಪ್ರಶಸ್ತಿ ಪಡೆದಿರುವವರ ಪಟ್ಟಿ ನೋಡಿದರೆ ಸಾಕು ತಂತಾನೆ ಗೌರವ ಭಾವ ಬರುತ್ತದೆ. ಇದರೊಂದಿಗೆ ನನಗೆ ಇನ್ನೊಂದು ಸಂತೋಷ ಮತ್ತು ಹೆಮ್ಮೆ ಏನೆಂದರೆ ನಮ್ಮ ನೆಲದವರಾದ ಸನ್ಮಾನ್ಯ ನ್ಯಾಯಮೂರ್ತಿಗಳಾದ ಗೋಪಾಲ ಗೌಡರ ಕೈಯಿಂದ ಈ ಪ್ರಶಸ್ತಿ ಸ್ವೀಕರಿಸುವ ಸುಸಂದರ್ಭ ಒದಗಿ ಬಂದಿರುವುದು.

ಆತ್ಮೀಯರೇ, ಇವತ್ತು ಶಿವರಾಮ ಕಾರಂತರು ಮಕ್ಕಳ ಲೋಕಕ್ಕೆ ಸಲ್ಲಿಸಿರುವ ಮಹತ್ವದ ಕೊಡುಗೆಗಳನ್ನು ಅರ್ಥಪೂರ್ಣವಾಗಿ ಮುಂದುವರೆಸುತ್ತಾ ಇರುವವನು ಎಂದು ನನ್ನನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಿರುವುದಂತೂ ನನ್ನ ಸಂತೋಷವನ್ನು ಹೆಚ್ಚಿಸಿದೆ. ಯಾವ ಭಾಷೆ ಮತ್ತು ಪರಂಪರೆ ಮಕ್ಕಳ ಕಲ್ಪನಾ ಜಗತ್ತನ್ನು ವಿಸ್ತರಿಸುವುದನ್ನು ಬಹು ದೊಡ್ಡ ಆದ್ಯತೆ ಎಂದು ಭಾವಿಸುತ್ತದೆಯೋ ಅಂತಹ ಭಾಷೆ ಮತ್ತು ಪರಂಪರೆಗೆ ವಿಶಾಲವಾದ ಒಳಗೊಳ್ಳುವಿಕೆಯ ಒಡಲು ದಕ್ಕುತ್ತದೆ. ನಾನು ಮಕ್ಕಳಿಗಾಗಿ ಬರೆಯುವುದನ್ನು ನನ್ನ ರಾಜಕೀಯ ಕ್ರಿಯಾಶೀಲತೆ, ಪೊಲಿಟಿಕಲ್ ಆ್ಯಕ್ಟಿವಿಸಂ ಅಂತಾ ಭಾವಿಸಿರುವವನು.

ಇಪ್ಪತ್ತೈದು ವರ್ಷಗಳ ಹಿಂದೆ ನಾನು ಕನ್ನಡದಲ್ಲಿ ನಾಟಕ ಬರವಣಿಗೆಯನ್ನು ಆದ್ಯತೆಯ ಮೇಲೆ ಆಯ್ಕೆ ಮಾಡಿದೆ ಯಾಕೆಂದರೆ, ಇಪ್ಪತ್ತು-ಇಪ್ಪತ್ತೈದು ವರ್ಷಗಳ ಅಲ್ಲಿಂದಾಚೆಗೆ ನಾನು ಮಕ್ಕಳಿಗೆ ನಾಟಕ ಬರೆಯುವುದನ್ನೇ ಬಹಳ ಪ್ರಬಲವಾದ ರಾಜಕೀಯ ಅಭಿವ್ಯಕ್ತಿ ಅಂತಾ ಭಾವಿಸಿಕೊಂಡೆ.

ಮೈಸೂರಿನ ರಂಗಾಯಣದಲ್ಲಿ ಮೊದಲನೇ ಬಾರಿ ಚಿಣ್ಣರ ಮೇಳ ಮಾಡುತ್ತಿದ್ದರು. ಬಿ.ವಿ. ಕಾರಂತರ ನಂತರ ಮಕ್ಕಳ ರಂಗಭೂಮಿಯನ್ನು ಬೆಳೆಸಿದ ರಂಗಕರ್ಮಿ ಇಕ್ಬಾಲ್ ಅಹ್ಮದ್. ಆತ ಒಂದು ತಿಂಗಳು ಕಾಲ ಮಕ್ಕಳಿಗೆ ನಾಟಕ ಶಿಬಿರ ಮಾಡುತ್ತಿದ್ದೀನಿ ಅಂದ. ಯಾವ ನಾಟಕಗಳನ್ನು ಮಾಡುತ್ತಾ ಇದ್ದೀರಿ ಅಂದೆ. ಈ ಬಾರಿ ನಾವು ಪಂಚತಂತ್ರಗಳನ್ನು ಆಧರಿಸಿ ನಾಟಕಗಳನ್ನು ಮಾಡ್ತೇವೆ ಅಂದ. ಯಾವ ತಾತ್ವಿಕತೆಯ ಆಧಾರದ ಮೇಲೆ ಪಂಚತಂತ್ರಗಳನ್ನು ಆಯ್ಕೆ ಮಾಡಿದಿರಿ ಅಂತಾ ಕೇಳಿದೆ. ಅದು ತುಂಬಾ ಪ್ರಾಚೀನವಾದ ಕಥಾತಂತ್ರ ಎಂಬುದರ ಬಗ್ಗೆ ನನ್ನ ಅನುಮಾನ ಏನಿಲ್ಲ. ಆದರೆ ಇವತ್ತು ಮಕ್ಕಳು ಅನುಭವಿಸುತ್ತಾ ಇರುವಂತಹ ಮಾನಸಿಕವಾದ ತಲ್ಲಣಗಳೇನಿದ್ದಾವೆ ಅದರಲ್ಲಿ ಮಿತ್ರಭೇದ ಮೊದಲಾದ ಮ್ಯಾನೇಜಿರಿಯಲ್ ಸ್ಕಿಲ್ಸ್ ಅನ್ನು ಹೇಳಿಕೊಡುವಂತಹ ಪಂಚತಂತ್ರ ಕಥೆಗಳ ಆಯ್ಕೆಯ ಹಿಂದೆ ಯಾವ ತಾತ್ವಿಕತೆ ಇದೆ ಎಂದು ನಾನು ಪ್ರಶ್ನಿಸಿದೆ. ಅದು ಅವರಿಗೂ ತಳಮಳವನ್ನುಂಟು ಮಾಡಿ ಅವರು ಯೋಚನೆ ಮಾಡಿ ಏನು ಮಾಡುವುದು ಎಂದರು. ನಾನು, ಜನಪದಕ್ಕೆ ಬಹಳ ದೊಡ್ಡದಾದ ಒಡಲಿದೆ. ಅದರ ವಿವೇಕ ನಮ್ಮ ಪಠ್ಯಕ್ರಮದ, ನಮ್ಮ ಜೀವನ ಕ್ರಮದ, ಪೋಷಕರು ಪ್ರತಿನಿತ್ಯ ಮಕ್ಕಳಿಗೆ ಬೋಧಿಸಬಹುದಾದಂತಹ ಹಲವಷ್ಟು ರೀತಿಯ ಮಾನವೀಯವಾಗಿರುವಂತಹ, ಉದಾರವಾಗಿರುವಂತಹ, ಎಲ್ಲವನ್ನು ಕೂಡಾ ಒಳಗೊಂಡಿರುವಂತಹ ಜನಪದವನ್ನು ಬಹಳ ದೊಡ್ಡರೀತಿಯಲ್ಲಿ ಈ ಮೇಳಕ್ಕೆ ಉಪಯೋಗಿಸಬಹುದು ಎಂದು ಹೇಳಿದೆ. ಅಲ್ಲಿ ನಾನು ಜನಪದ ವಿವೇಕವುಳ್ಳ ನಾಯಿತಿಪ್ಪ, ಸುಮ್‌ಸುಮ್ಮೆ, ಕತ್ತಲೆ ರಾಜ್ಯ, ಒಗಟಿನ ರಾಣಿ, ಹಕ್ಕಿ ಹಾಡು, ದರ್ಬಾರ್ ಬುಡ್ಡಣ್ಣ ಎಂಬ ಆರು ನಾಟಕಗಳನ್ನು ಬರೆದು ಕೊಟ್ಟೆ. ಆಗ ಒಂದು ಘಟನೆ ನಡೆಯಿತು. ಆ ಘಟನೆಯನ್ನು ಯಾಕೆ ಹೇಳಬೇಕೆಂದರೆ ಇದು ಕೂಡಾ ಸಂಸ್ಕೃತಿ ಮತ್ತು ಭಾಷೆಯು ಎಷ್ಟೊಂದು ರೀತಿಯಲ್ಲಿ ನಮ್ಮನ್ನು ನಾವೇ ವಂಚಿಸಿಕೊಳ್ಳುವ ಅಥವಾ ನಾವೇ ಕಳಕೊಳ್ಳುವ ಅಥವಾ ಇನ್ನೊಬ್ಬರನ್ನು ದೂರೀಕರಿಸುವಂತಹ ಒಂದು ವಿದ್ರೋಹದ ಬಲೆಯಲ್ಲಿ ಹೇಗೆ ಸಿಕ್ಕಿ ಹಾಕಿ ಕೊಂಡಿದ್ದೇವೆ ಎಂಬುದನ್ನು ತಿಳಿಸುತ್ತದೆ.



# ಬುದ್ಧಿದೀಪದಿಂದ ಕತ್ತಲೆಯನ್ನು ಹೋಗಲಾಡಿಸುವ ಪ್ರಯತ್ನ

***ಕೋಟಿಗಾನಹಳ್ಳಿ ರಾಮಯ್ಯ ಅವರು ದೆಹಲಿ ಕರ್ನಾಟಕ ಸಂಘದ 2014ರ ಸಾಲಿನ ಡಾ. ಕೆ. ಶಿವರಾಮ ಕಾರಂತ ಪ್ರಶಸ್ತಿ ಸ್ವೀಕರಿಸಿ ಮಾಡಿದ ಭಾಷಣದ ಆಯ್ದ ಭಾಗ ಅಭಿಮತದ ಓದುಗರಿಗೆ.***

ಹಿಂದೆ ದಲಿತ ಸಂಘರ್ಷ ಸಮಿತಿಯ ಮುಖವಾಣಿಯಾಗಿ ಪಂಚಮ ಎಂಬ ಪತ್ರಿಕೆಯನ್ನು ನಡೆಸುತ್ತಿದ್ದೆವು. ಆ ಪತ್ರಿಕೆಗೆ ನಾರಾಯಣ ಅನ್ನೋ ವ್ಯಕ್ತಿಯೊಬ್ಬ ಪತ್ರ ಬರೆದಿದ್ದ. ಆತ ತನ್ನ ಕಲಿಯೋ ಕಾಲದ ಅನುಭವವನ್ನು ಹೇಳ್ಕೊಂಡಿದ್ದ. ಆ ಪ್ರಕರಣ ಏನೆಂದರೆ, ಪ್ರಾಥಮಿಕ ಶಾಲೆಯಲ್ಲಿ ಓದುತ್ತಿರಬೇಕಾದರೆ ಒಬ್ಬ ನಾಮದ ಮೇಸ್ಟ್ರಿರುತ್ತಾರೆ. ಆ ಮೇಸ್ಟ್ರು ಒಂದು ಸಾರಿ ಕ್ಲಾಸ್‌ರೂಮಲ್ಲಿ ಒಂದು ಪ್ರಶ್ನೆ ಹಾಕುತ್ತಾರೆ. ಮೈ ಶರ್ಟ್ ಈಸ್ ಲೂಸ್. ಇದನ್ನು ಕನ್ನಡಕ್ಕೆ ಅನುವಾದ ಮಾಡಿ ಅಂತ. ಒಬ್ಬ ದಲಿತ ಹುಡುಗನಾಗಿರುವಂತಹ ಈ ನಾರಾಯಣ ಎದ್ದು ನಿಂತು ನನ್ನ ಚೊಗ ಚೊಂಗಳ್ಕೆ ಸಾ ಅಂತಾನೆ. ಮೇಸ್ಟ್ರು ಆತನನ್ನು ಕುಳಿತುಕೋ ನೀನು ತಪ್ಪು ಹೇಳುತ್ತಿದ್ದೀಯಾ ಅಂದರಂತೆ. ಅಲ್ಲಿರುವಂತ ಶಿಷ್ಟವಾದ ಭಾಷೆಯನ್ನು ನಾಲಿಗೆಯ ಮೇಲಿಟ್ಟುರುವಂತಹ ಒಬ್ಬ ಹುಡುಗ ಹೇಳ್ತಾನೆ-ನನ್ನ ಅಂಗಿ ಸಡಿಲವಾಗಿದೆ ಅಂತ. ಮೇಸ್ಟ್ರು ಗುಡ್, ಕೂತ್ಕೋ ಅಂತ ಹೇಳಿದರು.

ಆ ಘಟನೆಯಿಂದ ನನಗೆ ಎಷ್ಟು ಗಾಬರಿ ಆಯ್ತು ಅಂದರೆ, ಒಂದು ಶಿಷ್ಟ ಭಾಷೆ ಅದರ ಒಳಗಿರುವಂತಹ ಅನೇಕ ಭಾಷೆಗಳನ್ನು ತುಳಿದು ಹಾಕುತ್ತದೆ ಅಂತನ್ನುವುದಾದರೆ ಭಾಷೆ ಏನಾಗುತ್ತದೆ? ನನ್ನ ಪ್ರಕಾರ ನನ್ನ ಅಂಗಿ ಸಡಿಲವಾಗಿದೆ ಅನ್ನುವುದಕ್ಕಿಂತಲೂ ನನ್ನ ಚೊಗ ಚೊಂಗಳ್ಕೆ ಸಾ ಅನ್ನುವುದು ಹೆಚ್ಚು ಸಂಗೀತಕ್ಕೆ ಹತ್ತಿರವಾಗಿರುವಂತಹದ್ದು. ಭಾಷೆಯ ಆಗಮತೆಯ ರೂಪುಗಳನ್ನು ಒಳಗೊಂಡಿರುವಂತಹದು. ಅಂತಹ ಭಾಷೆಯೊಂದನ್ನು ನಮ್ಮ ಕಲಿಕೆಯ ಪ್ರಕ್ರಿಯೆಯಲ್ಲಿ, ನಮ್ಮ ಪಠ್ಯಗಳಲ್ಲಿ ಅಥವಾ ಕಲಿಸುವವರ ಮಾತುಗಳಲ್ಲಿ ಹೊಸೆದು ಹಾಕುತ್ತಾರೆ. ನಾನು ತುಳಿದು ಹಾಕಿದಂತಹ ಹಲವು ಕನ್ನಡಗಳ ಪರವಾಗಿ ನಿಲ್ಲುವಂತಹ ಬಹಳ ಘಟ್ಟಿಯಾದ ರಾಜಕೀಯ ತೀರ್ಮಾನವನ್ನು ತೆಗೆದುಕೊಂಡೆ.

ನಾನು ಬರೆದ ನಾಟಕಗಳಲ್ಲಿ ಒಂದು ನಾಯಿತಿಪ್ಪ ನಾಟಕವನ್ನು ಮಕ್ಕಳ ಎದುರು ಓದಬೇಕಿತ್ತು. ಅಲ್ಲಿದ್ದ ಮಕ್ಕಳೆಲ್ಲಾ ಬಹುತೇಕ ಮೇಲುಮಧ್ಯಮ ವರ್ಗದಿಂದ, ಸ್ವಲ್ಪ ಮಧ್ಯಮ ವರ್ಗದಿಂದ ಮತ್ತು ಕೆಲವರು ಕೆಳಮಧ್ಯಮವರ್ಗದಿಂದ ಬಂದವರಾಗಿದ್ದರು. ನಾಟಕದ ಶೀರ್ಷಿಕೆ ನಾಯಿತಿಪ್ಪ ಎಂದ ತಕ್ಷಣವೇ ಅವರು ರಿಯಾಕ್ಟ್ ಮಾಡಿದ್ದು ಏನೆಂದರೆ ಥೂ. . ! ಈ ಕೊಳಕು ನಾಟಕ ಆಡುವುದು ಬೇಡ ಅಂತಂದರು. ನನಗೊಂಥರಾ ಆಶ್ಚರ್ಯವಾಯಿತು. ಆಗ ಇಕ್ಬಾಲ್ ಒಂದು ತಂತ್ರ ಬಳಸಿದರು. ಮೊದಲು ನಾಟಕ ಓದಲಿ, ಆಮೇಲೆ ನೀವು ಬಯಸುವ ನಾಟಕ ಸಿಂಡ್ರೆಲ್ಲವನ್ನೇ ಮಾಡೋಣ ಎಂದರು. ನಾನು ನಾಟಕ ಓದಿದೆ. ಓದಿದ ಮೇಲೆ ಎಲ್ಲ ಮಕ್ಕಳೂ ನಾನು ನಾಯಿ ಆಗ್ತೀನಿ, ನಾನು ತಿಪ್ಪ ಆಗ್ತೀನಿ, ನಾನು ಜೋಳದ ಕಡ್ಡಿ ಆಗ್ತೀನಿ. . . ಅಂತ ಆನಂದ ಪಟ್ಟಿದನ್ನು ನೋಡಿ ನನಗೆ ಅವರ ತಲೆಯಲ್ಲಿ ಕೇವಲ ಪದ ಕೇಳಿದ ತಕ್ಷಣನೇ ಒಂದು ತಿರಸ್ಕಾರ ಬರುವಂಥ ರೀತಿಯಲ್ಲಿ ಅವರ ತಂದೆ ತಾಯಿಗಳು ಅಥವಾ ಅವರ ಸುತ್ತಲ ಜಗತ್ತು ಎಂತಹ ದೊಡ್ಡ ಪೂರ್ವಾಗ್ರಹವನ್ನು ಬಿತ್ತಿದೆ ಅನಿಸ್ತು. ಅವತ್ತಿನಿಂದ ಮಕ್ಕಳ ಇಂತಹ ಪೂರ್ವಾಗ್ರಹವನ್ನು ತೊಡೆದುಹಾಕಲಿಕ್ಕೆ ರಂಗಭೂಮಿ ಮೂಲಕ ಬಹಳ ದೊಡ್ಡರೀತಿ ಕೆಲಸ ಮಾಡಬಹುದು ಅಂತಂದುಕೊಂಡಿದ್ದೆ. ಈ ಚಿತ್ರ ಕೊಂಚವೂ ಬದಲಾಗಿಲ್ಲ ಅಂತ ಗೊತ್ತಾಗಿದ್ದು ಕಳೆದ ಎರಡು ವರ್ಷಗಳ ಹಿಂದೆ. ರಂಗಾಯಣದವರು

ಇನ್ನೊಂದು ನಾಟಕವನ್ನು ಬರೆದು ಕೊಡಲು ಆಹ್ವಾನಿಸಿದ್ದರು. ನಾನು ಹೋಗಿ ಅಲ್ಲಿ ನೆಲದೇವತೆಗಳ ಹೆಜ್ಜೆಗಳಲ್ಲಿ ಅಂತ ಅಲ್ಲಿ ಸುಮಾರು ನಾಲ್ಕು ಘಂಟೆಗಳ ದೀರ್ಘ ನಾಟಕವನ್ನು ಮಕ್ಕಳಿಗೆ ಬರೆದು ಕೊಟ್ಟೆ ನಾನು. ಆ ಸಂದರ್ಭದಲ್ಲಿ ನನಗೆ ಮುನ್ನೂರು ಜನ ಮಕ್ಕಳ ಜತೆಗೆ ಸಂವಾದ ಮಾಡಬೇಕಾದ ಒಂದು ಸಂದರ್ಭ ಬಂತು. ಹಬ್ಬಗಳ ಮೇಲೆ ಇಡೀ ಶಿಬಿರವನ್ನು ರೂಪುಗೊಳಿಸಿದ್ದರಿಂದ ನಾನು ಸಂಕ್ರಾಂತಿ ಹಬ್ಬದ ಹಿನ್ನೆಲೆಯನ್ನು ಮಕ್ಕಳಿಗೆ ಹೇಳಬೇಕೆಂದು ಶಿವ ಸ್ಮಶಾನದಲ್ಲಿದ್ದಾಗ ಅಂತ ಶುರು ಮಾಡಿದಾಗ ಎಲ್ಲಾ ಮಕ್ಕಳು ಶಿವ ಸ್ಮಶಾನದಲ್ಲಿ ಇಲ್ಲ ಸಾರ್ ಅಂತ ಪ್ರತಿಭಟನೆ ಮಾಡಿದರು. ಶಿವ ಇರುವುದು ಕೈಲಾಸದಲ್ಲಿ ಅಂತ ಅವರೆಲ್ಲಾ ಹೇಳಿದರು. ತಂದೆತಾಯಿಗಳು ಕೂಡಾ ಅದಕ್ಕೆ ದನಿಗೂಡಿಸಿದರು. ನನಗೆ ಅದು ಅರ್ಥವಾಯಿತು. ಮಕ್ಕಳ ಮನೋಭೂಮಿಕೆಯಿಂದ ಕೆಲವು ಭೂಪ್ರದೇಶಗಳನ್ನು, ಕೆಲವು ಜನಾಂಗದವರನ್ನು, ತಮಗೆ ಯಾರು ಬೇಡವೋ ಅವರನ್ನು ಮೌನವಾಗಿ ಎರೇಸ್ ಮಾಡುವಂತಹ ಒಂದು ದೊಡ್ಡ ಚಾರಿತ್ರಿಕವಾದ ಅಪಾಯದಲ್ಲಿದ್ದೇವೆ ಅಂತ ನನಗನಿಸಿತು. ಕೆಲವು ದಿನ ಖಿನ್ನನಾದ ನಾನು ಸ್ಮಶಾನವೇ ಕೇಂದ್ರವಾಗಿರುವಂತಹ ನಾಟಕದ ವಿನ್ಯಾಸವೇ ಇರುವಂತೆ ಶಿವಾ ದಿ ಬರ್ನಿಂಗ್ ಲವ್ ಸ್ಟೋರಿ ನೃತ್ಯ ರೂಪಕ ಬರೆದೆ. ಸ್ಮಶಾನ ಎನ್ನುವುದು ಒಂದು ಒಳಗೊಳ್ಳಲೇ ಬೇಕಾದ, ಸೃಷ್ಟಿಸಬಲ್ಲಂತಹ ಸ್ಪೇಸ್ ಎನ್ನುವುದನ್ನು ಆ ನಾಟಕದಲ್ಲಿ ತೋರಿಸಿದೆ.

ಎರಡನೆ ಮಹಾಯುದ್ಧದ ಸಂದರ್ಭದಲ್ಲಿ ಯಹೂದಿಗಳನ್ನು ಸಾಮೂಹಿಕವಾಗಿ ಹತ್ಯೆ ಮಾಡಬೇಕು ಅಂತ ಒಂದು ತೀರ್ಮಾನವನ್ನು, ಒಂದು ದೇಶವು ಕೈಗೊಂಡ ತಕ್ಷಣವೇ ಅವರು ಯೋಚನೆ ಮಾಡಿದ್ದು, ಇಂತಹ ಒಂದು ಸಾಮೂಹಿಕ ಹತ್ಯೆ ಮುಂದೆ ಮಕ್ಕಳು ಇದನ್ನು ಹೇಗೆ ಸ್ವೀಕರಿಸಬಹುದು ಎಂದು. ಅವರು ಕಲ್ಚರ್ ಮತ್ತು ಕಮ್ಯೂನಿಕೇಶನ್‌ನ ಶಿಕ್ಷಣದ ಭಾಗವಾಗಿ ಉಪಯೋಗಿಸಿದರು. ಅವರು ಮಕ್ಕಳ ಮನಸ್ಸನ್ನು ಈ ನರಹತ್ಯೆ ಸ್ವೀಕಾರಕ್ಕೆ ತಕ್ಕಂತೆ ರೂಪಿಸಲು ಮುಂದಾದರು. ಅದಕ್ಕಾಗಿ ಸಾಂಸ್ಕೃತಿಕ ಪಠ್ಯಗಳನ್ನು ತಯಾರಿಸಲು ಮುಂದಾದರು. ಸಾಕ್ಷ್ಯ ಚಿತ್ರಗಳನ್ನು, ಕಿರುಚಿತ್ರಗಳನ್ನು ಪ್ರಚಾರಕ್ಕಾಗಿ, ಶಿಕ್ಷಣಕ್ಕಾಗಿ ರೂಪಿಸಿದರು. ಅದರಲ್ಲೊಂದು ಚಿತ್ರದ ಹೆಸರು ಭಯಾನೇ ಗೊತ್ತಿಲ್ಲದ ಬಾಲಕನ ಕಥೆ ಅಂತಾ. ಆ ಕಥೆಯ ಪ್ರಕಾರ ಜರ್ಮನಿಯ ಪುಟ್ಟ ನಗರದ ಆಚೆಗೆ ಬೆಟ್ಟವೊಂದರಲ್ಲಿ ರಾಕ್ಷಸನೊಬ್ಬ ಇರುತ್ತಾನೆ. ಅವನನ್ನು ಯಾರಿಂದಲೂ ಸೋಲಿಸಲಾಗಿರುವುದಿಲ್ಲ. ಅವನ ಭಯಕ್ಕೆ ಎಲ್ಲರೂ



ಸಿಕ್ಕಿಬಿದ್ದಿರುತ್ತಾರೆ. ಆಗ ಒಂಭತ್ತು ವರ್ಷದ ಜರ್ಮನ್ ಬಾಲಕನೊಬ್ಬ ರಾಕ್ಷಸನನ್ನು ಸಂಹರಿಸಲು ತೀರ್ಮಾನಿಸುತ್ತಾನೆ. ಅವನ ಧೈರ್ಯಕ್ಕೆ ಕಾರಣ ತಾನೊಬ್ಬ ಶ್ರೇಷ್ಠ ಆರ್ಯ ಕುಲ ಎಂಬುದು. ಹಾಗೂ ತನ್ನಲ್ಲಿ ಹರಿಯುತ್ತಿರುವುದು ಶುದ್ಧ ಆರ್ಯರಕ್ತ ಎಂಬುದು. ಆ ಬಾಲಕ ಈ ಧೈರ್ಯದಿಂದಲೇ ಬೆಟ್ಟಕ್ಕೆ ಹೋಗಿ ರಾಕ್ಷಸನನ್ನು ಕೊಲ್ಲುತ್ತಾನೆ. ಅಷ್ಟೇ ಅಲ್ಲ ಕೊಂದು ಅವನ ರುಂಡವನ್ನು ಪಟ್ಟಣದ ಬೀದಿಗಳಲ್ಲಿ ಫುಟ್ಬಾಲ್ ಚೆಂಡಿನಂತೆ ಒದೆಯುತ್ತಾ ಬರುತ್ತಾನೆ. ಇದಾದ ನಂತರ ಹಿಟ್ಲರ್ ಯಹೂದಿಗಳ ತಲೆಬುರುಡೆಗಳ ರಾಶಿಯನ್ನು ಆ್ಯಷ್‌ಟ್ರೇಯಾಗಿ ಬಳಸುವಷ್ಟು ಕ್ರೌರ್ಯ ಚರಿತ್ರೆ ಎದುರಾಗುತ್ತದೆ. ಅದು ಇವತ್ತು ಕೂಡ ಬೆಚ್ಚಿ ಬೀಳುವಂತಹ ರೂಪಕಗಳಾಗಿ ಪರಿವರ್ತನೆಗೊಂಡವು. ಆದ್ದರಿಂದ ಸರಳವಾಗಿ ಗೋಚರಿಸುವಂತಹ ಚಾರಿತ್ರಿಕವಾದಂತಹ ರೂಪಕಗಳು ಮಾತುಗಳು ಅವುಗಳಷ್ಟೇ ಆಗಿರುವುದಿಲ್ಲ. ಬರಹಗಾರರಾಗಿರುವ ನಮ್ಮ ಸಮಸ್ಯೆ ಏನು ಅಂತಂದರೆ, ಅಂಥವು ನಮ್ಮನ್ನು ಬಹಳ ಕಾಡುತ್ತಾ ಹೋಗುತ್ತವೆ, ಯಾಕೆಂತಾ ಗೊತ್ತಿಲ್ಲ.

ಸಾಣೆಹಳ್ಳಿಯಲ್ಲಿ ನನಗೊಂದು ಶಿವಕುಮಾರ ಪ್ರಶಸ್ತಿ ಕೊಟ್ಟರು. ಅವತ್ತು ರಾತ್ರಿ ಅಲ್ಲಿದ್ದಂತಹ ಮೋದಿಫಿಕೇಶನ್ ನೋಡಿ, ತಲ್ಲಣಿಸಿ ಹೋದೆ. ಅಂದೇ ರಾತ್ರಿ ಒಂದು ಪದ್ಯ ಬರೆದೆ. ಇದು ನಮ್ಮನ್ನು ಕಾಡುವಂತಹ ರೀತಿಯಾಗುತ್ತದೆ. ಯಾಕೆಂದರೆ ಇವತ್ತು ಬಹಳ ನಮ್ಮಂತಹ ಸಾಂಸ್ಕೃತಿಕವಾಗಿ ಕೆಲಸ ಮಾಡುವವರಿಗೆ ಎದುರಾಗುತ್ತಿರುವ ರೂಪಕಗಳು. ಯಾವ ರೀತಿ ಇರುತ್ತದೆ ಅಂತಂದರೆ ಇದೇ ರೀತಿಯಲ್ಲಿ ಜರ್ಮನಿಯಲ್ಲಿ ಕಳೆದುಕೊಂಡ ಸಂವೇದನಾಶೀಲತೆಯನ್ನು ಬರಹಗಾರರಿಂದ, ಮಕ್ಕಳಿಗೋಸ್ಕರ ಕೆಲಸ ಮಾಡುತ್ತಿರುವವರಿಂದ ಅಥವಾ ಈ ದೇಶವನ್ನು ಮುಂದೆ ಬೇರೊಂದು ರೀತಿಯಲ್ಲಿ ಗ್ರಹಿಸಿರುವವರ ರೀತಿಯಿಂದಲೇ, ಅಂಥ ಕಣ್ಣಿನ ದೃಷ್ಟಿಯಿಂದಲೇ ನೋಡಬೇಕಾಗುತ್ತದೆ. ಇವತ್ತು ಧರ್ಮ ಮತ್ತು ಸಂಸ್ಕೃತಿ ಎನ್ನುವಂತಹ ಎರಡು ಪದಗಳು ಪ್ರಯೋಗವಾಗುವಂತಹ ರೀತಿ, ಅವುಗಳ ಡೆನ್ಸಿಟಿ ಭಯೋತ್ಪಾದನೆಗಿಂತಲೂ ಹೆಚ್ಚಿನ ಭೀತಿಯನ್ನು ನಮ್ಮಂತಹ ಬರಹಗಾರರಲ್ಲಿ ಹುಟ್ಟಿಸುತ್ತಾ ಇದೆ. ಸಂಸ್ಕೃತಿ, ಶಿಕ್ಷಣ ಏಕರೂಪೀಕರಣ, ಹೊರ ತಳ್ಳುವಿಕೆಯೇ ಪ್ರಧಾನ ಇಂಗಿತವಾಗುವ ರೀತಿಯಲ್ಲಿದೆ. ಇದನ್ನು ಕೇಸರೀಕರಣ ಎನ್ನುವಂತಹ ಸರಳವಾದ ಪದದಿಂದ ವ್ಯಾಖ್ಯಾನಿಸುವುದಕ್ಕೆ ಬರುವುದಿಲ್ಲ. ಅದಕ್ಕಿಂತಲೂ ಮಿಗಿಲಾದ ಪದವೊಂದನ್ನು ನಾವು ಹುಡುಕಬೇಕಾಗಿದೆ. ಇದು ಕೇವಲ ಬಣ್ಣವೊಂದಕ್ಕೆ ಮಾತ್ರ, ಒಂದು ತತ್ವ ಒಂದಕ್ಕೆ ಮಾತ್ರ ಆಗುವಂತದ್ದಲ್ಲ. ಅದು. ಅದಕ್ಕೆ ಮಿಗಿಲಾದ ಸಂಕಟವನ್ನು ಈ ದೇಶಕ್ಕೆ ತರುವುದರಲ್ಲಿ ನನಗೆ ಯಾವುದೇ ರೀತಿಯ ಅನುಮಾನವಿಲ್ಲ. ಮೊಗಲ್ ಇತಿಹಾಸವನ್ನು ಕೈ ಬಿಡುವುದು, ಇತಿಹಾಸವೇ ಅಲ್ಲದ ಪುರಾಣಗಳನ್ನು ಇತಿಹಾಸ ಸೃಷ್ಟಿಸುವಂತೆ ಈಗಾಗಲೇ ಕೋಟ್ಯಾಂತರ ರೂಪಾಯಿಗಳನ್ನು ವಿಶ್ವವಿದ್ಯಾಲಯಗಳಿಗೆ ಅನುದಾನವಾಗಿ ಕೊಡುತ್ತಾ ಇರುವುದು. ಸಂಸ್ಕೃತಿ ಶಿಕ್ಷಣದ ಹೆಸರಲ್ಲಿ ಮಹಾಭಾರತ ಕೂಡಾ ಗೊತ್ತಿಲ್ಲದಂತಿರುವ ಮಕ್ಕಳಿಗೆ ಭಗವದ್ಗೀತೆಯನ್ನು ಇಂಜೆಕ್ಟ್ ಮಾಡಲು ಹೊರಟಿರುವುದು. ಉನ್ನತ ಶಿಕ್ಷಣವನ್ನು ಸಂಪೂರ್ಣವಾಗಿ ಕಾರ್ಪೋರೇಟ್ ಗುಲಾಮಗಿರಿಗೆ ಒಳಪಡಿಸಿರುವುದು, ಇವತ್ತು ನಾವು ಯೋಚಿಸಬೇಕಾದ ಸಂಗತಿ.

ಭಾರತದ 50 ಪ್ರತಿಷ್ಠಿತ ಸಾಮಾಜಿಕ ಸಂಸ್ಥೆಗಳ ಒಂದು ಸರ್ವೆಯಲ್ಲಿ ಹೆಮ್ಮೆಯಿಂದ ಹೇಳುತ್ತಾರೆ ಎಂದರೆ – ವಿಜ್ಞಾನ ಮತ್ತು ತಂತ್ರಜ್ಞಾನದ ಫಲಿತಾಂಶಗಳನ್ನು ನಾವು ಪೆಪ್ಸಿ ಕಂಪನಿಯ ಗರಿಗರಿಯಾಗಿರಬಹುದಾದಂತಹ ಪೊಟೆಟೋ ಚಿಪ್ಸ್‌ನ ಗರಿಗರಿತನವನ್ನು ಮತ್ತು ಲಾಂಗಿವಿಟಿಯನ್ನು ಸಂರಕ್ಷಿಸಲು ಉಪಯೋಗಿಸುತ್ತಾ ಇದ್ದೀವಿ ಅನ್ನೋದು–ಎಂಬ ಮಾತನ್ನು ಯಾವ ನಾಚಿಕೆ ಇಲ್ಲದೆ ಈ ದೇಶದಲ್ಲಿ ಹೇಳುವಷ್ಟು ಭಂಡತನ ಈ ನೆಲದಲ್ಲಿದೆ. ಆದ್ದರಿಂದ ಇನ್ನು ಮುಂದೆ ನಾವು ಯೋಚಿಸಬೇಕಾದ ರೀತಿ, ಸಂಸ್ಕೃತಿಯನ್ನು ಮಕ್ಕಳ ಶಿಕ್ಷಣದಲ್ಲಿ ತರಬೇಕಾದರೆ, ಯಾವ್ಯಾವ ರೀತಿಯಲ್ಲಿ ಇದು ನಮ್ಮ ಮುಂದಿನ ಭಾರತವನ್ನು ಭೀಕರಗೊಳಿಸಬಲ್ಲುದು ಅನ್ನುವಂತ ಎಚ್ಚರದಲ್ಲಿಯೇ ನಾವು ನೋಡಬೇಕಿದೆ. ಆದ್ದರಿಂದ ಇವತ್ತು ನಾವು ಭಾರತೀಯತೆಯನ್ನು ಈಗ ಹೇಳಲಾಗುತ್ತಿರುವ ವ್ಯಾಖ್ಯಾನಗಳ ಮೂಲಕ ಸಮರ್ಥಿಸಿಕೊಳ್ಳುವುದು ಸಾಧ್ಯವಾಗಲಾರದು. ಯಾಕೆಂದರೆ ಮುಂದಿನ ನಮ್ಮ ಮಕ್ಕಳೇನೇ ನಮ್ಮನ್ನು ಅನೇಕ ರೀತಿಗಳಲ್ಲಿ ಪ್ರಶ್ನಿಸುತ್ತಾರೆ. ನಿಮ್ಮ ಮಿತಿ ಇಷ್ಟೇ ಆಗಿತ್ತೇ? ಮನುಷ್ಯತ್ವವನ್ನು ನಿರ್ವಹಿಸಿಕೊಳ್ಳುವುದಕ್ಕೆ ಅಥವಾ ನಿಮ್ಮನ್ನು ನೀವು ಒಂದು ದೇಶದ ಗಡಿಯ ಒಳಗಡೆ ಒಂದು ಬಯಾಲಾಜಿಕಲ್ ಫ್ರೇಮ್ ವರ್ಕ್‌ನಲ್ಲಿ ಇಷ್ಟೇನೆ ನಿಮಗೆ ಸಾಧ್ಯವಾಗಿದ್ದು ಆ ಕಾಲದಲ್ಲಿ ಅಂತ ನಮ್ಮ ಮಕ್ಕಳು ನಮಗಿಂತಲೂ ಕೂಡಾ ಸಂವೇದನಾಶೀಲರಾಗಿ ಪ್ರಶ್ನಿಸುವಂತಹ ಕಾಲ ಬರುತ್ತದೆ. ನಾನು ನನ್ನ ಎಕ್ಸಿಸ್ಟೆನ್ಸ್ ಅನ್ನು ಯಾವ ರೀತಿಯಲ್ಲಿ ಪರಿಭಾವಿಸಬಹುದು ಎಂದು ನನಗೂ ಬಹಳ ದೊಡ್ಡ ಗದ್ದಲವಾಗಿದ್ದರಿಂದ ಮತ್ತು ಅದನ್ನು ನಾನು ಮಕ್ಕಳ ನಾಟಕಗಳ ಮೂಲಕ ನಿರ್ವಹಿಸಬೇಕಾಗಿರುವುದರಿಂದ ನನ್ನನ್ನು ನಾನು ಡಿಫೈನ್ ಮಾಡಲೇಬೇಕಾಗಿತ್ತು.

ಆ ಕಾರಣಕ್ಕಾಗಿ ನಾನು ಕವಿಯಾಗಿರೋದರಿಂದ ನನ್ನ ಪದ್ಯದಲ್ಲಿ ನಾನು ಯಾವ ರೀತಿಯಲ್ಲಿ ನನ್ನನ್ನು ನಾನು ಕಂಡುಕೊಂಡಿದ್ದೇನೆ ಮತ್ತು ನಾನು ನೋಡುತ್ತಾ ಇರುವ ನೋಟವನ್ನ ಅಂದುಕೊಂಡಿದ್ದೇನೆ.



**ನನ್ನಜ್ಜ**

ಇರಬೇಕು, ಇದ್ದಿರಲೇಬೇಕು, ಅಜ್ಜನೊಬ್ಬ ನನಗೆ
ನಿತ್ಯ ಮುದ್ದೆ, ಗೊಜ್ಜಿಗೆ, ನೋಡಿದವನಲ್ಲ,
ಆಡಿದವನಲ್ಲ, ಕಾಡಿದವನಲ್ಲ. . .
ರೂಪ ಘನರಹಿತ ಮಳೆಕಾಡಿನ ಶಬ್ದ ಮಾತ್ರ
ಮಳೆ ಮಾತ್ರ, ಜಡಿಮಳೆ ಮಾತ್ರ
ಸುರಿಮಳೆ ಮಾತ್ರ, ಸುರಿಯುತ್ತಲೇ ಇದೆ ಸತತ
ಧಕ್ಕದಲ್ಲ ದಣಿದುದಾರಿದ ಕಿರುನಾಲಿಗೆಗೆ
ಕಿರು ತುಂತುರಾನಿ
ನಡೆದೇ ಇದೆ ತಕತ್ಯೆ ದೇವೀ ಭಾಗವತ
ಕೇಳಿಯೂ ಕೇಳದಂತೆ ನೋಡಿಯೂ ನೋಡದಂತೆ
ನಡೆದಿದ್ದ ನನ್ನಜ್ಜ, ನನ್ನ ಕುರುಹ ಕಂಡವನಂತೆ ಗತ
ಅರಬ್ಬಿನ ಮರಳಗಾಡಿನಲಿ ಒಂಟೆ ಕೊರಳ ಗಂಟೆ ಕಿಂಕಿಣಿಯಲಿ
ಗೊತ್ತಿದ್ದು ನಾನು ಇಲ್ಲಿರುವೆ ಎಂದು
ಕೈಗೆ ಸಿಗದಂತೆ ಹೊನ್ನೇರಿನಲಿ
ಬಂದಿದೆ ಬಿತ್ತನೆಯ ಹತ್ತಿರ
ನೊಗ ಏರಿಸಿಲ್ಲ ಇನ್ನೂ ಹೆಗಲಿಗೆ
ಹುತ್ತ ಬಿತ್ತುವ ಮಾತು ಅತ್ತಗೆ
ದತ್ತೂರಿ ಗರಿಕೆ, ಹೊತ್ತಿಗೆ ಹೊತ್ತೊತ್ತಿಗೆ
ತುಂಬಿ ಹೋಗಿದೆ ನೆತ್ತಿ ನೊಣಸೊತ್ತಿ, ಗೆಡ್ಡರಸ, ಗೊಡ್ಡೆ
ಅರಸೊತ್ತಿಗೆಯ ಉನ್ಮತ್ತ ಹಕ್ಕಿನಲಿ
ಪಾದುಕಾ ಪಟ್ಟಾಭಿಷೇಕದ ಅಣಕು ಪ್ರಹಸನದಲಿ,
ಅಜ್ಜ ಬಂದಾಗ ಬೀಜ ಬಿತ್ತುವ ಹೊತ್ತು
ಹದಗೊಂಡಿರಬೇಡವೇನು ನೆಲಹುತ್ತು,
ನನ್ನಜ್ಜ ನೇಗಿಲಯೋಗಿ
ಕಣ್ಣೂರ ಕುಂಕುಮ ಭೂಮಿಯಲಿ
ಶಬ್ಧ, ಅಕ್ಷರ, ರೂಪ, ಬಿತ್ತುವ ಕೂರಿಗೆಯ ರಾಗ, ಪರಾಗ,
ಬಿತ್ತಲೇ ಬೇಕಲ್ಲ, ಅಜ್ಜ ಬಂದಾಗ
ಕೈ ಕೂರಿಗೆಗೆ ಒಂದೆರಡಾದರೂ ಗಟ್ಟಿ ಕಾಳು
ಅರಳಿ ಹೂವಾಗುವಂತೆ, ಹುಚ್ಚೆಲ್ಲಾ ಹೂ ಬಾಳು
ನನ್ನಜ್ಜ ಹೂಗಾರ ಮಕರಂದ ಮಮಕಾರ, ರಸಸಿದ್ಧ ಮಾಯಾಕಾರ
ಗಂಧ, ಹೂವಿನದಿರಲಿ, ನವರಸ ಕುಸುಮದ ಒಡನೆಯೇ ಇರಲಿ
ತೀಡಿ ತಂಗಾಳಿ ನಾದು ಬಿರುಗಾಳಿ
ಪಕಳೆ ಹೂ ಕಾಡ್ಗಿಚ್ಚನು ಹಬ್ಬಿಸಿ
ಉರುಳಿಸಿ, ಹೊರಳಿಸಿಗಮಲಗಮಲಿನ
ಹೂವನವ ಬೆಳೆವ ಮಾಲಿ
ಕನಸಿನ ಹೂದೋಟಗಳ ಕೂಲಿ
ಆದಿಯಿಂದಲೇ ಒಪ್ಪಿದ್ದಾನೆ ಚಟ್ಟಾ ಪಟ್ಟಾ
ಆಳರಸರ ಪಲ್ಲಕ್ಕಿ ಮೇಲೆ
ಸತ್ತ ನಾಯಿ ಸೆಗಣಿ
ಬಂಗಾರದ ಗಣಿ
ನನ್ನಜ್ಜ ಮಾಲಿಗೂ ಮೊದಲು ಜಾಡಮಾಲಿ
ಗುಡಿಸಿ ಕಲ್ಯಾಣದ ಓಣಿಗಳನ್ನು
ಅವಧಿ ಅಮರಾವತಿ ಹಸ್ತಿನಾವತಿ ರಾಜಬೀದಿಗಳನು
ಮುಗಿದ ದಾಸೋಹದ ಎಂಜಲೆಲೆ ರಾಶಿ
ತೆಗಲು ತೇಗು ಹೂಸು ಉಚ್ಚೆ ಬಚ್ಚಲ ಬಾಚಿ
ಸತ್ತೆಮ್ಮೆ ಕರ ಹೊತ್ತು ನಡೆದವನು
ಹೂದು ಗುಡ್ಡೆ ಪಾಲು ಪಲಾಕಿ
ಈಚಲ ಹೆಂಡಕ್ಕೆ ಸೋತು ಕೊರಬಾಡಾಗಿ ನೆಂಜಿಕೊಂಡವನು
ನನ್ನಜ್ಜ ಕಟುಕ
ಕಡಿಯುತ್ತಾನೆ, ಕತ್ತರಿಸುತ್ತಾನೆ, ನರ ಹರಿಯುತ್ತಾನೆ
ಹಿಡಿದ ಕಟುಗತ್ತಿ ಗುಲಾಬಿಗುತ್ತಿ
ಕುಸುಮ ಕೋಮಲ ಖಡ್ಗದಲಗ ನನ್ನಜ್ಜ
ಕಡಿಯುತ್ತಾನಾದ್ದರಿಂದ ಕಟುಕ
ನನ್ನಜ್ಜ ಮೂಳೆ ಮಾಂಸದ ತಜ್ಞ
ಗೋವಿನದೂ ಸೇರಿದಂತೆ
ಕೋಣದಂತೂ ಹೆಂಡ ಕುಡಿದಂತೆ ಸಲೀಸು
ಅಜ್ಜ ಕಂಡಿಲ್ಲ ಇನ್ನೂ
ನಡೆದ ಹೆಜ್ಜೆ ಗುರುತು ಹಚ್ಚೆ ಆಗಿದೆ
ಎಗ್ಗಿಲ್ಲಾ ಬೆನ್ನು ಮೂಳೆಯಲಿ
ನೀಲ ನಕ್ಷೆಯಾಗಿದೆ ಆಕಾಶ ಬ್ರಹ್ಮಾಂಡ ಲೀಲೆಯಲಿ
ನನ್ನಜ್ಜ ಬುದ್ಧ, ಮಹಮದ ಸಿದ್ಧ ರಸಸಿದ್ಧ
ಏಸುವಿನ ಮೊಳೆಗುರುತು ಇನ್ನೂ ಅಂಗೈಯಲ್ಲಿ ಮಾಯದೇ ಹಸಿಹಸಿ
ಇರಾಕಿನ ಮರಳು ಹಾದಿಗಳು ಹಾಸಿವೆ ಅವನ ಪಾದಗಳಲಿ
ಗೋಪಾದವು ಆದರೂ ಅಷ್ಟೇ
ಹುಲಿಪಾದವು ಆದರೂ ಅಷ್ಟೇ
ಪ್ರೇಮದ ಸಿರಿಪಾದ ಎದೆಹಾಲು ಸುರಿಸುವಾಗ
ಖರ್ಜೂರ ಕಾಫಿ ಹೂಬಳ್ಳಿ ಜವೆಗೋಧಿ ಹಿಂಬಾಲಿಸಿ ಬರುವಾಗ
ನನ್ನಜ್ಜನ ಹೆಜ್ಜೆಯಡಿಯಲಿ ಜೀವವೃಕ್ಷದಚ್ಚು ಗುರು
ನನ್ನಜ್ಜನ ನಡೆ ಮೃದುಮಧುರ
ಪ್ರೇಮ ಕಾವ್ಯದ ಗುಲಾಬಿ ಅತ್ತರಿನಗಮಲು
ಬುಲ್ ಬುಲ್ ಸಿತಾರ ಝರಿ
ಜುಳುಜುಳು ಗುನುಗು

ಇದು ತಾತ್ವಿಕ ನೆಲೆಗಳು ನಮ್ಮನ್ನು ಜೀವಂತಗೊಳಿಸಿದ ರೀತಿ. ನನ್ನದು ಅತ್ಯಂತ ಸಣ್ಣ ಬುಡ್ಡೀದೀಪ ಅಥವಾ ಕಿರು ಹಣತೆಯ ಪ್ರಯತ್ನ ಅಷ್ಟೇ. ಆ ನೆಲೆಯ ಮೂಲಕ ನಾನು ಇಡೀ ನಮ್ಮ ನೆಲದ ಅತ್ಯಂತ ಒಳಗೊಳ್ಳುವ ಸಾಧ್ಯತೆಗಳನ್ನು ಮತ್ತು ವಿಶಾಲಗೊಳ್ಳುವಂತಹ ಸಾಧ್ಯತೆಗಳನ್ನು ಒಂದು ಮಗುವಿನಲ್ಲಿರಬಹುದಾದ ಸಮರ್ಥ ಕೌಶಲ್ಯಗಳು ಕೂಡಾ ವಿಜೃಂಭಿಸುವಂತಹ, ಬೆಳಗುವಂತಹ ರೀತಿಯಾಗಬೇಕೂಂತ ಸಣ್ಣ ಪ್ರಯತ್ನವನ್ನು ಮಾಡುತ್ತಾ ಇದ್ದೀನಿ. ಆ ಪ್ರಯತ್ನಕ್ಕೆ ಇಷ್ಟು ದೂರದಲ್ಲಿ ಇರುವ ನೀವು ಕಣ್ಣು ಕಿವಿ ತೆರೆದು ನನ್ನನ್ನು ಆಹ್ವಾನಿಸಿ ಆತ್ಮೀಯವಾಗಿ ಅದನ್ನು ಒಪ್ಪಿಕೊಂಡಿರೋದು ನೋಡಿ ನಿಜಕ್ಕೂ ಬಹಳ ಸಂತೋಷವಾಗುತ್ತಾ ಇದೆ, ಮತ್ತು ಒಂದು ನಂಬಿಕೆ ಕೂಡಾ ಬರುತ್ತಾ ಇದೆ. ಯಾಕೆಂದರೆ ಸೂರ್ಯನ ಕಿರಣಗಳಿಂದ ಹೋಗಲಾಡಿಸದಂತಹ ಕತ್ತಲೆ ಮೂಲೆಯ ಮೊತ್ತಫನ್ನು ಒಂದು ಬುಡ್ಡೀದೀಪ ಹೋಗಲಾಡಿಸುತ್ತದೆ ಎಂದು ನಂಬಿಕೆ ನನ್ನದು. ಆ ನಂಬಿಕೆಗೆ ನೀವು ಎಣ್ಣೆಬತ್ತಿ ಕೊಟ್ಟು ಶಕ್ತಿ ತುಂಬಿದ್ದೀರಿ. ನನ್ನ ಮಾತುಗಳನ್ನು ಇದುವರೆಗೂ ಕೇಳಿಸಿಕೊಂಡಿದ್ದೀರಿ. ನಾನು ಅತ್ಯಂತ ನಮ್ರನಾಗಿದ್ದೇನೆ ಮತ್ತು ಅತ್ಯಂತ ಸಂತೋಷಗೊಂಡಿದ್ದೇನೆ. ಅ

*ನಿರೂಪಣೆ: ಬಾಲಕೃಷ್ಣ ನಾಯ್ಕ್ ಡಿ.*



# ‘ಪ್ರತಿರೋಧದ ನೆಲೆಗಳನ್ನು ಕಟ್ಟಲು ಹೊಸ ರೀತಿಗಳಲ್ಲಿ ಯೋಚನೆ ಮಾಡುವ ಅಗತ್ಯವಿದೆ’

**- ಕೆ. ರಾಮಯ್ಯ**

*ಬಾನಾಡಿ : ಎಪ್ಪತ್ತರ ದಶಕದಲ್ಲಿ ಕರ್ನಾಟಕದಲ್ಲಿ ನಡೆಯುತ್ತಿದ್ದ ಸಾಮಾಜಿಕ ಹೋರಾಟಗಳಲ್ಲಿ ತಾವು ಭಾಗಿಯಾಗಿದ್ದವರು. ಇಪ್ಪತ್ತೊಂದನೆಯ ಶತಮಾನದ ಈ ಕಾಲಘಟ್ಟದಲ್ಲಿ ಕೂಡಾ ಸಾಮಾಜಿಕ ಗೊಂದಲಗಳಿವೆ. ಈ ಸಂದರ್ಭದಲ್ಲಿ ಯಾವ ತರಹದ ಹೋರಾಟಗಳು ಸರಿಯೆನ್ನಿಸುತ್ತವೆ?*

ಕೋಟಿಗಾನಹಳ್ಳಿ ರಾಮಯ್ಯ: ಎಪ್ಪತ್ತರ ದಶಕದಲ್ಲಿ ನಮ್ಮ ಕಣ್ಮುಂದೆ ಗೋಚರವಾಗುತ್ತಿದ್ದಂತಹ ವ್ಯವಸ್ಥೆಯ ಸ್ವರೂಪವೆ ಬೇರೆಯಿತ್ತು. ಆ ಸ್ವರೂಪಕ್ಕೆ ತಕ್ಕಂತೆ ನಾವು ಪ್ರತಿಭಟನೆಯನ್ನು, ಪ್ರತಿರೋಧವನ್ನು, ನ್ಯಾಯಕ್ಕಾಗಿ ಆಗ್ರಹವನ್ನು ಅಥವಾ ಮಾನವೀಯತೆಗಾಗಿ ದೊಡ್ಡ ದನಿಯನ್ನು ಎತ್ತುವುದಕ್ಕೆ ಬೇಕಾದಂತಹ ರೀತಿಗಳನ್ನು ಅವತ್ತು ಯೋಚನೆ ಮಾಡುತ್ತಿದ್ದೆವು. ಈಗಿನ ಜಗತ್ತಿನ ವ್ಯವಸ್ಥೆಗಳು ಮತ್ತು ಅವು ರೂಪುಗೊಳ್ಳುತ್ತಿರುವ ರೀತಿಗಳನ್ನು ನೋಡಿದರೆ, ನಾವು ಹಿಂದಿನ ರೀತಿಯಲ್ಲಿ ಅದೇ ಮಾದರಿಗಳ ಮೂಲಕ ಚಳುವಳಿಗಳನ್ನು ಕಟ್ಟುವುದು ಪ್ರಸ್ತುತವಾಗಲಾರದು.

ಈಗ ನಾವು ಬದುಕುತ್ತಿರುವ ಜಗತ್ತಿನಲ್ಲಿ ಅಭಿಪ್ರಾಯಗಳನ್ನು ಉತ್ಪಾದನೆ ಮಾಡಿ, ಅಭಿಪ್ರಾಯಕ್ಕೆ ತಕ್ಕಂತೆ ಎಲ್ಲಾ ಮನೋಭೂಮಿಕೆಗಳನ್ನು ರೂಪಿಸುವಂತಹ ಬಹಳ ದೊಡ್ಡ ಪಿತೂರಿ ನಮ್ಮ ಕಣ್ಮುಂದೆ ಇದೆ. ಅದರಿಂದಾಗಿ ನಾವು ಅತಿ ಹೆಚ್ಚು ಕೆಲಸ ಮಾಡಬೇಕಾದಂತಹ ಕ್ಷೇತ್ರಗಳೆಂದರೆ ಸಂವಹನ ಮತ್ತು ಸಂಸ್ಕೃತಿ (ಕಮ್ಯೂನಿಕೇಶನ್ ಮತ್ತು ಕಲ್ಚರ್). ಈ ಎರಡು ವಿಭಾಗಗಳಲ್ಲಿ, ಬೇರೆ ರೀತಿಯ ಪ್ರತಿರೋಧದ ನೆಲೆಗಳನ್ನು ಮತ್ತು ಒಟ್ಟಾರೆಯಾಗಿ ಎಲ್ಲಾ ಹೋರಾಟಗಳ ಅಂತಃಸತ್ವವನ್ನು ಕಾಯಬೇಕಾದಂತಹ ರೀತಿಗಳನ್ನು ನೋಡಬೇಕಿದೆ. ಹೆಚ್ಚು ಭವಿಷ್ಯವಿರೋ ರೀತಿ ಯೋಚನೆ ಮಾಡಬೇಕಾಗಿದೆ.

*ಬಾನಾಡಿ: ನೀವು ಹೇಳಿದ ಸಂವಹನ ಮತ್ತು ಸಂಸ್ಕೃತಿ ಕುರಿತು ಇನ್ನಷ್ಟು ವಿಸ್ತರಿಸುತ್ತೀರಾ?*

ಕೋಟಿಗಾನಹಳ್ಳಿ ರಾಮಯ್ಯ: ಕಮ್ಯೂನಿಕೇಶನ್ ಮತ್ತು ಕಲ್ಚರ್ ಎಂಬ ಎರಡು ಕ್ಷೇತ್ರಗಳಲ್ಲಿ ಬಹಳ ದೊಡ್ಡ ರೀತಿಯ ಸಿದ್ಧಾಂತಗಳನ್ನು, ತತ್ವಗಳನ್ನು

**ದೆಹಲಿ ಕರ್ನಾಟಕ ಸಂಘದ 2014ರ ಸಾಲಿನ ಡಾ. ಕೆ. ಶಿವರಾಮ ಕಾರಂತ ಪ್ರಶಸ್ತಿಯನ್ನು ಕವಿ, ನಾಟಕಕಾರ, ಹೋರಾಟಗಾರ, ಚಿಂತಕ ಕೋಟಿಗಾನಹಳ್ಳಿ ರಾಮಯ್ಯ ಅವರಿಗೆ ನೀಡಲಾಯಿತು. ಪ್ರಶಸ್ತಿ ಸ್ವೀಕರಿಸಲು ದೆಹಲಿಗೆ ಬಂದ ಅವರನ್ನು ಅಭಿಮತಕ್ಕಾಗಿ ವಿಶೇಷವಾಗಿ ಸಂದರ್ಶಿಸಲಾಯಿತು. ಈ ಸಂದರ್ಭದಲ್ಲಿ ಪತ್ರಿಕೆಯ ಸಂಪಾದಕ ಬಾಲಕೃಷ್ಣ ನಾಯ್ಕ್ ಡಿ ಅವರೊಡನೆ ಶ್ರೀ ರಾಮಯ್ಯ ಅವರು ಸಾಮಾಜಿಕ, ರಾಜಕೀಯ ಮತ್ತು ರಂಗಭೂಮಿಗೆ ಸಂಬಂಧಪಟ್ಟ ವಿಚಾರಗಳನ್ನು ಚರ್ಚಿಸಿದರು. ಸಂದರ್ಶನದ ಆಯ್ದಭಾಗವನ್ನು ಅಭಿಮತದ ಓದುಗರಿಗಾಗಿ ಸಂಗ್ರಹಿಸಿ ಕೊಡಲಾಗಿದೆ.**



ಜ್ಯಾರಿಗೊಳಿಸುತ್ತಿದ್ದಾರೆ. ಕಳೆದ ಚುನಾವಣೆಯಿಂದೀಚೆಗೆ ಭಾರತದಲ್ಲಿ ಗ್ಲೋಬಲ್ ಸಿದ್ಧಾಂತವನ್ನು ನಂಬಿಕೊಂಡಿರುವಂತಹ ಕಮ್ಯುನಿಕೇಶನ್ಸ್ ಕಾನ್ಸೆಪ್ಟ್ಸ ಮೂಲಕನೇ ನಾವು ಇಡೀ ಭಾರತದ ಮನೋಭೂಮಿಕೆಯನ್ನು ಬದಲು ಮಾಡುವಂತಹದನ್ನು ನೋಡುತ್ತಿದ್ದೇವೆ. ಈ ದೇಶದ ಅಸಾಮಾನತೆಯನ್ನು, ಅನ್ಯಾಯವನ್ನು ಮತ್ತು ಸಾಮಾಜಿಕ ನ್ಯಾಯಕ್ಕೆ ಬದ್ಧವಾಗಿರುವ ನಮ್ಮ ಸಂವಿಧಾನವನ್ನು ಉಲ್ಲಂಘಿಸಿದ ರೀತಿಯಲ್ಲಿ ನಡೆಯುತ್ತದೆ ಇದು. ಇದನ್ನು ನಾವು ಪ್ರತಿರೋಧಿಸಬೇಕಾದರೆ ಖಂಡಿತವಾಗಿ ಹೊಸರೀತಿಗಳಲ್ಲಿ ಯೋಚನೆ ಮಾಡಬೇಕಾಗುತ್ತದೆ. ಈ ಎರಡು ಕ್ಷೇತ್ರಗಳಲ್ಲಿ ನಾವು ಮುಂದಿನ ಭಾರತದ ಆತ್ಮಸಾಕ್ಷಿಯನ್ನು ಕಾಯ್ದುಕೊಳ್ಳಬೇಕಾಗಿದೆ ಮತ್ತು ಒಂದು ಪ್ರತಿರೋಧದ ನೆಲೆಗಳನ್ನು ಈ ರಂಗದಲ್ಲಿ ಕಟ್ಟುವುದೇ ಆದ್ಯತೆ ಎಂದು ನಾನು ಅಂದುಕೊಂಡಿದ್ದೇನೆ.

*ಬಾನಾಡಿ: ಇಂದು ಸಮಾಜದಲ್ಲಿ ಮತ್ತು ಸಾಮಾಜಿಕ ತಾಣಗಳಲ್ಲಿ ಬಲಪಂಥೀಯ ಧೋರಣೆಗಳಿಗೆ ಬೆಂಬಲ ದೊರಕಿ ಬಹುಚರ್ಚಿತವಾಗುತ್ತಿವೆ. ಅದಕ್ಕೆ ಮುಖ್ಯ ಕಾರಣ ಸಮಾಜದ ಬಹುತೇಕ ಜನರು ಅಂತಹ ಧೋರಣೆಗಳನ್ನು ಸಂಪೂರ್ಣವಾಗಿ ಸ್ವೀಕರಿಸಿದ್ದಾರೆಯೇ? ಅಥವಾ ಅದು ಎಡಪಂಥೀಯ ಅಥವಾ ಕೇಂದ್ರೀಯ ಧೋರಣೆಗಳ ಸೋಲೇ?*

ಕೋಟಿಗಾನಹಳ್ಳಿ ರಾಮಯ್ಯ: ಸಾಮಾಜಿಕ ಅಥವಾ ಆರ್ಥಿಕ ಸ್ವರೂಪಗಳಲ್ಲಿ ಭಾರತದಲ್ಲಿ ಇಪ್ಪತ್ತೈದು ವರ್ಷಗಳಿಗಿಂತ ಹಿಂದೆ ಇದ್ದುದ್ದಕ್ಕೂ ಈಗಿರುವುದಕ್ಕೂ ಅಜಗಜಾಂತರ ವ್ಯತ್ಯಾಸವಿರುವುದನ್ನು ನಾವು ನೋಡುತ್ತಿದ್ದೇವೆ. ಮುಖ್ಯವಾಗಿ ಎಡಪಂಥೀಯರು ಒಂದು ರೀತಿ ಸೋತಿದ್ದಾರೆ ಅಥವಾ ಮೌನಕ್ಕೆ ಶರಣಾಗಿರುವಂತಹ ಸ್ಥಿತಿ ಅವರಿಗೆ ಬಂದಿರುವಂತಹದ್ದು ಎದ್ದು ಕಾಣುತ್ತಿರುವ ವಿದ್ಯಮಾನವೇ. ಅದಕ್ಕಿಂತಲೂ ಭೀಕರವಾಗಿ ಮತ್ತು ಘೋರವಾಗಿ ನಡೆಯುತ್ತಿರುವುದು ಏನು ಅಂದರೆ ಸಂಪೂರ್ಣವಾಗಿ ಯಾವುದು ನಿಜವಲ್ಲವೋ ಅದನ್ನು ನಮಗೆ ದಿಟವೆಂದು ತೋರಿಸುತ್ತಿದ್ದಾರೆ. ನಮ್ಮ ತತ್ವ ಪದಕಾರರು ಹೇಳಿರುವಂತೆ ದಿಟದಂತೆ ತೋರುವ ಹುಸಿಯ ನಂಬಿ ಎಂಬಂತೆ ಅವರು ದಿಟದಂತೆ ತೋರುವ ಹುಸಿಯ ಜಗತ್ತನ್ನು ತೋರಿಸುತ್ತಿದ್ದಾರೆ. ಆಗ ಭ್ರಮಾತ್ಮಕವಾದ ಮನೋಭೂಮಿಕೆಗೆ ಇದು ಕಾಣುವುದಿಲ್ಲ. ಅದಕ್ಕೆ ದೀರ್ಘಕಾಲಕ್ಕೆ ಬೇಕಾದಂತಹ ಹತ್ಯಾರಗಳನ್ನು ನಾವು ತಯಾರಿ ಮಾಡಬೇಕಾಗುತ್ತದೆ. ಅದನ್ನು ಇಮಿಡಿಯೇಟ್ ಆಗಿ ನಾವು ರೆಸಿಸ್ಟ್ ಮಾಡೋದಕ್ಕೆ ಸಾಧ್ಯ ಆಗೋಲ್ಲ. ನರಕದ ಬಾಗಿಲು ತೆರೆದಂತೆ ಬರುತ್ತಾ ಇರುವುದು. ಆದರೆ ಖಚಿತವಾದ ತೀರ್ಮಾನ ಯಾವುದು ಅಂದರೆ ಇಪ್ಪತ್ತೈದು ವರ್ಷಗಳಿಂದ ಬಲಪಂಥೀಯ ಪ್ರಗತಿವಿರೋಧಿ ಸಿದ್ಧಾಂತಗಳನ್ನು ನಂಬಿರುವವರಿಗೆ ಇಷ್ಟು ದೊಡ್ಡ ವಿಸ್ತಾರ ಸಾಧ್ಯ ಆಗಿರಲಿಲ್ಲ. ಈ ನೂರು ವರ್ಷಗಳಲ್ಲಿ ಈಗಲೇ ಯಾಕೆ ಸಾಧ್ಯವಾಯಿತು ಅಂದರೆ ಈಗ ಬದಲಾಗುತ್ತಿರುವ ಆರ್ಥಿಕ ಉದಾರವಾದಿ ಅರ್ಥವ್ಯವಸ್ಥೆ. ಅದು ಇವರಿಗೆ ಬಹಳಷ್ಟು ಪ್ರಾಣಬಲವನ್ನು ತಂದು ಕೊಟ್ಟಿದೆ. ತಮಗಿರುವಂತಹ ಅಪಾರವಾದ ಬಂಡವಾಳ ಮತ್ತು ಬಂಡವಾಳವನ್ನು ಸೆಳೆಯುವಂತಹ ಶಕ್ತಿ ಅವರಲ್ಲಿದೆ. ಈ ಅಪಾರವಾದ ಸಂಪನ್ಮೂಲ, ತಂತ್ರಜ್ಞಾನ ಮತ್ತು ವಿಜ್ಞಾನದ ಆವಿಷ್ಕಾರಗಳನ್ನು ಉಪಯೋಗಿಸಿಕೊಂಡು ಇವರು ಅತ್ಯಂತ ಹಿಂದಿನ, ಮಧ್ಯಕಾಲೀನ ಮೌಲ್ಯಗಳಂತಹ ಅವಮಾನೀಯ ಮೌಲ್ಯಗಳ ವ್ಯವಸ್ಥೆಯೊಂದನ್ನು ನಾವು ಜ್ಯಾರಿಗೊಳಿಸಿಯೇ ಸಿದ್ಧ ಅಂತ ಹೊರಟಿದ್ದಾರೆ. ಅವರು ಸಾಫಲ್ಯವನ್ನು ಕಾಣುತ್ತಲೂ ಇದ್ದಾರೆ. ಅದು ನಮ್ಮನ್ನು ಸ್ವಲ್ಪ ಹಿಮ್ಮೆಟ್ಟಿಸಿದಂತೆ ಕಾಣಬಹುದು. ಆದರೆ ಈ ದೇಶಕ್ಕೆ ನಿಜವಾಗಿಯೂ ಬೇಕಾಗಿರೋದು ಪ್ರತಿರೋಧದ ನೆಲೆಗಳನ್ನು ತನ್ನ ಒಳಗಿನಿಂದಲೇ ಕಟ್ಟಿಕೊಳ್ಳುವುದು. ಭಾರತೀಯತೆ ಎನ್ನುವುದನ್ನು ಇವರು ಸುಳ್ಳುಮಾಡಿ ಅದಕ್ಕೊಂದು ಭೇದದ ಟೋಪಿ ಹಾಕಿ ಮೋಸ ಮಾಡುತ್ತಾ ಇದ್ದಾರೆ. ಅದನ್ನು ತೆಗೆದು ನಿಜವಾದ ಅರ್ಥವಿರುವ ಭಾರತೀಯತೆಯನ್ನು ಉಳಿಸಲು, ನಿಜವಾದ ಪ್ರತಿರೋಧದ ನೆಲೆಗಳಿಂದ ಸಂಸ್ಕೃತಿ ಮತ್ತು ತಳಸಮುದಾಯದಲ್ಲಿ ಒಂದು ರೆಸಿಸ್ಟೆನ್ಸ್ ರಾಜಕಾರಣವನ್ನು ನಾವು ತರಲೇ ಬೇಕಾಗಿದೆ. ಅದು ನಮ್ಮೆಲ್ಲರ ಕರ್ತವ್ಯ ಕೂಡಾ.

*ಬಾನಾಡಿ: ತಾವು ಹೇಳುತ್ತಿರುವ ತಳಸಮುದಾಯ ಕೂಡಾ ಇಂದು ಮಾರುಕಟ್ಟೆ ಕೇಂದ್ರಿತವಾಗಿದ್ದು, ಆಧುನಿಕ ತಂತ್ರಜ್ಞಾನದ ಮಾಧ್ಯಮಗಳ ಮೂಲಕ ಸಂವಹನ ಮಾಡುತ್ತಿರುವ ಸಂದರ್ಭದಲ್ಲಿ ಅಲ್ಲಿ ಪ್ರತಿರೋಧದ ನೆಲೆಗಳನ್ನು ಕಟ್ಟಲು ಹೇಗೆ ಸಾಧ್ಯ?*

ಕೋಟಿಗಾನಹಳ್ಳಿ ರಾಮಯ್ಯ: ರಾಮಾಯಣದಲ್ಲಿ ಒಂದು ಸುಂದರವಾದ ಮೆಟಾಫರ್ ಇದೆ. ಸೀತೆಗೆ ಚಿನ್ನದ ಮಾಯಾಜಿಂಕೆ ಕಾಣುತ್ತದೆ. ಅದೊಂದು ಪ್ರಕರಣ ಮಾತ್ರವಲ್ಲ. ಅದನ್ನು ಇನ್ನೊಂದು ನೆಲೆಯಲ್ಲಿ ನಾವು ನೋಡಬೇಕು. ಅದು ಈ ಆರ್ಥಿಕತೆಯ ಮಾಯಾಜಿಂಕೆಯ ಬೆನ್ನು ಹತ್ತಿರುವುದು ಇದೆಯಲ್ಲ ... ಈ ಕನಸು ಬಿದ್ದು ಹೋಗುತ್ತೆ. ಬಹಳ ಕಾಲ ನಿಲ್ಲುವುದಿಲ್ಲ. ಯಾಕೆಂದರೆ ಕಾರ್ಪೋರೇಟ್ ಆರ್ಡರ್‌ಗಳು ಏನು ಮಾಡಿವೆ ಅಂದರೆ ನಮ್ಮ ದೇಶದಲ್ಲಿರುವ ಒಂದು ಸಣ್ಣ ಮನುಷ್ಯನ ದೇಹದಿಂದಲೂ ಕೂಡಾ ಹೇಗೆ ರಕ್ತವನ್ನು ಹೀರಬಹುದು ಎಂಬ ರೀತಿ ತನ್ನ ಜಾಲವನ್ನು ನಿರ್ಮಿಸಿಕೊಂಡಿದೆ. ಅದು ಯಶಸ್ವಿಯೂ ಆಗುತ್ತಿದೆ. ಆದರೆ ಭ್ರಮಾತ್ಮಕವಾದ ಈ ಹುಸಿ ಬಹಳ ಕಾಲ ಉಳಿಯುವುದಕ್ಕೆ ಸಾಧ್ಯವಿಲ್ಲ. ಇದು ಅದರದೇ ಆದ ವೈರುಧ್ಯಗಳಿಂದಲೇ ಕುಸಿದು ಬೀಳುತ್ತದೆ. ಹೊರಗಿನ ಶಕ್ತಿಗಳಿಗಿಂತಲೂ ತನ್ನ ಒಳಗಿನ ವೈರುಧ್ಯಗಳಿಂದನೇ ಈ ಆರ್ಥಿಕ ವ್ಯವಸ್ಥೆ ಮತ್ತು ಇವರು ಕಟ್ಟುತ್ತಾ ಇರುವ ವ್ಯವಸ್ಥೆಯು ಕುಸಿದು ಬೀಳುತ್ತದೆ. ಕುಸಿದು ಬೀಳೋ ಕಾಲಕ್ಕೆ ಎತ್ತಿ ನಿಲ್ಲಿಸುವಂತಹ ಭಾರತ ದೇಶದ ಬಗ್ಗೆ ನಾವು ತಲೆ ಕೆಡಿಸಿಕೊಳ್ಳಬೇಕಾಗುತ್ತದೆ. ಈಗ ಕಟ್ಟುತ್ತಿರುವ ಭಾರತದ ವ್ಯವಸ್ಥೆ ಸಾಯುವಂತಹದು.

ಕುಸಿಯುವಂತಹದ್ದು. ತನ್ನಿಂದ ತಾನೇ ಮೋಸಗೊಳ್ಳುವಂತಹದ್ದು. ಈ ಹದಿನೈದು ಇಪ್ಪತ್ತು ವರ್ಷಗಳ ಕಾಲಘಟ್ಟವನ್ನು ನಮ್ಮ ಕೈಲಿ ಏನೂ ಮಾಡಕ್ಕಾಗದ ಸಮಯವೆಂದರೂನು ಸರಿನೇ. ಆದರೆ ನಾವು ಒಳಗಿಂದ ಪ್ರತಿರೋಧದ ನೆಲೆಗಳನ್ನು ಕಟ್ಟಿಕೊಂಡರೇನೆ ಸಾಕು.

*ಬಾನಾಡಿ: ಪ್ರತಿರೋಧದ ನೆಲೆಗಳನ್ನು ಕೆಲವೊಮ್ಮೆ ನಮ್ಮ ರಂಗಭೂಮಿ ಮತ್ತು ಸಿನಿಮಾಗಳ ಮೂಲಕ ನಗರದ ಜನರಿಗೆ ತಲುಪಿಸುವಂತಹ ಕಾರ್ಯಗಳು ಆಗಾಗ ನಡೆಯುತ್ತಿವೆ. ಅವುಗಳ ಪ್ರಭಾವ ಎಷ್ಟಿದೆ?*


ಕೋಟಿಗಾನಹಳ್ಳಿ ರಾಮಯ್ಯ: ಮೊದಲಾಗಿದ್ದರೆ ನಾವು ಬಹಳ ವರ್ಗೀಕರಣದ ಮೂಲಕ ಹೇಳಬಹುದಿತ್ತು. ಶೋಷಿತರು, ಪ್ರೊಲಿಟರಿಯೇಟ್, ದಲಿತರು, ಹಿಂದುಳಿದವರು. ಅಂತಹವರಲ್ಲಿ ಇಂತಹ ಮಾತುಗಳನ್ನು ಬಹಳ ಸ್ಪಷ್ಟವಾದ ರೀತಿಯಲ್ಲಿ ಮಾತನಾಡಬಹುದಿತ್ತು. ಆದರೆ ಇವತ್ತಿನ ಸಮಾಜದ ಸ್ವರೂಪಗಳು ಕದಡಿಕೊಂಡಿರುವ ರೀತಿಯಲ್ಲಿ ಸ್ಪಷ್ಟವಾಗಿ ಹೇಳಲಾಗದಿದ್ದರೂ ಒಂದು ಭರವಸೆ ಅಂತೂ ಇದೆ. ಈಗಿನ ವ್ಯವಸ್ಥೆ ಏನು ಮಾಡುತ್ತದೆ ಅಂದರೆ ಕೇವಲ ಕೆಲವೇ ಜನರನ್ನು ಅತ್ಯಂತ ಬಲಿಷ್ಟಗೊಳಿಸುತ್ತಾ ಅತ್ಯಂತ ಎತ್ತರಕ್ಕೆ ಏರಿಸುತ್ತದೆ. ಉಳಿದ ಬಹುಪಾಲು ಜನರನ್ನು ಅದು ಕೆಳಕ್ಕೆ ತೆಗೆದುಕೊಂಡು ಬಂದಾಗ ಅವರ ಭ್ರಮೆಗಳೆಲ್ಲಾ ಖಂಡಿತಾ ಕರಗಿ ಹೋಗುತ್ತವೆ. ಅವರು ಈ ಕೆಳಗಿನ ಪ್ರತಿರೋಧದ ನೆಲೆಗಳೇನಿದೆಯೋ ಆ ನೆಲೆಗಳ ಜತೆ ಬರಲೇ ಬೇಕಾಗುತ್ತದೆ. ಅವರ ಉಳಿವಿಗೆ ಇಲ್ಲಿ ಬಿಟ್ಟರೆ ಬೇರೆ ಎಲ್ಲೂ ಜಾಗವಿರುವುದಿಲ್ಲ. ಈಗ ಅವರು ಅಂದುಕೊಂಡಿದ್ದಾರೆ ಅವರು ಒಂದು ಕಂಪರ್ಟ್ ಝೋನ್‌ನಲ್ಲಿದ್ದಾರೆ ಅಂತ. ಎಲ್ಲೋ ಸರ್ವೈವ್ ಆಗಬಹುದು. ಪ್ರಪಂಚದ ಏನೇನೋ ಸರ್ವೈವಲ್ ಬೋಟ್ಸ್ ಇದೆ ಅಂತ. ಖಂಡಿತವಾಗಿಯೂ ಅಂತಹ ದೋಣಿಗಳನ್ನು ಸುಟ್ಟು ಹಾಕಲಾಗುತ್ತದೆ. ಅವರ ವಿಮೋಚನೆಗೆ ಮತ್ತು ನಿತ್ಯದ ಉಳಿವಿಗಾಗಿ ಅವರು ಆಶ್ರಯಿಸಬೇಕಾಗಿರೋದು ಅವರು ನಂಬಿಕೊಂಡಿರುವಂತಹ ಹುಸಿ ನೆಲೆಗಳನ್ನು ಅಲ್ಲ ಬದಲು ನಿಜವಾದ ನೆಲೆಗಳನ್ನು ಅಂತ ತಿಳಿಯುತ್ತಾರೆ. ಸಾವಿರಾರು ವರ್ಷಗಳಿಂದ ಯಾರು ಅನ್ಯಾಯಕ್ಕೆ ಮತ್ತು ದಮನಕ್ಕೆ ಒಳಗಾಗಿರುತ್ತಾರೋ ಅಂತಹವರೇನೇ ಬಿಡುಗಡೆಯ ದೊಂದಿ ಕೂಡಾ ಹಿಡಿಯಬೇಕಾಗುತ್ತದೆ.

*ಬಾನಾಡಿ: ಒಂದು ಸಮರ್ಥ ನಾಯಕತ್ವವಿಲ್ಲದ ಸ್ಥಿತ ವ್ಯವಸ್ಥೆಗೆ ರೋಸಿ ಹೋದಂತಹ ಸಮಾಜವು ಇನ್ನೊಂದು ಪರ್ಯಾಯ ವ್ಯವಸ್ಥೆಯಲ್ಲಿ ಹೊಸ ನಾಯಕನನ್ನು ಆಶ್ರಯಿಸಿದೆ. ಇದು ನಿಮಗೆ ಹೇಗೆ ಕಾಣಿಸುತ್ತದೆ?*

ಕೋಟಿಗಾನಹಳ್ಳಿ ರಾಮಯ್ಯ: ಈಗ ನಮಗೆ ಏನು ಕಾಣಿಸುತ್ತದೆ ಅಂದರೆ ಇಲ್ಲಿ ಒಂದು ಪ್ರತಿಯ ನಿರ್ಮಾಣವಾಗಿದೆ. ಈಗ ಈ ನಿರ್ಮಾಣಕ್ಕೆ ಪ್ರತಿಯನ್ನು ನಾವು ಹುಡುಕಲೇ ಬೇಕು. ಏಕೆಂದರೆ ಈ ನಿರ್ಮಾಣವೇ ಹುಸಿ. ಅದು ವೈರುಧ್ಯಗಳಿಂದ ಕೂಡಿದೆ. ಅದಕ್ಕೆ ಸ್ವಲ್ಪ ಕಾಲ ಮಾತ್ರ ಜಯವಿರುವುದು. ಎಲ್ಲಾ ಜನರನ್ನು ನಿರಂತರವಾಗಿ ಮೋಸಗೊಳಿಸಲು ಸಾಧ್ಯವಿಲ್ಲ. ಅದು ಕೇವಲ ಸುಳ್ಳನ್ನು ಮತ್ತು ತಪ್ಪು ಚರಿತ್ರೆಗಳನ್ನು ಕಟ್ಟುವುದರ ಮೂಲಕ, ಐತಿಹ್ಯಗಳನ್ನು ಕಟ್ಟುವುದರ ಮೂಲಕ ಹುಸಿಗಳನ್ನು ನಿರ್ಮಿತಿಮಾಡುತ್ತಿದೆ. ಕಮ್ಯೂನಿಕೇಶನ್ ಹೆಸರಲ್ಲಿ ಇವರು ಬಿಡುತ್ತಿರುವುದೆಲ್ಲಾ ಹುಸಿ ಮತ್ತು ಮೋಸದಿಂದ ಕೂಡಿರುವುದೇ ಆಗಿದೆ. ಅದರಿಂದಾಗಿ ಒಂದು ನಂಬಿಕೆ ಏನು ಅಂದರೆ ಈ ಹುಸಿ ಎನ್ನುವುದನ್ನು ಹೊಡೆದು ಹಾಕುವುದಕ್ಕೆ ಅದರೊಳಗಿಂದನೇ ಅವತಾರಗಳು ಹುಟ್ಟುತ್ತವೆ ಅಂತ ನನ್ನ ನಂಬಿಕೆ. ಅದು ಆಗುತ್ತೆ. ಆದರೆ ಅದಕ್ಕೆ ಕಾಲ ಹಿಡಿಯುತ್ತೆ. ಆ ಕಾಲಕ್ಕೆ ನಾವು ಕಾಯಬೇಕು. ಅಷ್ಟರೊಳಗೆ ನಾವು ಬಹಳ ಭೀಕರವಾದ ಜಗತ್ತನ್ನು ಕೂಡ ನೋಡಬೇಕಾಗಬಹುದು. ಈಗಿನ ಭಾರತ ಬಹಳ ಸೊಗಸಾಗಿ ಕಾಣಿಸುತ್ತಿರಬಹುದು. ಪ್ರಪಂಚಕ್ಕೆ ನಾವು ಗುರುಗಳಾಗಬಲ್ಲಷ್ಟು ದೊಡ್ಡ ರೀತಿಯಲ್ಲಿದ್ದೀವಿ ಅಂತ ಹೇಳಬಹುದಷ್ಟೇ. ಆದರೆ ಭಾರತೀಯತೆಯನ್ನು ಈ ವರೆಗೆ ಡಿಫೈನ್ ಮಾಡಿರುವುದು ಒಂದು ಗುಲಗಂಜಿ ತರಹ. ಗುಲಗಂಜಿ ಅಂಡಿನಲ್ಲೇನೆ ಕತ್ತಲಿದೆ ಅನ್ನುವುದು ಗೊತ್ತಾಗಬೇಕು. ಭಾರತವೂ ಈಗ ತನ್ನ ಅಂಡಿನ ಕತ್ತಲನ್ನು ಮರೆತು ಮಾತಾಡುತ್ತಿದೆ. ಅಸತ್ಯ ಮಾತಾಡುತ್ತಿದೆ. ಆದರೆ ಅಸತ್ಯಕ್ಕೆ ಬಹಳ ಕಾಲ ಬೆಲೆ ಇರುವುದಿಲ್ಲ.

*ಬಾನಾಡಿ: ನೀವು ಆದಿಮ ಸಂಸ್ಥೆಯ ಮೂಲಕ ಹೊಸ ತಲೆಮಾರಿನವರು ಹೊಸ ರೀತಿಯಲ್ಲಿ ಚಿಂತನೆಗಳನ್ನು ಮಾಡಲು ಅನುಕೂಲವಾಗುವಂತಹ ಒಂದು ಪರಿಸರವನ್ನು ತಯಾರು ಮಾಡುತ್ತಿದ್ದೀರಿ. ಇದು ಹೇಗೆ ನಡೆಯುತ್ತಿದೆ?*

ಕೋಟಿಗಾನಹಳ್ಳಿ ರಾಮಯ್ಯ: ಮಕ್ಕಳು, ಅವರ ಶಿಕ್ಷಣ ಮತ್ತು ಸಂಸ್ಕೃತಿ ಬಗ್ಗೆ ಕೆಲಸ ಮಾಡುತ್ತಿದ್ದೇನೆ. ನಾವು ಭಾರತದ ಭಾವಿ ತಲೆಮಾರು ಅಂತ ಯಾರನ್ನು ಕರೀತೇವೆ ಅದಕ್ಕೆ ಎಲ್ಲವನ್ನೂ ಒಳಗೊಳ್ಳುವಂತಹ ಒಂದು ಸಾಮಾರ್ಥ್ಯ ಬೇಕು. ಅದಕ್ಕೆ ಒಂದು ಒಡಲು ಬೇಕಾಗಿದೆ. ಈಗ ಏನಾಗುತ್ತದೆ ಎಂದರೆ ತಮಗೆ ಬೇಕಾದ ವಿಷವನ್ನು ತುಂಬೋದಕ್ಕೆ ಮಾತ್ರ ಅವರನ್ನು ಡಸ್ಟ್‌ಬಿನ್ ಅಂತ ತಿಳಿದುಕೊಂಡು ಅದಕ್ಕೆ ತಪ್ಪು ಚರಿತ್ರೆಗಳನ್ನು ಹಿಡಿದುಕೊಂಡು, ಹುಸಿ ಕನಸುಗಳನ್ನು, ಬೌದ್ಧಿಕ ಅಸಾಮಾರ್ಥ್ಯಗಳನ್ನು, ತಾತ್ವಿಕವಾಗಿ ದೌರ್ಬಲ್ಯಗಳಿಂದ ಕೂಡಿರುವ ಬಲಪಂಥೀಯರು ಸಿದ್ಧಾಂತದ ದೌರ್ಬಲ್ಯಗಳನ್ನು ತಮ್ಮ ಮೋಹಕ ಜಾಲದ ಮಾತುಗಳಿಂದ ಹೇಳುತ್ತಿದ್ದಾರೆ. ಆ ತರಹದ ನುಡಿಗಟ್ಟುಗಳಿಗೆ ಈ ನೆಲದ ಎಡಪಂಥೀಯರಾಗಲೀ, ಬದಲಾವಣೆ ಬಯಸುವವರಾಗಲಿ ಹುಸಿ ನುಡಿಗಟ್ಟುಗಳನ್ನು ಕಟ್ಟೋಕೆ ಹೋಗಲಿಲ್ಲ. ಅಕಸ್ಮಾತ್ ಆ ಹುಸಿ ನುಡಿಗಟ್ಟುಗಳ ವಿರುದ್ಧ ಎಡಪಂಥೀಯರು ಮಾತಾಡೊದಕ್ಕೆ ಶುರು ಮಾಡಿದರೆ ಬಲಪಂಥೀಯ ಎನ್ನುವುದು ಒಂದು ಪರ್ಸೆಂಟ್ ಕೂಡಾ ಮುಂದುವರಿಯುವುದಕ್ಕೆ ಸಾಧ್ಯವಿಲ್ಲ. ಆ ಕಾರಣಕ್ಕೆ ಇವತ್ತು ಕೂಡಾ ಶಕ್ತಿ ಇರುವುದು ದಿಟಕ್ಕೇನೆ. ವಾಸ್ತವಕ್ಕೇನೆ. ಮುಂದಾಗುವ ಪ್ರಪಂಚದ ಬದಲಾವಣೆಗಳು ಇವರನ್ನು ಇನ್ನಷ್ಟು ವಾಸ್ತವಕ್ಕೆ ಕಣ್ತೆರೆಯುವಂತೆ ಮಾಡುತ್ತದೆ. ಮತ್ತು ಅದರ ಜತೆಗೆ ಇವರೆಲ್ಲಾ ಒಂದಾಗಲೇ ಬೇಕಾಗುತ್ತದೆ. ಇವರು ಹೇಳುತ್ತಿರುವ ಭಾರತೀಯತೆ ಕಾರ್ಪೋರೇಟ್‌ಗಳಿಗೆ ಸೇವೆ ಮಾಡುವಂತಹದ್ದು ಆಗಿರುತ್ತದೆ. ಇವರು, ಕೆಲವರನ್ನು ಹೊರತು ಪಡಿಸಿ ಭಾರತವನ್ನು ಕಟ್ಟಬಹುದು ಎಂದು ಕೊಂಡಿದ್ದಾರೆ. ಅನೇಕ ಜನಸಮುದಾಯಗಳನ್ನು ಒಳಗೊಳ್ಳದೇನೇ ಭಾರತವನ್ನು ಕಟ್ಟಿಕೊಳ್ಳಬಹುದು ಎಂದು ಕೊಂಡಿದ್ದಾರೆ. ಅದು ಬಹಳ ಅಪಾಯಕಾರಿಯಾದ ನಡೆ. ಅದರ ಅಪಾಯಕ್ಕೆ ಅವರೇ ಈಡಾಗಬೇಕಾಗುತ್ತದೆ. ಈ ದೇಶಕ್ಕೆ ಮತ್ತು ಮುಂದಿನ ತಲೆಮಾರಿಗೆ ತಿನ್ನಿಸುವ ಅದೇ ವಿಷದ ಹಣ್ಣುಗಳ ಫಲದಿಂದಾನೇ ಇವರ ಪತನವಾಗುತ್ತದೆ.



*ಬಾನಾಡಿ: ರಂಗಭೂಮಿಯು ಹೇಗೆ ತಳ ಸಮುದಾಯದಲ್ಲಿ ಪ್ರತಿರೋಧಕ ವಿಚಾರಗಳನ್ನು ತರಬಹುದು?*

ಕೋಟಿಗಾನಹಳ್ಳಿ ರಾಮಯ್ಯ: ರಂಗಭೂಮಿ ಯಾಕೆ ಬಹಳ ಮುಖ್ಯ ಅಂತಂದರೆ ಅದು ಒಳಗೊಳ್ಳುತ್ತದೆ. ರಂಗಭೂಮಿ ಅಂದರೆ, ನಾವು ಹತ್ತು ಜನ ಒಟ್ಟಿಗೆ ಬರಬೇಕಾಗುತ್ತದೆ. ನಾವು ಯಾರು ಅನ್ನುವಂತಹ ನಮ್ಮ ಐಡೆಂಟಿಟಿ ಮುಖ್ಯವಾಗುವುದಿಲ್ಲ. ಅದನ್ನೆಲ್ಲಾ ಮೀರಿ ಒಂದು ಸಹಜೀವನವನ್ನು ಮತ್ತು ಕೊಡುಕೊಳ್ಳುವಿಕೆಯನ್ನು ಒಳಗೊಳ್ಳುತ್ತದೆ. ರಂಗಭೂಮಿಯು ಪ್ರತಿರೋಧಕ ನೆಲೆಗಳನ್ನು ನಿರ್ಮಾಣ ಮಾಡುವಂತಹ ಒಂದು ದೊಡ್ಡ ವಾಹಕವಾಗುತ್ತದೆ. ನಾನು ಪ್ರಯತ್ನ ಪಡುವುದು ಏನು ಅಂದರೆ ಈ ರಂಗಭೂಮಿಯು ಕೂಡಾ ಯಾರೋ ಕೆಲವು ಪ್ರತಿಷ್ಠಿತರ ಕೈಯಲ್ಲಿರುವಂತಹ ಅಸ್ತ್ರ ಆಗಬಾರದು. ಅಥವಾ ಒಂದು ಹವ್ಯಾಸಿ ಮಟ್ಟದಲ್ಲಿ ಅದು ಉಳಿದು ಹೋಗಬಾರದು. ಅದು ನಿಜಕ್ಕೂ ಒಂದು ಜೀವನ ಸಿದ್ಧಾಂತ ಮತ್ತು ಬದ್ಧತೆಯನ್ನು ಬೆಳೆಸುವಂತಹ ಒಂದು ದೊಡ್ಡ ಪ್ರಯೋಗಭೂಮಿಯಾಗಬೇಕು ಅಂತಾ ಪ್ರಯತ್ನ ಪಡ್ತೇನೆ. ಶಾಲೆಗಳು ಮತ್ತು ಹಳ್ಳಿಗಳ ಜತೆ ಸಮುದಾಯದ ಅನುಸಂಧಾನವಾಗಿ ರಂಗಭೂಮಿಯನ್ನು ಕಟ್ಟುತ್ತಿದ್ದೇವೆ. ಅದರಿಂದ ನಾವು ಚಲಿಸುತ್ತಾ ಇದ್ದೇವೆ. ಈಗ ಅಲ್ಲೇ ಇಟ್ಟುಕೊಂಡು ಸಾಂಸ್ಕೃತಿಕವಾಗಿಯೂ ನಡೆಸಬೇಕಾದಂತಹ ಏನೇನು ಪರಿಕರಗಳು ನಮಗೆ ಬೇಕಿತ್ತೋ ಪಠ್ಯಗಳು ಬೇಕಿತ್ತೋ ಆ ಪಠ್ಯಗಳು ಪ್ರಯೋಗಕ್ಕೋಸ್ಕರನೇ ನಮಗೆ 10 ವರ್ಷ ಬೇಕಾಯಿತು. ಈಗ ಜಂಗಮವಾಗುತ್ತೇವೆ. ಜಂಗಮರೀತಿಯಲ್ಲಿ ನೂರಾರು ಹಳ್ಳಿಗಳಲ್ಲಿ ಆರಂಭ ಆಗಿದೆ. ಇದುವರೆಗೂ ನಾವು ಹುಣ್ಣಿಮೆ ಹಾಡು ಅಂತ ಒಂದು ಪ್ರಯೋಗ ಮಾಡುತ್ತಾ ಇದ್ದೆವು. ಪ್ರತಿ ತಿಂಗಳು ಹುಣ್ಣಿಮೆಯ ದಿನ ಕೋಲಾರದ ಅಂತರಗಂಗೆ ಬೆಟ್ಟದ ಮೇಲೆ ಬಂಡೆಗಳ ಮಧ್ಯೆ ಒಂದು ಸಣ್ಣ ಗುಡಿಸಲು ಕಟ್ಟಿಕೊಂಡು ಸಣ್ಣ ರಂಗಭೂಮಿ ಕಟ್ಟಿಕೊಂಡು ಪ್ರತಿ ತಿಂಗಳು ಕೂಡಾ ನಾಟಕ ಒಂದು ನಿತ್ಯ ಕರ್ಮದ ರೀತಿಯಲ್ಲಿ ಮಾಡಿ ಬಹಳಷ್ಟು ಜನರು ಬರುವ ಜಾಗವಾಗಿದೆ ಅದು. ಪಠ್ಯದಾಚೆಗಿನ ಅರಿವಿಗೆ ಮಕ್ಕಳನ್ನು ಒಡ್ಡಿಕೊಳ್ಳುವುದು. ಇನ್ನು ಮುಂದಕ್ಕೆ ನಾವು ಏನು ಮಾಡ್ತಾ ಇದ್ದೇವೆ ಅಂದರೆ ಒಂದು ಜಾಗದಲ್ಲಿ ಅದು ನೆಲೆಗೊಳ್ಳುವ ಬದಲಾಗಿ ಹತ್ತಾರು ಕಡೆ ಅದು ಹೇಗೆ ಚಲಿಸಬಹುದು ಎನ್ನುವಂತಹ ಹೊಸ ರೀತಿಯಲ್ಲಿ ನೋಡ್ತಾ ಇದ್ದೇವೆ. ಇದುವರೆಗೂ ನಾವು ಪಠ್ಯಗಳನ್ನು ಉಪಯೋಗಿಸುತ್ತಿದ್ದೇವು. ಆ ಪಠ್ಯಗಳನ್ನು ವ್ಯಾಪಕಗೊಳಿಸುವುದು ಮಾಸ್ ಕಮ್ಯೂನಿಕೇಶನ್ ಹೇಗೆ ಯೂಸ್ ಮಾಡ್ಬೇಕು ಮತ್ತು ಬೇರೆ ಬೇರೆ ನೆಲೆಗಳಲ್ಲಿ ಅದನ್ನು ಹೇಗೆ ತರಬೇಕು ಅಂತಾ ಕೆಲಸ ಮಾಡುತ್ತೇವೆ.

*ಬಾನಾಡಿ: : ನೀವು ರಂಗಭೂಮಿಯಲ್ಲಿ ಇತರ ಸೃಜನಶೀಲ ಮನಸ್ಸುಗಳನ್ನು ಹೇಗೆ ಒಳಗೊಳಿಸುತ್ತೀರಿ?*

ಕೋಟಿಗಾನಹಳ್ಳಿ ರಾಮಯ್ಯ: ಇಲ್ಲಿ ಯಾರೂ ಬೇಕಾದರು ಬರಬಹುದು. ಎಷ್ಟು ಫ್ಲೆಕ್ಸಿಬಲ್ ಅಂತಂದರೆ ಯಾವುದೇ ರೀತಿಯ ಅಡ್ಡಿಗಳಿಲ್ಲ. ಯಾರೂ ಬೇಕಾದರೂ ಬಂದು ಅಲ್ಲಿ ತಮ್ಮ ಪ್ರಯೋಗಗಳನ್ನು ಮುಂದುವರಿಸಬಹುದು. ಅದರಿಂದಾನೇ ಅನೇಕರು ಬರುತ್ತಾರೆ. ಒಂದು ತಿಂಗಳಿನಿಂದ ಹಿಡಿದು ಎರಡು ಮೂರು ವರ್ಷದವರೆಗೂ ಇದ್ದವರಿದ್ದಾರೆ. ಅವರವರದೇ ರೀತಿಯ ಹುಡುಕಾಟಗಳಿಗೆ ಮತ್ತು ಪಾಠಗಳಿಗೆ ಒಂದು ವೇದಿಕೆಯಾಗಿದೆ. ಆ ರೀತಿ ಹೆಚ್ಚು ನಾವು ಎಕಮಾಡೇಟಿವ್ ಆಗ್ತಾ ಇದ್ದೇವೆ. ಬರೇ ಒಂದು ರಂಗಕ್ರಿಯೆಯಂತಲ್ಲ. ಮಕ್ಕಳನ್ನು ಬೇರೆ ಬೇರೆ ಜಗತ್ತಿಗೆ ನಾವು ಎಕ್ಸ್‌ಪೋಸ್ ಮಾಡ್ತಾ ಇದ್ದೀವಿ. ಮತ್ತು ಅವರ ಕಲಿಕಾ ವಿಧಾನಗಳು ಕೂಡಾ ಪಠ್ಯದಿಂದ ಬಂಧಿತವಾಗುವಂತೆ ನಾವು ಯೋಚನೆ ಮಾಡುವುದಿಲ್ಲ. ಪಠ್ಯಕ್ಕೂ ಮಿಗಿಲಾದುದ್ದನು ಹೆಂಗೆ ಕಂಡುಕೊಳ್ತಾರೆ ಅನ್ನೋದನ್ನು ನೋಡ್ತೀವಿ.

*ಬಾನಾಡಿ: : ಒಬ್ಬ ಸಾಮಾಜಿಕ ಹೋರಾಟಗಾರರಾಗಿದ್ದ ನೀವು ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ಹೋರಾಟ ಮಾಡಲು ಚುನಾವಣೆಯಲ್ಲಿ ಸ್ಪರ್ಧಿಸಿದ್ದೀರಿ. ನೇರವಾದ ರಾಜಕೀಯ ಪ್ರವೇಶ ನಿಮಗೆ ಎಷ್ಟು ಅಗತ್ಯವೆನಿಸುತ್ತದೆ?*

ಕೋಟಿಗಾನಹಳ್ಳಿ ರಾಮಯ್ಯ: ನನಗೇನು ಗೊಂದಲಗಳು ಕಾಣಿಸುದಿಲ್ಲ. ಆದರೆ ನೋಡುವವರಿಗೆ ಕೆಲವು ಗೊಂದಲಗಳು ಕಾಡಬಹುದು. ಸಹಜವಾಗಿ ರಾಜಕಾರಣ ಅಂದ್ರೇನೆ ಕೆಲವು ರೂಪಿತವಾದ ಗ್ರಹಿಕೆಗಳಿವೆ. ಅದರಾಚೆಗೆ ನೋಡುವುದಕ್ಕೆ ಬರುವುದಿಲ್ಲ. ರಾಜಕಾರಣ ಅಂತಂದರೆ, ಅತ್ಯಂತ ಕೆಟ್ಟವರಿರುವಂಥ, ಕೇಡಿಗರು ಇರುವಂತಹ ಕ್ಷೇತ್ರ ಅಂತನೇ ಅದು ಹೆಸರು ಪಡೆದಿದೆ. ಸಂವೇದನಾಶೀಲರಾದವರು ಅಲ್ಲಿ ಹೆಜ್ಜೆ ಇಡಲಾಗುವುದಿಲ್ಲ ಅಂತ. ಇರುವಂತಹ ಸ್ಥಿತಿಯಲ್ಲಿ ಅದು ಹಂಗೇನೆ ಇದೆ. ಆದರೆ ಪರಿಸ್ಥಿತಿ ಏನು ಅಂತಾ ಅಂದರೆ, ನಮ್ಮಂತಹವರು ಈ ನೆಲೆಗಳಲ್ಲಿರುವ ಸೂಕ್ಷ್ಮಗಳನ್ನು ಅರಿತಿರುವವರು ರಾಜಕಾರಣವನ್ನು ಒಳಗಿನ ಭಾಗವನ್ನಾಗಿ ಮಾಡಲಿಲ್ಲ. ರಾಜಕಾರಣವನ್ನು ಅಧ್ಯಾತ್ಮಗೊಳಿಸದೇ ಇದ್ದರೆ, ಈ ಪರಿಸ್ಥಿತಿ ಹಂಗೇ ಇರುತ್ತದೆ. ಅಧ್ಯಾತ್ಮ ಅಂದರೆ ನೆಲದ ಸತ್ವವನ್ನು ಅರಿತವರು ಎಂದು. ಗಿಲೀಟಿನ ಸಂತರೆಂದು ಅರ್ಥವಲ್ಲ. ನಿಜವಾದ ನೆಲದ ಬಹಳ ದೊಡ್ಡ ಅಧ್ಯಾತ್ಮ ಮತ್ತು ಪರಂಪರೆಗಳಿದ್ದಾವೆ. ಅಂತಹ ಪರಂಪರೆಗಳನ್ನು ಯಾರೂ ಕಣ್ಣೆತ್ತಿ ನೋಡೋಕೆ ಸಾಧ್ಯವಿಲ್ಲ. ಯಾಕೆಂದರೆ ಅವರ ಕಣ್ಣು ಆ ಕಡೆ ಹೊರಳಲ್ಲ. ಹಾಗಾಗಿ ನಾವು ಆ ರಾಜಕಾರಣದ ಭಾಗವಾಗಬೇಕಿದೆ.

ಉದಾಹರಣೆಗೆ ಚುನಾವಣೆಯ ಸಂದರ್ಭದಲ್ಲಿ ಚಾಯ್ ಪೆ ಚರ್ಚಾ ಅಂತ ಮೋದಿ ಮಾಡಿದರೆ, ನಾನು ನೆಲ ದೇವತೆಗಳ ಹೆಜ್ಜೆಗಳಲಿ ಅಂತಾ ಮಾಡಿದೆ. ಏಕೆಂದರೆ ನನಗೆ ನೆಲದೇವತೆಗಳ ಹೆಜ್ಜೆಗಳಲ್ಲಿ ಐಡೆಂಟಿಟಿ ಮಾಡುವುದು ಮುಖ್ಯ. ಎಸ್‌ಇಝೆಡ್‌ಗಳ ಮೂಲಕ, ಜನರಿಂದ ಅವರ ಎಲ್ಲಾ ಹಕ್ಕುಗಳನ್ನು ಕಿತ್ತುಕೊಳ್ಳುವ ರೀತಿಯ ದರೋಡೆ ಇದೆಯಲ್ಲ ಅದರ ವಿರುದ್ಧವಾಗಿ. ನೆಲದೇವತೆಗಳ ಹೆಜ್ಜೆಗಳಲ್ಲಿ ಅಂತಂದರೆ ಆ ಹೆಜ್ಜೆಗಳನ್ನು ಕೂಡಾ ಅವರು ಕಿತ್ತು ಕೊಳ್ತಾರೆ. ಆಕ್ರಮಣ ಮಾಡ್ತಾರೆ. ಅದನ್ನು ವಿರೋಧಿಸಬೇಕಾದರೆ ನಾವು ನೆಲದೇವತೆಗಳ ಹೆಜ್ಜೆಗಳನ್ನು ಮೊದಲು ಕಂಡುಕೊಳ್ಳಬೇಕಾಗುತ್ತದೆ. ಅದನ್ನು ಪ್ರೊಟೆಕ್ಟ್ ಮಾಡಬೇಕಾಗುತ್ತದೆ. ನನ್ನ ನೆಲದೇವತೆಗಳ ಹೆಜ್ಜೆಗಳಲ್ಲಿ ಧರ್ಮ ಅಥವಾ ಕೋಮುಗಳಿಲ್ಲ. ಭಾರತೀಯತ್ವ ಅಂತ ಏನು ಹೇಳುತ್ತೇವಲ್ಲಾ ಅದರೆಲ್ಲದರ ಸತ್ವವಿರುವ ನೆಲೆಗಳವು. ಅವುಗಳನ್ನು ಮುಟ್ಟಿ ಅವುಗಳನ್ನು ರಾಜಕಾರಣದ ಭಾಗ ಮಾಡಬೇಕೆಂದು ನನ್ನ ಉದ್ದೇಶವಾಗಿತ್ತು. ಇವತ್ತು ಕೂಡಾ ರಾಜಕಾರಣವನ್ನು ನಾವು ಅನೇಕ ಮುಖಗಳಾಗಿ ಕೊಂಡೊಯ್ಯಬೇಕಾಗಿದೆ. ಅದೊಂದು ಬರಿಯ ರಾಜಕೀಯ ಚಟುವಟಿಕೆ, ಪಕ್ಷ ರಾಜಕಾರಣ, ಚುನಾವಣೆ ಈ ರೀತಿ ಅದು ಬಂಧಿತವಾಗಿರುವುದನ್ನು ಒಡೆದು ನಮ್ಮ ಬದುಕಿನ ಬಹಳ ದೊಡ್ಡ ರೀತಿಯ ಪ್ರಯೋಗಶೀಲ ಮಾಡಬೇಕಾದ ಒಂದು ಕ್ಷೇತ್ರವೆಂದು ನೋಡಬೇಕಾಗಿದೆ. ಏಕೆಂದರೆ ರಾಜಕಿಯವನ್ನು ನಾವು ಬದಲಿಸಬೇಕಾಗಿದೆ.

*ಬಾನಾಡಿ: ಆಮ್ ಆದ್ಮಿ ಪಕ್ಷದಲ್ಲಿ ಸ್ಪರ್ಧಿಸಿದ ನಿಮಗೆ ಇಂದು ಆ ಪಕ್ಷದ ಧೋರಣೆಗಳೇ ಸಮಂಜಸವೆನಿಸುತ್ತದೆಯೇ?*

ಕೋಟಿಗಾನಹಳ್ಳಿ ರಾಮಯ್ಯ: ಆಮ್ ಆದ್ಮಿ ಪಕ್ಷ ಸ್ಥಾಪನೆಯಾದ ಸಂದರ್ಭದಲ್ಲಿ ಅದೊಂದು ಎರಡನೇ ಸ್ವಾತಂತ್ರ್ಯ ಸಂಗ್ರಾಮ ಎನ್ನುವಷ್ಟರ ಮಟ್ಟಿಗೆ ರಾಜಕೀಯವಾಗಿ ಪ್ರಭಾವಶಾಲಿಯಾಗಿತ್ತು. ಆ ಪಕ್ಷ ಅವತ್ತಿಗೆ ಸರಿಯಾದ ನಡೆ ಅಂತ ನನಗೆ ಗೊತ್ತಿತ್ತು. ಕ್ಯಾಪಿಟಲಿಸ್ಟ್‌ಗಳೆಲ್ಲಾ ಸೇರಿ ಕಳೆದ ಚುನಾವಣೆಯನ್ನು ಕ್ಯಾಸಿನೋ ಗ್ಯಾಂಬಲ್ ಅನ್ನಾಗಿ ಮಾಡಿದರು. ಅದರಲ್ಲಿ ದೊಡ್ಡ ಸ್ಟೇಕ್ ಇಟ್ಟು ಆಡಿರೋರು ಗೆಲ್ಲಲು ಆಯಿತು. ಯಾರಿಗೆ ಹೈಯೆಸ್ಟ್ ಸ್ಟೇಕ್ ಇಡೋಕೆ ಸಾಧ್ಯವಾಯಿತೋ ಅವರು ಗೆದ್ದಿದ್ದಾರೆ. ಅವತ್ತಿಗೆ ಅದು ಸ್ವಾತಂತ್ರ್ಯ ಹೋರಾಟಕ್ಕೆ ಸಮೀಕರಣಗೊಂಡ ರಾಜಕೀಯ ಹೋರಾಟವಾಗಿತ್ತು. ನಾನು ಎಲ್ಲಾ ಪಕ್ಷಗಳನ್ನು ನೋಡಿರೋನೆ. ಜತೆಗೆ ಕರ್ನಾಟಕದಲ್ಲಿ ಪರ್ಯಾಯ ರಾಜಕಾರಣದ ಹೆಸರಲ್ಲಿ ನಡೆದಿರುವಂತಹ ಎಲ್ಲಾ ಪ್ರಕ್ರಿಯೆಗಳ ಜತೆಗೂ ಪ್ರತ್ಯಕ್ಷವಾಗಿ ಇದ್ದವನು ನಾನು. ನನಗೆ ಇದುವರೆಗೂ ಆ ಪಾರ್ಟಿಯ ಮೆನಿಫೆಸ್ಟೋದಲ್ಲಿರುವ ಮೂರು ಅಂಶಗಳು ಬಹಳ ಮುಖ್ಯವಾದುವು. ಪಾರ್ಟಿಸಿಪೇಟರಿ ಡೆಮಾಕ್ರಸಿಯನ್ನು ಮೊತ್ತ ಮೊದಲ ಬಾರಿಗೆ ಚಾಲ್ತಿಯಲ್ಲಿ ತಂದಿರೋದು ಅವರು. ದಲಿತ ರಾಜಕಾರಣವನ್ನು ಹೇಳುವಂತಹ ಪಕ್ಷಗಳನ್ನು ಸೇರಿದಂತೆ ಯಾವುದೇ ಪಕ್ಷ ಪಾರ್ಟಿಸಿಪೇಟರಿ ಡೆಮಾಕ್ರಸಿ ಬಗ್ಗೆ ಮಾತಾಡಿಲ್ಲ. ಅಂಬೇಡ್ಕರ್ ಅವರ ಸಂವಿಧಾನದ ಸಂವೇದನೆಯನ್ನು ಮೆನಿಫೆಸ್ಟೋದ ಒಳಗೆ ತಂದಿರೋದು ಬಹಳ ಮುಖ್ಯವಾದ ನೆಲೆ. ರಾಜಕಾರಣಿಯಾಗಬೇಕಾದವನು ಯಾವುದೇ ಸ್ವಂತ ಹಣವನ್ನು ತೊಡಗಿಸಬೇಕಾಗಿಲ್ಲ. ಅದು ವ್ಯಾಪಾರನೂ ಅಲ್ಲ, ಬಂಡವಾಳನೂ ಅಲ್ಲ. ಜನರೇ ಹಣವನ್ನು ಪ್ರೊವೈಡ್ ಮಾಡ್ತಾರೆ. ನೀವು ನಿಲ್ಲಿ ಮತ್ತು ಮಾಡಿ ಎಂಬಂತಹ ರೀತಿ, ಆಲೋಚನೆಗಳು ನಿಜವಾದ ಬಿಡುಗಡೆ. ಆ ಪಕ್ಷವನ್ನು ಈಗಲೂ ನಾನು ನಿರಾಕರಿಸಿದವನಲ್ಲ. ರಾಜಕೀಯವಾಗಿ ಪ್ರತಿಯೊಬ್ಬರೂ ಯೋಚನೆ ಮಾಡಬೇಕಾದ ಕಾಲಘಟ್ಟದಲ್ಲಿದ್ದೇವೆ ನಾವು. ಆ ಕಾರಣಕ್ಕಾಗಿ ಆ ಕಾಲಘಟ್ಟದಲ್ಲಿ ನಾನು ಕೂಡಾ ಆಕ್ಟಿವ್ ಆಗಿ ಒಂದು ಪಾತ್ರವನ್ನು ವಹಿಸಲೇ ಬೇಕಾಯಿತು. ಒಬ್ಬ ಕವಿಯಾಗಿ, ಒಬ್ಬ ನಾಟಕಕಾರನಾಗಿ ಅಥವಾ ದಲಿತ ಚಳುವಳಿಯಲ್ಲಿ ಪಾಲ್ಗೊಂಡ ಪ್ರಜ್ಞೆ ಇತ್ತಲ್ಲಾ, ಅದೆಲ್ಲ ಕಾರಣಕ್ಕಾಗಿ ನ್ಯಾಯವಾದ ತೀರ್ಮಾನವನ್ನು ಮಾಡಿದೆ.

# ರೇಖಾ ಮೋಹನ್ ರಾಕ್ ಮ್ಯೂಸಿಕ್




ರೇಖಾ ಮೋಹನ್ ಆಲಿಯಾಸ್ ರೇಮೋ ನೇತೃತ್ವದಲ್ಲಿ ಕನ್ನಡ ಗೀತೆಗಳ ರಾಕ್ ಸಂಗೀತ ಕಾರ್ಯಕ್ರಮವು ದೆಹಲಿ ಕರ್ನಾಟಕ ಸಂಘದಲ್ಲಿ ಇದೇ ನವೆಂಬರ್ 16ರಂದು ನಡೆಯಿತು.

ಕೀಬೋರ್ಡ್ ವಾದಕರಾಗಿ ಗೀತಪ್ರಿಯಾ ಹಾಗೂ ಕರ್ನಾಟಕದ ಏಕೈಕ ಮಹಿಳಾ ಬಾಸ್ ಗಿಟಾರ್ ವಾದಕರಾಗಿರುವ ಪ್ರಾರ್ಥನಾ, ಗಿಟಾರ್ ನುಡಿಸುವುದರ ಜೊತೆಗೆ ಹಾಡನ್ನೂ ಹಾಡಿ ಕೇಳುಗರಿಗೆ ಮೋಡಿ ಎಲ್ಲರ ಮನಸೆಳೆದರು. ಶಿಲ್ಪಾ ಮಧುಸೂಧನ್ ತಮ್ಮ ಮಧುರ ಕಂಠದಿಂದ ಜನರನ್ನು ರಂಜಿಸಿದ್ದೇ ಅಲ್ಲದೆ ಆಕ್ಟಾಪ್ಯಾಡ್ ಕೂಡ ಬಾರಿಸಿದರು. ಲಕ್ಷ್ಮೀ ವಿಜಯ್ ಹಾಗೂ ಸುಮಾ ಶಾಸ್ತ್ರಿ ತಮ್ಮ ಅದ್ಭುತ ಕಂಠಸಿರಿಯಿಂದ ಪ್ರೇಕ್ಷಕರ ಮನೆ ಗೆದ್ದರು.

***ಅಭಿಮತ ವರದಿ***






# ಯಮನೂರಸಾಬ ಅವರ ಜಲವರ್ಣದ ಕಲಾಕೃತಿಗಳ ಪ್ರದರ್ಶನ

ಚಿತ್ರ ಕಲಾವಿದ ಯಮನೂರಸಾಬ ಅವರಿಂದ ಧಾರವಾಡ, ಬಿಜಾಪುರ ಹಾಗೂ ಇತರ ಸುತ್ತಮುತ್ತಲಿನ ಪರಿಸರದ ಚಿತ್ರಗಳ ಜಲವರ್ಣದ ಕಲಾಕೃತಿಗಳ ಪ್ರದರ್ಶನವು ದೆಹಲಿ ಕರ್ನಾಟಕ ಸಂಘದ ಆರ್ಟ್ ಗ್ಯಾಲರಿಯಲ್ಲಿ ನವೆಂಬರ್ 12 ರಿಂದ 14 ವರೆಗೆ ನಡೆಯಿತು. ಪ್ರದರ್ಶನವನ್ನು ಜಾನಪದ ವಿದ್ವಾಂಸ ಡಾ. ಪುರುಷೋತ್ತಮ ಬಿಳಿಮಲೆ ಅವರು ಉದ್ಘಾಟಿಸಿದರು. ಅವರು ಜಲವರ್ಣದ ಕಲಾಕೃತಿಗಳ ಮಹತ್ವದ ಬಗ್ಗೆ ಹೇಳಿ ಜಲವರ್ಣದ ಬಗೆಗಿನ ತಮ್ಮ ಪ್ರೀತಿಯನ್ನು ವ್ಯಕ್ತಪಡಿಸಿದರು. ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಕಲಾಕೃತಿಗಳನ್ನು ವೀಕ್ಷಿಸಿ ಶುಭ ಹಾರೈಸಿದರು. ಇದೇ ಸಮಯದಲ್ಲಿ ಹಾಜರಿದ್ದ ಕಲಾವಿದೆ ಅನು ನಾಯಕ್ ಕಲಾಕೃತಿಗಳನ್ನು ವೀಕ್ಷಿಸಿ ದೆಹಲಿಯ ಕಲಾ ಪರಿಸರ ಹಾಗೂ ಕಲಾಕೃತಿಗಳ ಮಹತ್ವ ರಚನೆ, ರಚನಾ ವಿಷಯಗಳ ಕುರಿತು ಮಾತಾಡಿದರು. ಕಲಾವಿದ ಸುಧೀರ್ ಫಡ್ನೀಸ್ ಅವರು ಸಹಕರಿಸಿದರು. ಅ

***ಅಭಿಮತ ವರದಿ***








# ರಾಷ್ಟ್ರಪತಿಯವರಿಂದ ಪ್ರಶಸ್ತಿ ಪಡೆದ ಸಾಧಕರಿಗೆ ಅಭಿನಂದನೆ



ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರಿಗೆ ಭಾರತದ ರಾಷ್ಟ್ರಪತಿಯವರಿಂದ ಮಕ್ಕಳ ದಿನಾಚರಣೆಯ ಸಂದರ್ಭದಲ್ಲಿ ರಾಷ್ಟ್ರೀಯ ಪ್ರಶಸ್ತಿಗಳನ್ನು ನೀಡಲಾಯಿತು. ಕರ್ನಾಟಕದ ವಿವಿಧ ಪ್ರದೇಶಗಳಿಂದ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿ ರಾಷ್ಟ್ರಪತಿಯವರಿಂದ ಪ್ರಶಸ್ತಿ ಪಡೆದ ಸಾಧಕರನ್ನು ದೆಹಲಿ ಕರ್ನಾಟಕ ಸಂಘದಲ್ಲಿ ಇದೇ ನವಂಬರ್ 16ರಂದು ಅಭಿನಂದಿಸಲಾಯಿತು.

ಜಾದೂ ಮೂಲಕ ಬುದ್ಧಿ ಮಾಂಧ್ಯತೆಯ ಬಗ್ಗೆ ಜನ ಜಾಗೃತಿ ಮಾಡುತ್ತಿರುವ ಸಾತ್ವಿಕ್ ನಾಯಕ್, ಕೈಯ ಅಂಗವೈಕಲ್ಯತೆಯಿದ್ದು ಕಾಲಿನಿಂದಲೇ ಚಿತ್ರ ಬಿಡಿಸುವುವ ಎಲ್. ಅಂಜನಯ್ಯ, ದೃಷ್ಟಿ ಕಳೆದುಕೊಂಡು ಅಂಗವಿಕಲ ಮಕ್ಕಳ ಅಭಿವೃದ್ಧಿಗಾಗಿ ಸಮರ್ಥನಂ ಟ್ರಸ್ಟ್ ಸ್ಥಾಪಿಸಿದ ಮಹಂತೇಶ್ ಜಿ. ಕಿವುಡ ಸಣ್ಣವರ್ ಮತ್ತು ಒಲಿಂಪಿಕ್ ಕ್ರೀಡಾಪಟು ಪಿ.ಎನ್. ಪ್ರಕಾಶ್ ಅವರಿಗೆ ರಾಷ್ಟ್ರೀಯ ಪ್ರಶಸ್ತಿ ನೀಡಿ ಭಾರತದ ರಾಷ್ಟ್ರಪತಿ ಶ್ರೀ ಪ್ರಣವ್ ಮುಖರ್ಜಿಯವರು ಗೌರವಿಸಿದ್ದರು.

ಸುಪ್ರೀಂ ಕೋರ್ಟಿನ ನ್ಯಾಯಾಧೀಶರಾದ ಜಸ್ಟಿಸ್ ಶ್ರೀ ಗೋಪಾಲ ಗೌಡ ಅವರ ಅಧ್ಯಕ್ಷತೆಯಲ್ಲಿ ನಡೆದ ಸಮಾರಂಭದಲ್ಲಿ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಸಾಧಕರಿಗೆ ಪುಷ್ಪಗುಚ್ಛ ಮಾಡಿ ಸಂಘದ ಸ್ಮರಣಿಕೆ ನೀಡಿ ಗೌರವಿಸಿದರು.

ಐದು ವರ್ಷದ ಸಾತ್ವಿಕ್ ನಾಯಕ್ ಕಳೆದ ಒಂದು ವರ್ಷದಿಂದ ನೂರಕ್ಕೂ ಹೆಚ್ಚು ಇಂದ್ರಜಾಲ ಪ್ರದರ್ಶನಗಳನ್ನು ಮಾಡಿ ಬುದ್ಧಿ ಮಾಂಧ್ಯತೆಯ ಬಗ್ಗೆ ಜನ ಜಾಗೃತಿ ಮಾಡುತ್ತಿದ್ದನು. ಅವನು ಸಂಘದ ಸಭಾಂಗಣದ ವೇದಿಕೆಯಲ್ಲೂ ಮ್ಯಾಜಿಕ್ ಪ್ರದರ್ಶನ ನೀಡಿದನು. ವಿಶೇಷ ಪ್ರತಿಭಾವಂತನಾದ ಎಲ್. ಅಂಜನಯ್ಯ ಕಾಲಿನಲ್ಲಿ ಚಿತ್ರ ಬಿಡಿಸಿ ಸಂಘದ ಸಭಾಂಗಣದಲ್ಲಿ ಸೇರಿದ್ದ ಪ್ರೇಕ್ಷರನ್ನು ಮಂತ್ರಮುಗ್ಧಗೊಳಿಸಿದನು.

ಅಂಗವಿಕಲ ಮಕ್ಕಳ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಸಮರ್ಥನಂ ಟ್ರಸ್ಟ್‌ಗೆ ರಾಷ್ಟ್ರಪ್ರಶಸ್ತಿ ಲಭಿಸಿದ ಸಂದರ್ಭದಲ್ಲಿ ಆ ಟ್ರಸ್ಟ್‌ನ್ನು ಸ್ಥಾಪಿಸಿದ ಮಹಂತೇಶ್ ಜಿ. ಕಿವುಡ ಸಣ್ಣವರ್ ಅವರನ್ನೂ ಅಭಿನಂದಿಸಲಾಯಿತು. ಎಂ.ಫಿಲ್. ಪಧವೀದರರಾದ ಮಹಂತೇಶ್ ವಿಶ್ವ ಅಂಧರ ಕ್ರಿಕೆಟ್ ಪರಿಷತ್ತಿನ ಉಪಾಧ್ಯಕ್ಷರೂ ಆಗಿದ್ದಾರೆ.

ಒಲಿಂಪಿಕ್ ಕ್ರೀಡಾಪಟು ಪಿ.ಎನ್. ಪ್ರಕಾಶ್ ಅವರು ಕೆನಡಾದಲ್ಲಿ ನಡೆದ ಏರ್ ಪಿಸ್ತೂಲ್ ವಿಭಾಗದಲ್ಲಿ ಚಿನ್ನದ ಪದಕ ಗಳಿಸಿದ್ದಾರೆ. ಕೊರಿಯಾದಲ್ಲಿ ನಡೆದ ವಿಶ್ವಕಪ್‌ನಲ್ಲಿ ಕಂಚಿನ ಪದಕ ಗಳಿಸಿದ್ದಾರೆ. ಇಂಗ್ಲೆಂಡಿನಲ್ಲಿ ನಡೆದ ಏಷ್ಯನ್ ಷೂಟಿಂಗ್ ಚಾಂಪಿಯನ್ ಷಿಪ್‌ನಲ್ಲಿ 2 ಬೆಳ್ಳಿ, 1 ಕಂಚು, ಗಳಿಸಿದ್ದಾರೆ. ಅ

***ಅಭಿಮತ ವರದಿ***







# ಸಂಘದಲ್ಲಿ ಸ್ಥಳೀಯ ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮ

ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ನವೆಂಬರ್ 9, 2014ರಂದು ಆಯೋಜಿಸಿದ ಸ್ಥಳೀಯ ಮಕ್ಕಳ ಕಾರ್ಯಕ್ರಮದಲ್ಲಿ ಕು.ಕನಿಕಾ ಭಟ್, ಕು. ಸೌಂದರ್ಯ ಹಾಗೂ ಕು.ಪ್ರೇರಣಾ ರಾವ್ ನೃತ್ಯ ಕಾರ್ಯಕ್ರಮ ನೀಡಿದರು. ಅ

# ಸ್ಥಳೀಯ ಕಲಾವಿದರ ಜಾನಪದ ಸಮೂಹ ನೃತ್ಯ





ದೆಹಲಿ ಕರ್ನಾಟಕ ಸಂಘದಲ್ಲಿ ವಿಶಿಷ್ಟ ಕನ್ನಡಿಗ ಪ್ರಶಸ್ತಿ ಪ್ರದಾನ ಮತ್ತು ವಾರ್ಷಿಕ ಆಟೋಟ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳ ಬಹುಮಾನ ವಿತರಣಾ ಸಮಾರಂಭದ ಸಂದರ್ಭದಲ್ಲಿ ಇದೇ ನವಂಬರ್ 30ರಂದು ಸ್ಥಳೀಯ ಕಲಾವಿದರ ಜಾನಪದ ಸಮೂಹ ನೃತ್ಯ ಕಾರ್ಯಕ್ರಮವು ನಡೆಯಿತು.

ಈ ಕಾರ್ಯಕ್ರಮದಲ್ಲಿ ಜನಕಪುರಿ ಮಹಿಳಾ ಮಂಡಳಿ, ಕರ್ನಾಟಕ ಭವನ ತಂಡ (ಮಕ್ಕಳು), ವಂದನಾ ಶೆಟ್ಟಿ ಮತ್ತು ತಂಡ, ಶಿವಪ್ಪ ಮತ್ತು ತಂಡ, ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿ (ಮಹಿಳೆಯರು), ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್, ರಂಗೋಲಿ ತಂಡ, ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿ (ಹುಡುಗಿಯರು), ಕರ್ನಾಟಕ ಭವನ (ಹುಡುಗಿಯರು), ದೆಹಲಿ ಫ್ರೆಂಡ್ಸ್ ಸ್ಥಳೀಯ ಕಲಾವಿದರು ಅತ್ಯಂತ ವಿಜೃಂಭಣೆಯಿಂದ ಜಾನಪದ ಹಾಡುಗಳಿಗೆ ನೃತ್ಯ ಮಾಡಿದರು.

ಈ ನೃತ್ಯ ಕಾರ್ಯಕ್ರಮಗಳ ನಿರ್ವಹಣೆಯನ್ನು ಕಾರ್ಯಕಾರಿ ಸಮಿತಿಯ ಸದಸ್ಯೆಯರಾದ ಶ್ರೀಮತಿ ಆಶಾ ಶ್ಯಾಮಸುಂದರ್ ಮತ್ತು ಶ್ರೀಮತಿ ಪೂಜಾ ಪ್ರದೀಪ್ ಅವರು ನಿರ್ವಹಿಸಿದರು. ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ಕಾರ್ಯಕ್ರಮವನ್ನು ಸಂಯೋಜಿಸಿದರು. ಅ

***ಅಭಿಮತ ವರದಿ***



ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿ–ಹುಡುಗಿಯರು



ಕರ್ನಾಟಕ ಭವನ ಮಕ್ಕಳು





ಶಿವಪ್ಪ ಮತ್ತು ತಂಡ



ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿ–ಮಹಿಳೆಯರು



ರಂಗೋಲಿ ತಂಡ



ವಂದನಾ ಶೆಟ್ಟಿ ಮತ್ತು ತಂಡ






ಜನಕಪುರಿ ಮಹಿಳಾ ಮಂಡಳಿ



ಕರ್ನಾಟಕ ಭವನ ಹುಡುಗಿಯರು



ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್





ದೆಹಲಿ ಫ್ರೆಂಡ್ಸ್

# ವಾರ್ಷಿಕ ದಿನಾಚರಣೆಯ ಅದ್ಭುತ ಜನಪದ ನೃತ್ಯ ಕಾರ್ಯಕ್ರಮ



ದೆಹಲಿ ಕರ್ನಾಟಕ ಸಂಘದಲ್ಲಿ ನಡೆದ ಸ್ಥಳೀಯ ಕಲಾವಿದರ ಜಾನಪದ ಸಮೂಹ ನೃತ್ಯ ಕಾರ್ಯಕ್ರಮ ಮರೆಯಲಾಗದ ಅದ್ಭುತ ಕಾರ್ಯಕ್ರಮವಾಗಿ ಮೂಡಿ ಬಂತು.

ಸುಮಾರು 80 ಮಂದಿ ಮಹಿಳೆಯರು, ಮಕ್ಕಳು ಸತತವಾಗಿ ಸುಮಾರು 75 ನಿಮಿಷಗಳ ಕಾಲ ವಿವಿಧ ಜಾನಪದ ನೃತ್ಯ ಪ್ರದರ್ಶನ ನೀಡಿದರು. ಕನ್ನಡ ಜಾನಪದ ಲೋಕದ ಅತ್ಯಂತ ಜನಪ್ರಿಯ ಹಾಡುಗಳ ರಾಗ ಮತ್ತು ತಾಳಕ್ಕೆ ಅನುಗುಣವಾಗಿ ತಮ್ಮದೇ ಆದ ಶೈಲಿಯಲ್ಲಿ ಕುಣಿದು ಸಭಾಂಗಣದಲ್ಲಿ ಕಿಕ್ಕಿರಿದು ನೆರೆದ ಜನ ಸಮೂಹವನ್ನು ಮಂತ್ರಮುಗ್ಧರನ್ನಾಗಿಸಿದರು. ನಾಲ್ಕು ಐದು ವರ್ಷ ವಯಸ್ಸಿನ ಪುಟಾಣಿಗಳಿಂದ ಹಿಡಿದು ಎಂಭತ್ತು ವರ್ಷದ ವರೆಗಿನ ಹಿರಿಯ ವಯಸ್ಸಿನವರು ತಮ್ಮ ನೃತ್ಯದಿಂದ ಕನ್ನಡ ಜಾನಪದ ಸಂಸ್ಕೃತಿಯ ಸಿರಿತನವನ್ನು ಮನ ಮುಟ್ಟುವಂತೆ ಪ್ರದರ್ಶಿಸಿದರು.

ಸಂಘದಲ್ಲಿ ರಾಜ್ಯೋತ್ಸವದ ಅಂಗವಾಗಿ ಒಂದು ತಿಂಗಳು ನಿರಂತರವಾಗಿ ನಡೆದು ಬಂದ ನಾನಾ ಕಾರ್ಯಕ್ರಮಗಳೂ ಈ ಕಾರ್ಯಕ್ರಮದೊಂದಿಗೆ ಎಂದೆಂದಿಗೂ ಮರೆಯಲಾಗದ ಭವ್ಯ ಕಾರ್ಯಕ್ರಮವಾಗಿ ನೆರೆದಿದ್ದ ಎಲ್ಲರ ಮನಸ್ಸನನ್ನು ಸೂರೆಗೊಂಡವು. ವಿಶೇಷವೆಂದರೆ ಈ ಕಾರ್ಯಕ್ರಮ ಸಂಪೂರ್ಣವಾಗಿ ಸ್ಥಳೀಯ ಪ್ರತಿಭೆಗಳ ಅಪ್ಪಟ ಕನ್ನಡ ಕಾರ್ಯಕ್ರಮವಾಗಿತ್ತು. ಕರ್ನಾಟಕದ ಎಲ್ಲಾ ಪ್ರಾಂತಗಳಿಂದ ಆಯ್ದುಕೊಂಡ ಜಾನಪದ ಹಾಡುಗಳು ಇಡೀ ಕರ್ನಾಟಕವನ್ನೇ ಸಭಿಕರ ಮುಂದೆ ಪ್ರಸ್ತುತಪಡಿಸಿದವು.

ಮಾಯದಂತ ಮಳೆ ಬಂತಣ್ಣ, ಗೆಜ್ಜೆ ಮಾತಾಡುತಾವೋ ಕೋಲು ಮಾತಾಡುತಾವೋ, ಹುಟ್ಟಿದರೆ ಹುಟ್ಟಬೇಕು ಕನ್ನಡ ನಾಡಿನಲ್ಲಿ, ಡೆನ್ನ ಡೆನ್ನನಾ (ತುಳು) ಹಾಡುಗಳಿಗೆ ನರ್ತಿಸಿದ ತಂಡಗಳು ಕೊನೆಯಲ್ಲಿ ಒಟ್ಟಾಗಿ ನರ್ತಿಸಿ ಒಂದೇ ವೇದಿಕೆಯಲ್ಲಿ ಒಂದೇ ವೇಳೆಗೆ ಎಂಬತ್ತು ಜನ ಕಲಾವಿದರು ಕುಣಿದದ್ದು ನಿಜಕ್ಕೂ ಅದ್ಭುತವಾಗಿತ್ತು. ಬೀಸುವ ಕಲ್ಲು, ಒಳಲು ಕಲ್ಲು, ಕೋಲಾಟ, ಗೆಜ್ಜೆ, ತಲೆಗೆ ಅಡಿಕೆ ಹಾಳೆ, ಮುಂತಾದ ಅಂದಚೆಂದದ ಪ್ರಸಾದನ ಮತ್ತು ಲಯಬದ್ಧವಾದ ನೃತ್ಯದ ಹಿಂದೆ ಈ ಸ್ಥಳೀಯ ಕಲಾವಿದರು ಪಟ್ಟ ಪರಿಶ್ರಮ, ಅವರ ತಾಲೀಮು, ಪರಸ್ಪರ ಸಹಕಾರ ಹಾಗೂ ಹೊಂದಾಣಿಕೆ ಎಲ್ಲವೂ ಎದ್ದು ಕಾಣುತ್ತಿತ್ತು.

ಈ ಸ್ಥಳೀಯ ಕಲಾವಿದರು ಕರ್ನಾಟಕದ ಬೆಂಗಳೂರು, ಮೈಸೂರು, ಧಾರವಾಡ, ದಕ್ಷಿಣ ಕನ್ನಡ ಮತ್ತಿತರ ಪ್ರದೇಶಗಳಿಂದ ಬಂದು ದೆಹಲಿ ಕರ್ನಾಟಕ ಸಂಘದಲ್ಲಿ ಪ್ರದರ್ಶನ ನೀಡುವ ಅಥವಾ ನೀಡಿದ ಯಾವುದೇ ಪ್ರದರ್ಶನಕ್ಕಿಂತ ಕಡಿಮೆಯಿಲ್ಲ ಎಂದು ಸಾಬೀತುಪಡಿಸಿದರು. ಈ ಎಲ್ಲಾ ಹವ್ಯಾಸಿ ಕಲಾವಿದರು ಸಾಧಾರಣ ಗೃಹಿಣಿಯರು ಮತ್ತು ಮಕ್ಕಳು ಆಗಿದ್ದರು. ಬಹಳಷ್ಟು ಮಂದಿ ಮೊದಲ ಬಾರಿಗೆ ವೇದಿಕೆ ಮೇಲೆ ಬಂದಿದ್ದರು. ಜತೆಗೆ ಕಾರ್ಯಕ್ರಮದ ನಿರ್ವಹಣೆಯೂ ಅಷ್ಟೇ ಅದ್ಭುತವಾಗಿತ್ತು. ಅ

***ಸಖಾರಾಮ ಸೋಮಯಾಜಿ ಉಪ್ಪೂರ್***



*ಮುರುಘಾಮಠದ ಶಾಖಾ ಮಠದ ಶ್ರೀ ಬಸವ ಪ್ರಣವರಮಾನಂದ ಸ್ವಾಮೀಜಿಯವರು 29 ಅಕ್ಟೋಬರ್ 2014ರಂದು ದೆಹಲಿ ಕರ್ನಾಟಕ ಸಂಘಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ, ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ಆನಂದ ಮುರಗೋಡ, ಶ್ರೀಮತಿ ಆಶಾ ಶ್ಯಾಮಸುಂದರ್, ಸಂಘದ ಸದಸ್ಯರಾದ ಶ್ರೀ ಕಲ್ಲಪ್ಪ ಭಜಂತ್ರಿ, ಮಂಜುನಾಥ ಎಚ್.ಕೆ. ಮತ್ತು ಶ್ರೀ ಗಿರೀಶ್ ಅವರು ಸಂಘದ ಸ್ಮರಣಿಕೆ ಹಾಗೂ ಹೂಗುಚ್ಛ ನೀಡಿ ಅಭಿನಂದಿಸಿದರು.*

## ತಾಯೇ ತಾಯೇ ಕನ್ನಡಾಂಬೆ

ತಾಯೇ ತಾಯೇ ಕನ್ನಡಾಂಬೆ
ಧೈರ್ಯದ ವರವ ನೀಡೇ ಅಂಬೆ

ಮಮತೆಯ ಮಡಿಲು ತುಂಬಿರಲಿ
ಪ್ರೀತಿಯ ಹೊನಲು ಹರಿಯುತ್ತಿರಲಿ
ತನುಮನವೆಲ್ಲಾ ನಿನಗೆ ಅರ್ಪಿಸಿ
ರೋಷ-ದ್ವೇಷ ತ್ಯಜಿಸುವೆವು ತಾಯೇ.

ಹೊರನಾಡಿನಲಿ ಅರಳುತ್ತಿರುವೆವು
ಕನ್ನಡ ಕಂಪನು ಬೀರುತ್ತಿರುವೆವು
ಭೇಧ-ಭಾವಗಳ ಬದಿಗೊತ್ತಿ ನಾವ್
ಒಂದಾಗಿ ನಿನ್ನ ಸೇವೆಯ ಗೈಯ್ವೆವು.

ನೆರೆಬಂದರೂ ಸರಿ, ಬರ ಬಿದ್ದರೂ ಸರಿ
ರಾಷ್ಟ್ರ ಧ್ವಜದ ಗೌರವವನು ಕಾಯ್ವೆವು
ತಾಯ್ನಾಡಿಗೆಂದಿಗೂ ಕಳಂಕ ಬಾರದಂತೆ
ಕನ್ನಡ ಡಿಂಡಿಮ ಬಾರಿಸುವೆವು ನಾವ್.

ಅ ***ಸವಿತಾ ಇನಾಮದಾರ್***



## ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿ



ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿ ಹಾಗೂ ಅಜಂತ ಅಂತರಾಷ್ಟ್ರೀಯ ಸಾಂಸ್ಕೃತಿಕ ವಿದ್ಯಾಸಂಸ್ಥೆ ಸಂಯುಕ್ತವಾಗಿ ಕರ್ನಾಟಕ ರಾಜ್ಯೋತ್ಸವವನ್ನು ನವೆಂಬರ್ 4ರಂದು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಆಚರಿಸಿದವು.

ಮುಖ್ಯ ಅತಿಥಿಗಳಾಗಿ ಶ್ರೀ ಎ.ಎಸ್. ಜಯಚಂದ್ರ, ನ್ಯಾಯಧೀಶರು, ಡಾ. ಬಿ.ಡಿ. ಅಥಣಿ, ಸ್ಪೆಶಲ್ ಡಿ.ಜಿ. ಹೆಲ್ತ್ ಸರ್ವಿಸ್, ಶ್ರೀ ಸುಪ್ರಸನ್ನ, ಕರ್ನಾಟಕ ಭವನದ ಜಂಟಿ ನಿವಾಸಿ ಆಯುಕ್ತರು ಪಾಲ್ಗೊಂಡಿದ್ದರು. ಇದೇ ಸಂದರ್ಭದಲ್ಲಿ ಅಜಂತ ಅಂತರಾಷ್ಟ್ರೀಯ ಸಾಂಸ್ಕೃತಿಕ ವಿದ್ಯಾ ಸಂಸ್ಥೆಯಿಂದ ಸಾಧಕರಿಗೆ ಅಜಂತ ರಾಷ್ಟ್ರರತ್ನ ಹಾಗೂ ಅಜಂತ ಸೇವಾರತ್ನ ಪುರಸ್ಕಾರಗಳನ್ನು ನೀಡಿ ಸಾಧಕರನ್ನು ಗೌರವಿಸಲಾಯಿತು.

ಕಾರ್ಯಕ್ರಮದ ಅಂಗವಾಗಿ ನೃತ್ಯೋತ್ಸವ, ಕವಿಗಳ ನಮನ ನೃತ್ಯ ರೂಪಕ, ವಾದ್ಯಗೋಷ್ಠಿ, ಕರ್ನಾಟಕ ಶಾಸ್ತ್ರೀಯ ಸಂಗೀತ ಕಚೇರಿ ನಡೆಯಿತು. ರಮೇಶ್ ಚಡಗ ಹಾಗೂ ವಿಶ್ವಬಂಧು ನಾಗೇಶ್ ಮತ್ತು ಲಕ್ಷ್ಮೀ ನಾಗೇಶ್ ಅವರನ್ನು ದೆಹಲಿ ಕರ್ನಾಟಕ ಸಂಘದ ಪರವಾಗಿ ಅಭಿನಂದಿಸಲಾಯಿತು.

**ಅಜಂತ ರಾಷ್ಟ್ರರತ್ನ ಪ್ರಶಸ್ತಿ ವಿಜೇತರು**

ಶ್ರೀ ಎ.ಎಸ್. ಜಯಚಂದ್ರ, ನ್ಯಾಯಧೀಶರು, ಶ್ರೀ ಸುಪ್ರಸನ್ನ, ಕರ್ನಾಟಕ ಭವನದ ಜಂಟಿ ನಿವಾಸಿ ಆಯುಕ್ತರು, ಶ್ರೀ ಬಿ.ಕೆ. ಬಸವರಾಜು, ಜನಕಪುರಿ ಕನ್ನಡ ಕೂಟದ ಅಧ್ಯಕ್ಷರು ಮತ್ತು ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷರು, ಶ್ರೀ ಸಿ.ಎಂ. ನಾಗರಾಜ, ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ, ಡಾ. ವೈ. ಅವನೀಂದ್ರನಾಥ್ ರಾವ್, ಕೋಶಾಧಿಕಾರಿ, ದೆಹಲಿ ಕರ್ನಾಟಕ ಸಂಘ ಹಾಗೂ ಅಧ್ಯಕ್ಷರು, ದೆಹಲಿ ತುಳುಸಿರಿ, ಶ್ರೀ ಭೀಮರಾವ್ ಮುರಗೋಡ, ದೆಹಲಿಯ ಹಿರಿಯ ಚಿತ್ರ ಕಲಾವಿದ

**ಅಜಂತ ಸೇವಾರತ್ನ ಪ್ರಶಸ್ತಿ ವಿಜೇತರು**

ಶ್ರೀ ಎ.ಟಿ. ಶ್ರೀನಿವಾಸ, ಶ್ರೀ ಟಿ.ಪಿ. ಬೆಳ್ಳಿಯಪ್ಪ, ಶ್ರೀ ಮಂಜುನಾಥ್ ಎಚ್.ಕೆ. ಶ್ರೀ ಜಯರಾಮ್, ಶ್ರೀ ರವೀಂದ್ರ, ಶ್ರೀ ಕಲ್ಲಪ್ಪ ಭಜಂತ್ರಿ, ಶ್ರೀ ಪಿ.ಸಿ. ಶ್ರೀನಿವಾಸ, ಶ್ರೀ ರಾಧಾಕೃಷ್ಣ, ಶ್ರೀ ಗಿರೀಶ್, ಶ್ರೀ ರಾಜಕುಮಾರ್ ಮತ್ತು ವಿದ್ವಾನ್ ರಮೇಶ್ ಚಡಗ. ಅ



## ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್

ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್ ವತಿಯಿಂದ ಕರ್ನಾಟಕ ರಾಜ್ಯೋತ್ಸವವನ್ನು ಇದೇ ನವಂಬರ್ 19ರಂದು ಕಾರ್ಯಕಾರಿ ಸಮಿತಿಯ ಅಧ್ಯಕ್ಷೆ ಶ್ರೀಮತಿ ರಾಧಾ ಕೌಜಲಗಿ ಅವರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು.

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಗೆ ಉಪಾಧ್ಯಕ್ಷರಾಗಿ ಆಯ್ಕೆಯಾದ ಅಸೋಸಿಯೇಶನ್ ಸದಸ್ಯೆಯಾದ ಶ್ರೀಮತಿ ಆಶಾ ಕಾರಿಯಪ್ಪ, ಶಿಕ್ಷಣ ಸಂಸ್ಥೆಯ ಇನ್ನೋರ್ವ ಉಪಾಧ್ಯಕ್ಷ ಶ್ರೀ ಕೆ.ಆರ್. ರಾಮಮೂರ್ತಿ, ಮತ್ತು ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಶ್ರೀಹರಿ ಅವರಿಗೆ ಶ್ರೀಮತಿ ರಾಧಾ ಕೌಜಲಗಿ ಅವರು ಹೂಗುಚ್ಚ ನೀಡಿ ಅಭಿನಂದಿಸಿ ಚುನಾಯಿತ ಪ್ರತಿನಿಧಿಗಳು ಹೆಚ್ಚೆಚ್ಚು ಒಳ್ಳೆಯ ಕೆಲಸಗಳನ್ನು ಮಾಡಿ ಶಾಲೆಗೆ ಕೀರ್ತಿ ತರಲಿ ಎಂದು ಹಾರೈಸಿದರು.

ಶ್ರೀಮತಿ ನಂದಿನಿ ಮಲ್ಯ ಅವರು ಕನ್ನಡ ಭಾಷೆಯ ಬಗ್ಗೆ ಮಾತನಾಡುತ್ತಾ ಸಾಧ್ಯವಿದ್ದಷ್ಟು ಪುಸ್ತಕಗಳನ್ನು ಎರವಲು ಪಡೆಯದೆ ಕೊಂಡು ಓದುವುದು ಒಳಿತು. ಅದರಿಂದ ಕನ್ನಡತನವು ಉಳಿದು ಬೆಳೆಯಲು ಸಾಧ್ಯ ಎಂದು ತಿಳಿಸಿದರು. ಹಿರಿಯ ಸದಸ್ಯೆ ಡಾ. ಅಹಲ್ಯಾ ಚಿಂತಾಮಣಿಯವರು ಅವರ ತಾಯಿ ಕವಿತೆಯ ರೂಪದಲ್ಲಿ ಮಗಳಿಗೆ ಬರೆದಿದ್ದ ಪತ್ರವನ್ನು ಮತ್ತು ಕವಿತೆಯನ್ನು ಓದಿದರು.

ಶ್ರೀಮತಿ ರಾಧಾ ಕೌಜಲಗಿ, ಉಪಾಧ್ಯಕ್ಷೆ ಶ್ರೀಮತಿ ಆಶಾ ಶ್ಯಾಮಸುಂದರ್, ಕಾರ್ಯದರ್ಶಿ ಶ್ರೀಮತಿ ದೀನಾ ಜಾಯ್ಸ್, ಜಂಟಿ ಕಾರ್ಯದರ್ಶಿ ಶ್ರೀಮತಿ ಹೇಮಲತ, ಖಜಾಂಚಿ ಜಯಾ ಆಚಾರ್ಯ ಮತ್ತು ಸದಸ್ಯರು ನಾಡಗೀತೆಯೊಂದಿಗೆ ತಾಯಿ ಭುವನೇಶ್ವರಿಗೆ ನಮಿಸಿ ಕಾರ್ಯಕ್ರಮವನ್ನು ಪ್ರಾರಂಭಿಸಿದರು.

ಶ್ರೀಮತಿ ದೀನಾ ಜಾಯ್ಸ್ ಅವರು ಡಿಸೆಂಬರ್‌ನಲ್ಲಿ ಅಸೋಸಿಯೇಶನ್ ವತಿಯಿಂದ ಆರೋಗ್ಯ ತಪಾಸಣೆ ಮತ್ತು ಪಿಕ್‌ನಿಕ್ ಹಮ್ಮಿಕೊಂಡಿರುವುದನ್ನು ಸದಸ್ಯರಿಗೆ ತಿಳಿಸಿ ವಂದನಾರ್ಪಣೆ ಸಲ್ಲಿಸಿದರು.

ಅ *ಎಸ್.ಸಿ. ಹೇಮಲತ*

## ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಕನ್ನಡ ಶಾಲೆ

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮವನ್ನು ಸಂಸ್ಥೆಯ ಅಧ್ಯಕ್ಷರಾದ ಡಾ. ಎ. ಆರ್. ಗುಡ್ಡೇಗೌಡ ಅವರು ನವಂಬರ್ 1ರಂದು ದೀಪ ಬೆಳಗಿಸಿ ಉದ್ಘಾಟಿಸಿದರು.

ಕರ್ನಾಟಕವು ವೈವಿಧ್ಯಮಯ ಸಂಸ್ಕೃತಿ ಇದ್ದರೂ, ಏಕತೆಯನ್ನು ಸಾರಿದ ಪುಣ್ಯಬೀಡು. ಇಂತಹ ನಾಡಿನಲ್ಲಿ ಹುಟ್ಟಿದಂತಹ ನಾವು ನಿಜವಾಗಿಯೂ ಭಾಗ್ಯವಂತ ಕನ್ನಡಿಗರು. ಆದರೆ, ಅನಿವಾರ್ಯ ಕಾರಣಗಳಿಂದ ದೂರದೂರಿಗೆ ಬಂದು ನೆಲೆಸಿದ್ದರೂ, ಕನ್ನಡಕ್ಕಾಗಿ ಒಗ್ಗೂಡುವ ಈ ಸುಸಂದರ್ಭದಲ್ಲಿ ಕನ್ನಡಾಂಬೆಯನ್ನು ಸ್ಮರಿಸುತ್ತಾ ನಾವೆಲ್ಲರೂ ಕನ್ನಡಕ್ಕಾಗಿ ಶ್ರಮಿಸಬೇಕಾಗಿದೆ ಎಂದು ಡಾ. ಗುಡ್ಡೇಗೌಡ ಅವರು ಹೇಳಿದರು.

ವಿದ್ಯಾರ್ಥಿಗಳಿಂದ ನೃತ್ಯ ಪ್ರದರ್ಶನ, ಕರ್ನಾಟಕದ ಸಾಂಪ್ರದಾಯಿಕ ವೇಷಭೂಷಣ, ಸಮೂಹ ಗಾಯನ ಕಾರ್ಯಕ್ರಮಗಳು ನಡೆದವು. ಈ ಸಂದರ್ಭದಲ್ಲಿ ನಡೆಸಿದ ವಿವಿಧ ಸ್ಪರ್ಧೆಗಳ ವಿಜೇತರಿಗೆ ಪ್ರಮಾಣ ಪತ್ರ ಹಾಗೂ ಬಹುಮಾನವನ್ನು ಡಾ. ಗುಡ್ಡೇಗೌಡ ಅವರು ನೀಡಿದರು. ಸಂಸ್ಥೆಯ ಆವರಣವನ್ನು ಕನ್ನಡ ಧ್ವಜ, ಕರ್ನಾಟಕದ ವಿವಿಧ ಮಾದರಿ, ತಳಿರು ತೋರಣಗಳಿಂದ ಅಲಂಕರಿಸಲಾಗಿತ್ತು.

ಕಾರ್ಯಕ್ರಮದಲ್ಲಿ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷ ಶ್ರೀ ಕೆ.ಆರ್. ರಾಮಮೂರ್ತಿ, ಗೌರವ ಕಾರ್ಯದರ್ಶಿ ಶ್ರೀ ಸಿ.ಆರ್. ಶ್ರೀನಿವಾಸ, ಖಜಾಂಚಿ ಶ್ರೀ ಟಿ.ಎಂ. ಮೈಲಾರಪ್ಪ ಅಲ್ಲದೆ ಆಡಳಿತ ಮಂಡಳಿಯ ಎಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರು, ವಿದ್ಯಾರ್ಥಿಗಳ ಪಾಲಕರು ಮತ್ತು ಹಲವಾರು ಕನ್ನಡಾಭಿಮಾನಿಗಳು ಉಪಸ್ಥಿತರಿದ್ದರು.



ಪ್ರಾಂಶುಪಾಲರಾದ ಶ್ರೀ ಕೆ.ಟಿ. ಗಣೇಶ್ ಅವರ ಮಾರ್ಗದರ್ಶನದಲ್ಲಿ ಕಾರ್ಯಕ್ರಮಗಳನ್ನು ನಡೆಸಲಾಯಿತು. ಶಿಕ್ಷಕರಾದ ಶ್ರೀಮತಿ ಮಾಲಾ ಗೋಪಾಲ್ ಸ್ವಾಗತಿಸಿದರು. ಶ್ರೀಮತಿ ಪರಿಮಳ ವಂದಿಸಿದರು. ಶ್ರೀಮತಿ ಅಕ್ಕಮಹಾದೇವಿ ಕಾರ್ಯಕ್ರಮವನ್ನು ನಿರೂಪಿಸಿದರು. ಅ







## ಮಕ್ಕಳ ನಾಟಕ ಪುಷ್ಪರಾಣಿ ಸಂಘದಲ್ಲಿ ಪ್ರದರ್ಶನ

ನಟನಾ, ಮೈಸೂರು ತಂಡದಿಂದ ಮೇಘ ಸಮೀರ ನಿರ್ದೇಶನದಲ್ಲಿ ಡಾ. ಚಂದ್ರಶೇಖರ ಕಂಬಾರ ಅವರ ಪುಷ್ಪರಾಣಿ ಮಕ್ಕಳ ನಾಟಕವು ದೆಹಲಿ ಕರ್ನಾಟಕ ಸಂಘದಲ್ಲಿ ಇದೇ ನವೆಂಬರ್ 5 ರಂದು ಪ್ರದರ್ಶನಗೊಂಡಿತು.

ಗಿಡಮರ, ಪರಿಸರಕ್ಕೆ ಸಂಬಂಧಿಸಿದ ಒಂದು ಜಾನಪದ ಕಥೆಯನ್ನಿಟ್ಟು ರಚಿತವಾದ ಈ ನಾಟಕದ ವಿಶಿಷ್ಟತೆ ಇರುವುದು ಅದರ ನಿರೂಪಣಾ ಶೈಲಿಯಲ್ಲಿ. ಮೇಳವನ್ನು ಸಾಲುಗಳಲ್ಲಿ ಅಳವಡಿಸಿ ಅದಕ್ಕೆ ನಾದ ಮತ್ತು ಲಯವನ್ನು ಬೆರೆಸಿರುವುದು, ವಿಭಿನ್ನ ಅನುಭವವನ್ನು ನೀಡುತ್ತದೆ. ಈ ನಾಟಕ ಕೇವಲ ಪರಿಸರ ಜಾಗೃತಿಯ ಕುರಿತು ಮಾತನಾಡದೆ ಕಳೆದುಹೋಗುತ್ತಿರುವ ಮಾನವ ಪ್ರೀತಿ, ಕುಸಿಯುತ್ತಿರುವ ಜೀವನಮೌಲ್ಯ, ಮನಸ್ಸುಗಳ ನಡುವೆ ಉಂಟಾಗುತ್ತಿರುವ ಬಿರುಕು, ಅಭಿವೃದ್ಧಿಯ ಹೆಸರಲ್ಲಿ ಮುಗ್ಧ ಮನಸ್ಸುಗಳ ನಡುವೆ ಉಂಟಾಗುತ್ತಿರುವ ಬಿರುಕು, ಮುಗ್ಧ ಮನಸ್ಸುಗಳ ಮೇಲೆ ನಡೆಯುತ್ತಿರುವ ದಬ್ಬಾಳಿಕೆ ಹಾಗೂ ನಶಿಸುತ್ತಿರುವ ಮಣ್ಣಿನ ಸತ್ವ, ಗುಣಗಳ ಕುರಿತು ವಿವಿಧ ನೆಲೆಗಳಲ್ಲಿ ಚರ್ಚಿಸುತ್ತದೆ. ಈ ಮಕ್ಕಳ ನಾಟಕದ ಇಷ್ಟೆಲ್ಲಾ ಸಾಧ್ಯತೆಗಳು ನಮ್ಮ ನಿತ್ಯ ಜೀವನದ ಗೊಂದಲಗಳಿಗೆ, ಓಟದ ಬದುಕಿಗೆ ಸವಾಲೆನಿಸುತ್ತದೆ, ಸಮಕಾಲೀನವಾಗಿ ನಿಲ್ಲುತ್ತದೆ.

ಈ ನಾಟಕವನ್ನು ರಂಗಕೃತಿಯಾಗಿಸುವಲ್ಲಿ ವೀರಗಾಸೆ ಮೇಳವನ್ನು, ಯಕ್ಷಗಾನದ ಮಟ್ಟುಗಳನ್ನು ಹದವಾಗಿ ಮುದನೀಡುವಂತೆ ಬಳಸಲಾಗಿದೆ. ಪ್ರಾಣಿ, ಪಕ್ಷಿ, ಮರಗಿಡಗಳು ಮನುಷ್ಯರಂತೆ ಮಾತನಾಡುತ್ತಾ ರಂಗದ ಮೇಲೆ ಬರುವುದು ಮಕ್ಕಳಿಗೆ ಮನೋರಂಜನೆಯ ಜೊತೆಗೆ ಅವರಿಗೆ ಹೇಳಲೇಬೇಕಾದ ಮಾನವ ಕಾಳಜಿಯನ್ನು ಜೀವನ ಪ್ರೀತಿಯನ್ನು ಹೇಳುವ ರೂಪಕಗಳಾಗಿವೆ. ಒಟ್ಟಿನಲ್ಲಿ ನಟನದ ಈ ಪ್ರಯೋಗ ಜಾನಪದ ಶಕ್ತಿಯನ್ನು ಹೊಸ ತಲೆಮಾರಿನ ಮಕ್ಕಳಿಗೆ ತಿಳಿಸುವ, ಆ ಮೂಲಕ ಅವರೊಳಗಿನ ಅಗಾಧ ಸಾಮರ್ಥ್ಯ, ಚಿಂತನೆಗಳನ್ನು ಜಾಗೃತಗೊಳಿಸುವ ಪ್ರಯತ್ನವಾಗಿತ್ತು. ಅ

***ಅಭಿಮತ ವರದಿ***




## ಸಂಘದಿಂದ ಭಾರತದ ಅಂಧರ ಕ್ರಿಕೆಟ್ ತಂಡಕ್ಕೆ ಶುಭ ಹಾರೈಕೆ

ದಕ್ಷಿಣ ಆಫ್ರಿಕಾದ ಕೇಪ್ ಟೌನ್‌ನಲ್ಲಿ ನವೆಂಬರ್ 25ರಿಂದ ಡಿಸೆಂಬರ್ 7ರವರೆಗೆ ನಡೆಯುವ ಅಂಧರ ಏಕದಿನ ಕ್ರಿಕೆಟ್ ವಿಶ್ವಕಪ್ 2014ರಲ್ಲಿ ಪಾಲ್ಗೊಳುವ ಭಾರತದ ತಂಡವನ್ನು ದೆಹಲಿ ಕರ್ನಾಟಕ ಸಂಘದಲ್ಲಿ ಇದೇ ನವಂಬರ್ 24ರಂದು ಗೌರವಿಸಿ ಬೀಳ್ಕೊಡಲಾಯಿತು. ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಮಾತನಾಡಿ ಭಾರತಕ್ಕೆ ನಾವು ಯೋಚಿಸಲಾಗದಂತಹ ಈ ಅದ್ಭುತ ಪ್ರತಿಭೆಗಳು ಈ ವರ್ಷದ ವಿಶ್ವಕಪ್‌ನ್ನು ತಂದು ಕೊಡುತ್ತಾರೆ ಎಂಬ ಆಶಯವನ್ನು ವ್ಯಕ್ತಪಡಿಸಿದರು. ಈ ತಂಡದಲ್ಲಿ ಮೂರು ಜನ ಕರ್ನಾಟಕ ಆಟಗಾರರಿದ್ದು ಭಾರತ ತಂಡದ ನಾಯಕರಾಗಿ ಕರ್ನಾಟಕದ ಆಲ್‌ರೌಂಡರ್ ಶ್ರೀ ಶೇಖರ್ ನಾಯಕ್, ಜೊತೆಗೆ ಶ್ರೀ ಪ್ರಕಾಶ್ ಜೆ, ಶ್ರೀ ವೀರೇಶ್ ಇದ್ದಾರೆ. ಅ

## ಜ್ಯೋತಿ ರಾಧಾಕೃಷ್ಣ ಅವರ ಆಹಾರ ಮಳಿಗೆಗೆ ಬಹುಮಾನ

ಇದೇ ನವಂಬರ್ ತಿಂಗಳಲ್ಲಿ ದೆಹಲಿಯ ಪ್ರಗತಿ ಮೈದಾನದಲ್ಲಿ ನಡೆದ ಭಾರತ ಅಂತರರಾಷ್ಟ್ರೀಯ ವ್ಯಾಪಾರ ಮೇಳದ ಸಂದರ್ಭದಲ್ಲಿ ನಡೆದ ಆಹಾರ ಮೇಳದಲ್ಲಿ ಮಳಿಗೆಯನ್ನು ತೆರೆದಿದ್ದ ದೆಹಲಿಯ ಉಡುಪಿ ಎಂಟರ್‌ಪ್ರೈಸಸ್‌ನ ಶ್ರೀಮತಿ ಜ್ಯೋತಿ ರಾಧಾಕೃಷ್ಣ ಅವರ ಮಳಿಗೆಗೆ ಚಿನ್ನದ ಪದಕ ಲಭಿಸಿದ್ದು, ಕೇಂದ್ರ ಸಚಿವರಾದ ಶ್ರೀ ಮಹೇಶ್ ಶರ್ಮ ಅವರು ಈ ಪಾರಿತೋಷಕವನ್ನು ನೀಡಿದರು. ಜತೆಯಲ್ಲಿ ಅವರ ಪತಿ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯ ಶ್ರೀ ರಾಧಾಕೃಷ್ಣ ಅವರೂ ಉಪಸ್ಥಿತರಿದ್ದರು. ದೆಹಲಿ ಕರ್ನಾಟಕ ಸಂಘದಲ್ಲಿ ಕರ್ನಾಟಕ ರಾಜ್ಯೋತ್ಸವ ಸಂದರ್ಭದಲ್ಲಿ ಶ್ರೀ ರಾಧಾಕೃಷ್ಣ ದಂಪತಿಗಳನ್ನು ಅಭಿನಂದಿಸಲಾಯಿತು ಅ .



## ದೆಹಲಿ ಕನ್ನಡ ಶಾಲೆಯಲ್ಲಿ
# ರೆಕ್ಕೆ ಬಿಚ್ಚಿ ಹಾರಿದ ರತ್ನಪಕ್ಷಿ

ನಟನಾ ಮೈಸೂರು ತಂಡವು ಮಂಡ್ಯ ರಮೇಶ್ ಅವರ ನಿರ್ದೇಶನದಲ್ಲಿ ಕೆ. ರಾಮಯ್ಯ ಅವರ ರತ್ನಪಕ್ಷಿ ಕನ್ನಡ ನಾಟಕವನ್ನು ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಆವರಣದಲ್ಲಿ ನವಂಬರ್ 5ರಂದು ಪ್ರದರ್ಶಿಸಲಾಯಿತು.

ದುಡ್ಡಿಲ್ಲ ಬುದ್ಧದೆ, ಬುದ್ಧದೆ ದುಡ್ಡಿಲ್ಲ ಎನ್ನುವ ವಾಕ್ಯದೊಂದಿಗೆ ಚಿಗುರುವ ನಾಟಕ ಒಂದು ಹಳ್ಳಿ ಜೀವನದಲ್ಲಿರುವ ಜನರ ಆಸೆಆಕಾಂಕ್ಷೆಗಳನ್ನು ಬಿಚ್ಚಿಡುತ್ತಾ ಹೋಗುತ್ತದೆ. ಕಥಾ ನಾಯಕ ತಿಪ್ಪನ ಸುತ್ತಾ ಕತೆ ತಿರುಗುತ್ತಾ ಹೋಗುತ್ತದೆ. ದುಡ್ಡಿನ ಬೆನ್ನ ಹಿಂದೆ ಬಿದ್ದ ವ್ಯಾಪಾರಿಗೆ ಅವನು ನೀಡಿದ ದುಡ್ಡಿಗೆ ಹತ್ತರೆಷ್ಟು ವಾಪಾಸ್ ಬರುವಂತೆ ಮಾಡಿದ ತಿಪ್ಪನ ಜಾಣ್ಮೆ ಮೆಚ್ಚುವಂತಹದ್ದು. ಆದರೆ ಕೊನೆಗೆ ತಿಪ್ಪ ಹಣ ಸಂಪಾದಿಸಿ ಶ್ರೀಮಂತನಾದರೂ ಅಜ್ಜಿಯ ಒಂದೇ ಮಾತಿಗೆ ಕುರಿಗಳ ಹಿಂದೆ ಹೋಗುವ ದೃಶ್ಯ ಆತನಿಗಿರುವ ಪ್ರಕೃತಿ ಪ್ರೇಮವನ್ನು ಸಂಕೇತಿಸುತ್ತದೆ. ನಿಜವಾದ ಸಂಪತ್ತು ಈ ಪ್ರಕೃತಿ. ಇದರೊಡನೆ ಇರುವ ಒಡನಾಟ ನಮಗೆ ಸುಖ–ನೆಮ್ಮದಿಯನ್ನು ನೀಡುತ್ತದೆ. ಜೊತಗೆ ನಮ್ಮ ನೆಲ–ಜಲ–ಜೀವಸಂಪನ್ಮೂಲಗಳನ್ನು ನಾವೇ ಕಾಪಾಡಬೇಕು ಎಂಬ ಸಂದೇಶವನ್ನು ಬೀರುವಲ್ಲಿ ಈ ನಾಟಕ ಸಂಪೂರ್ಣ ಯಶಸ್ವಿಯಾಗಿದೆ.

ಮೇಘ ಸಮೀರ, ದಿಶಾ ರಮೇಶ್ ಅವರ ಸಂಗೀತ–ಸಾಂಗತ್ಯ, ಹೆಚ್. ಜನಾರ್ದನ್ ಹಾಗೂ ಮುರಳಿ ಶೃಂಗೇರಿ ಅವರ ಸಂಗೀತ ನಿರ್ದೇಶನ, ರಾಮು ನಟನ ಅವರ ರಂಗ ನಿರ್ವಹಣೆ ನಾಟಕವನ್ನು ಮೆರುಗುಗೊಳಿಸಿತು.

ನಾಟಕದ ನಂತರ ನಾಟಕ ನಿರ್ದೇಶಕರಾದ ಶ್ರೀ ಮಂಡ್ಯ ರಮೇಶ್ ಅವರಿಗೆ ಸಂಸ್ಥೆಯ ಅಧ್ಯಕ್ಷರಾದ ಡಾ. ವಿ. ಆರ್. ಗುಡ್ಡೇಗೌಡ ಅವರು ಪುಷ್ಪಗುಚ್ಛ ಹಾಗೂ ಸ್ಮರಣಿಕೆ ನೀಡಿ ಗೌರವಿಸಿದರು. ನವದೆಹಲಿಯ ವಿಶೇಷ ಪ್ರತಿನಿಧಿಗಳಾದ ಶ್ರೀ ಅಪ್ಪಾಜಿ ಸಿ. ಎಸ್. ನಾಡಗೌಡ ಮುಖ್ಯ ಅತಿಥಿಗಳಾಗಿದ್ದರು. ಉಪಾಧ್ಯಕ್ಷರಾದ ಶ್ರೀ ಕೆ.ಆರ್. ರಾಮಮೂರ್ತಿ, ಗೌರವ ಕಾರ್ಯದರ್ಶಿಯಾದ ಶ್ರೀ ಸಿ. ಆರ್. ಶ್ರೀನಿವಾಸ, ಖಜಾಂಚಿಯಾದ ಶ್ರೀ ಟಿ. ಎಂ. ಮೈಲಾರಪ್ಪ, ಕಾರ್ಯಕಾರಿ ಸಮಿತಿ ಸದಸ್ಯರು, ಸಂಸ್ಥೆಯ ಪ್ರಾಂಶುಪಾಲರಾದ ಶ್ರೀ ಕೆ. ಟಿ. ಗಣೇಶ್ ಮತ್ತು ಕಲಾಭಿಮಾನಿಗಳು ಉಪಸ್ಥಿತರಿದ್ದರು. ಅ







# ಕನ್ನಡ ಶಾಲೆಯಲ್ಲಿ ಕ್ರೀಡೋತ್ಸವ

ಖ್ಯಾತ ಬಾಸ್ಕೆಟ್ ಬಾಲ್ ಆಟಗಾರ್ತಿ ಶೀಬಾ ಮ್ಯಾಗೊನ್ ಅವರು ಇದೇ ನವಂಬರ್ 15ರಂದು ನಡೆದ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ವಾರ್ಷಿಕ ಕ್ರೀಡೋತ್ಸವದಲ್ಲಿ ಮುಖ್ಯ ಅತಿಥಿಯಾಗಿದ್ದರು. ಕಾರ್ಯಕ್ರಮದಲ್ಲಿ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ. ವಿ.ಆರ್. ಗುಡ್ಡೇಗೌಡ, ಉಪಾಧ್ಯಕ್ಷರಾದ ಕೆ. ಆರ್. ರಾಮಮೂರ್ತಿ, ಗೌರವ ಕಾರ್ಯದರ್ಶಿಯಾದ ಶ್ರೀ ಸಿ. ಆರ್. ಶ್ರೀನಿವಾಸ ಅಲ್ಲದೆ ಕಾರ್ಯಕಾರಿ ಸಮಿತಿ ಸದಸ್ಯರು ಉಪಸ್ಥಿತರಿದ್ದರು.

ಪ್ರಾಥಮಿಕ ವಿಭಾಗದ ಮಕ್ಕಳ ನೃತ್ಯ ಪ್ರದರ್ಶನ ಮತ್ತು ಹಿರಿಯ ಮಾಧ್ಯಮಿಕ ವಿಭಾಗದ ವಿದ್ಯಾರ್ಥಿಗಳ ಪಿರಮಿಡ್ ಸಾಹಸ ಪ್ರದರ್ಶನ ನಡೆಯಿತು. ಸ್ವಾಗತ ಗೀತೆ ಮತ್ತು ವಿದ್ಯಾರ್ಥಿಗಳಿಂದ ಆಕರ್ಷಕ ಪಥಸಂಚಲನಗಲಿಂದ ಕಾರ್ಯಕ್ರಮ ಆರಂಭವಾಯಿತು. ಸಂಸ್ಥೆಯ ಪ್ರಾಂಶುಪಾಲರಾದ ಶ್ರೀ ಕೆ. ಟಿ. ಗಣೇಶ್ ಅವರ ಮಾರ್ಗದರ್ಶನದಲ್ಲಿ ದೈಹಿಕ ಶಿಕ್ಷಣ ಶಿಕ್ಷಕರಾದ ಡೆರಿಲ್ ಜೆಸಿಕಾ ಫೆರ್ನಾಂಡಿಸ್ ಹಾಗೂ ಶಿವರಾಮ ಎನ್. ಮತ್ತು ಎಲ್ಲಾ ಶಿಕ್ಷಕ–ಶಿಕ್ಷಕೇತರ ವೃಂದದವರ ಸಹಕರಿಸಿದರು. ಶಿಕ್ಷಕರಾದ ಶ್ರೀಮತಿ ಪರಿಮಳ, ಕು। ವಂದನ, ಕು। ಬಿದಿಶ ಅವರು ಕಾರ್ಯಕ್ರಮವನ್ನು ನಿರೂಪಿಸಿದರು. ಅ

# ಕನಕ ಜಯಂತಿ ಆಚರಣೆ

ಸಂಗೊಳ್ಳಿರಾಯಣ್ಣ ಅಭಿಮಾನಿಗಳ ಬಳಗ, ನವ ದೆಹಲಿ ಇದರ ಆಶ್ರಯದಲ್ಲಿ ಸಂತ ಕವಿ ಕನಕದಾಸರ 527ನೇ ಜಯಂತಿಯನ್ನು ದೆಹಲಿ ಕರ್ನಾಟಕ ಸಂಘದ ವಿಚಾರ ಸಂಕಿರಣ ಭವನದಲ್ಲಿ ಇದೇ ನವಂಬರ್ 8ರಂದು ಆಚರಿಸಲಾಯಿತು.

ಮುಖ್ಯ ಅತಿಥಿಯಾಗಿದ್ದ ನ್ಯಾಯವಾದಿ ಹಾಗೂ ಕೇರಳ ತುಳು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಶ್ರೀ ಸುಬ್ಬಯ್ಯ ರೈ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಾ, ಕರ್ನಾಟಕದಿಂದ ಬಹಳ ದೂರದಲ್ಲಿರುವ ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಹೊರನಾಡ ಕನ್ನಡಿಗರು ಕನಕದಾಸ ಜಯಂತಿಯನ್ನು ಆಚರಿಸುವುದು ಮುಂದಿನ ಪೀಳಿಗೆಗೆ ಕನ್ನಡ ಸಾಹಿತ್ಯ ಹಾಗೂ ಸಂಸ್ಕೃತಿಯ ಮಹಾ ಪರಂಪರೆಯನ್ನು ತಿಳಿಸಿಕೊಡುವ ಮಹತ್ಕಾರ್ಯವಾಗಿದೆ ಎಂದರು.

ರಂಗಕರ್ಮಿ ಶ್ರೀ ಶಿವಾನಂದ ಇಂಗಳೇಶ್ವರ ಅವರು ಕನಕದಾಸರ ಸಾಮಾಜಿಕ ಸಮಾನತೆಯ ಹಿರಿಮೆಯನ್ನು ಹಾಗೂ ಸಾಮಾಜಿಕ ಪ್ರಜ್ಞೆಯ ಅರಿವನ್ನು ವ್ಯಕ್ತಪಡಿಸಿದರು. ಶ್ರೀ ಸರವು ಕೃಷ್ಣ ಭಟ್, ದೆಹಲಿ ಕರ್ನಾಟಕ ಸಂಘದ ಕೋಶಾಧಿಕಾರಿ ಡಾ. ವೈ. ಅವನೀಂದ್ರನಾಥ ರಾವ್, ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಪಿ.ಸಿ. ಶ್ರೀನಿವಾಸ್ ಅವರೂ ಕನಕದಾಸರ ಭಕ್ತಿ ಪಂಥದ ಕುರಿತು ಮಾತಾಡಿದರು.

ಈ ಸಂದರ್ಭದಲ್ಲಿ ಶ್ರೀಮತಿ ಶಿಲ್ಪಾ ಹರಿಪ್ರಿಯಾ, ಶ್ರೀಮತಿ ಹೇಮಲತಾ, ಶ್ರೀಮತಿ ಮಮತಾ ಶಿವರಾಮ, ಶ್ರೀಮತಿ ಶೋಭಾ ಮತ್ತು ಶ್ರೀ ಕುಮಾರ ಅವರು ಕನಕದಾಸರ ಕೀರ್ತನೆಗಳನ್ನು ಹಾಡಿದರು. ಶ್ರೀ ಮಹಾದೇವ ಅವರು ವಂದಿಸಿದರು. ಶ್ರೀಮತಿ ಆಶಾಲತಾ ಎಂ. ಕಾರ್ಯಕ್ರಮ ನಿರ್ವಹಿಸಿದರು. ಅ

***ಎಸ್. ಕುಮಾರ್***





# ಬೆಳಕಿನ ಅರ್ಥ

ವರ್ಷದ ಕೊನೆಯ ತಿಂಗಳಲ್ಲಿ ಮುಂದಿನ ವರ್ಷದ ಕ್ಯಾಲೆಂಡರ್‌ನಲ್ಲಿ ಸುಂದರವಾದ ದಿನಗಳನ್ನು ಕಾಣುವ ತವಕವಿದೆ. ಮುಂಜಾನೆಯ ಮಂಜಿಗೆ ಅರಳಿದ ಮಲ್ಲಿಗೆಯಂತೆ ಬದುಕಿನ ಸೈದ್ಧಾಂತಿಕ ಚಿಂತನೆಗಳು ಅರಳುತ್ತಲೇ ಇರುತ್ತವೆ. ಸುಪ್ತವಾಗಿ ಸಂಚರಿಸುತ್ತಿದ್ದ ಭಾರತ ದೇಶದ ಚೈತನ್ಯವು ಸಿಂಹದ ಘರ್ಜನೆಯಿಂದ ಎಚ್ಚೆತ್ತು ಜಗತ್ತಿನಲ್ಲಿ ಹೊಸದೊಂದು ಬೆಳಕನ್ನು ನೀಡುವ ಶಕ್ತಿಯಾಗಲು ನಿಂತ ದೈತ್ಯನಂತೆ ಕಾಣುತ್ತಿರಬಹುದು. ಈ ದೈತ್ಯನ ಬೆನ್ನಲ್ಲಿ, ಅಗಲಿದ ಅನಂತಮೂರ್ತಿಯವರು ಜಾಗೃತವಾಗಿರಿಸಿದ ಸಂವಾದದ ಸಂಸ್ಕೃತಿಯು ನಮ್ಮಿಂದ ದೂರವಾಗುವುದೇ ಎಂಬ ಚಿಂತೆಯ ಕರಿನೆರಳು ಕಾಡುತ್ತಿದೆ. ಭಿನ್ನವಾದ ಚಿಂತನೆಗಳು ಮುಕ್ತವಾಗಿ ಹರಿದಾಗ ಅಲ್ಲಿ ಸಮಾಜದ ಬಹುಮತದ ಆಶೋತ್ತರಗಳಿಗೆ ಹೊಸ ರೆಕ್ಕೆಗಳು ಬಂದು ಕೆಲವೊಂದು ಹಕ್ಕಿಗಳಾದರೂ ಎತ್ತರಕ್ಕೆ ಹಾರಬಹುದು. ಅದರ ಬದಲು, ಹೊಸ ಅಥವಾ ಬದಲಿ ಚಿಂತನೆಗಳಿಗೆ ಬೇಲಿಹಾಕಿ ಒಂದೇ ಧೋರಣೆಯ ಕುದುರೆ ಮೇಲಿನ ಸವಾರಿ ಪ್ರಜಾಸತ್ತಾತ್ಮಕತೆಯ ಉಸಿರನ್ನು ಬಿಗಿಗೊಳಿಸುವುದು. ಇಂತಹ ಬಿಗಿತದಿಂದ ದೇಶದ ಮೂಲ ಗುಣಗಳು ಉಳಿಯುವುದೇ ಎಂಬುದು ಸಿದ್ಧಾಂತದ ಪ್ರಶ್ನೆಗಳಾಗದೇ ಬದುಕಿನ ಪ್ರಶ್ನೆಗಳಾದಾಗ ನಾವೆಲ್ಲಾ ವಾಸ್ತವದಲ್ಲಿರುತ್ತೇವೆ.

ಬುಡ್ಡೀದೀಪವನ್ನು ಹಿಡಿದು ಕಡುಕತ್ತಲೆಯನ್ನು ಹುಡುಕಿ ಅಲ್ಲಿ ಬೆಳಕಿನ ಅರ್ಥಗಳನ್ನು ವಿವರಿಸಲು ಹೊರಟ ಕೆ. ರಾಮಯ್ಯನವರಿಗೆ ದೆಹಲಿ ಕರ್ನಾಟಕ ಸಂಘವು ಈ ಸಾಲಿನ ಡಾ. ಶಿವರಾಮ ಕಾರಂತ ಪ್ರಶಸ್ತಿಯನ್ನು ನೀಡಿರುವುದು ಸಂಘದ ಜತೆಯಿರುವ ಎಲ್ಲರಿಗೂ ಹೆಮ್ಮೆಯೆನಿಸಬೇಕು. ಇದುವರೆಗೂ ಈ ಪ್ರಶಸ್ತಿಯ ಗರಿಮೆ ಹಿರಿಮೆಯಾಗಿಯೇ ಉಳಿದಿದೆ.

ಮುಂಬರುವ ದಿನಗಳಲ್ಲಿ ಬೆಳ್ಳಿ ಸಂಪುಟದ ಸಂಚಿಕೆಯೊಂದು ಬರಲಿದ್ದು ಅಭಿಮತದ ಓದುಗರು ತಮ್ಮ ಬರಹಗಳನ್ನು, ನೆನಪುಗಳನ್ನು ಮರೆಯದೇ ಕಳುಹಿಸಿ. ಅ

ಬಾನಾಡಿ

*ಬಾಲಕೃಷ್ಣ ನಾಯ್ಕ್ ಡಿ.*

# ದೆಹಲಿಯ ಕರ್ನಾಟಕ ಭವನದಲ್ಲಿ ಸಂಭ್ರಮದ ರಾಜ್ಯೋತ್ಸವ



ಕರ್ನಾಟಕ ರಾಜ್ಯೋತ್ಸವದ ದಿನವಾದ ನವಂಬರ್ 1ರಂದು ದೆಹಲಿಯ ಕರ್ನಾಟಕ ಭವನದಲ್ಲಿ ಬೆಳಿಗ್ಗೆ ನಾಡದೇವಿಗೆ ಪೂಜೆ ಮತ್ತು ನಾಡಗೀತೆಯೊಂದಿಗೆ ಸಂಭ್ರಮದ ರಾಜ್ಯೋತ್ಸವದ ಆಚರಣೆಯು ಆರಂಭಗೊಂಡಿತು. ಕರ್ನಾಟಕ ಭವನದಲ್ಲಿ ಹಬ್ಬದ ವಾತಾವರಣದೊಂದಿಗೆ ಭವನದ ಆವರಣವನ್ನು ವರ್ಣರಂಜಿತ ಪುಷ್ಪಗಳಿಂದ ಅಲಂಕೃತಗೊಳಿಸಲಾಗಿತ್ತು. ಅದೇ ದಿನ ಕ್ರೀಡಾ ಚಟುವಟಿಕೆಗಳ ಭಾಗವಾಗಿದ್ದ ರಂಗೋಲಿ ಸ್ವರ್ಧೆ, ಸಂಗೀತ, ಸಾಮಾನ್ಯ ಜ್ಞಾನ ಹಾಗೂ ಕರ್ನಾಟಕ ವೈಭವದ ಮೇಲಿನ ಕ್ವಿಜ್ ಕಾರ್ಯಕ್ರಮವನ್ನು ನಡೆಸಲಾಯಿತು.

ರಾಜ್ಯೋತ್ಸವದ ಅಂಗವಾಗಿ ವರ್ಣರಂಜಿತ ಸಾಂಸ್ಕೃತಿಕ ಕಾರ್ಯಕ್ರಮವನ್ನು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ನವಂಬರ್ 3ರಂದು ನಡೆಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ಸರಕಾರದ ವಿಶೇಷ ಪ್ರತಿನಿಧಿಗಳಾದ ಶ್ರೀ ಸಿ.ಎಸ್. ನಾಡಗೌಡ ಅವರು ದೆಹಲಿ ಕನ್ನಡಿಗರ ಕನ್ನಡ ಪ್ರೇಮದ ಬಗ್ಗೆ ಅಭಿಮಾನ ವ್ಯಕ್ತಪಡಿಸಿದರು. ದೆಹಲಿಯಲ್ಲಿ ಕರ್ನಾಟಕ ಭವನ, ಕನ್ನಡಿಗರ ಶಿಸ್ತು, ಆಸ್ಥೆಯ ಬಗ್ಗೆ ಮೆಚ್ಚುಗೆಯ ಮಾತುಗಳನ್ನಾಡಿದ ಅವರು ಕರ್ನಾಟಕ ರಾಜ್ಯೋತ್ಸವದ ಬಗ್ಗೆ ವಿವರವಾದ ಮಾಹಿತಿಯನ್ನು ನೀಡಿದರು.

ಸಮಾರಂಭದ ಮುಖ್ಯ ಅತಿಥಿಯಾಗಿದ್ದ ಜಾನಪದ ವಿದ್ವಾಂಸ ಡಾ. ಪುರುಷೋತ್ತಮ ಬಿಳಿಮಲೆಯವರು ಕನ್ನಡ ನಾಡು, ಭಾಷೆ ಹಾಗೂ ಸಂಸ್ಕೃತಿಯ ಬೆಳವಣಿಗೆಯ ಬಗ್ಗೆ ವಿಸ್ತಾರವಾಗಿ ಮಾತನಾಡಿದರು, ಕನ್ನಡ ಪ್ರಸಿದ್ಧ ಕವಿಗಳ ಹಳೆಗನ್ನಡದ ಪಂಕ್ತಿಗಳನ್ನು ವಾಚಿಸಿ ಅದನ್ನು ಹೊಸಗನ್ನಡದಲ್ಲಿ ಅರ್ಥೈಸಿದರು. ಅವರು ಕನ್ನಡ ಭಾಷೆಯ ವಿಕಸನದ ಘಟ್ಟಗಳನ್ನು ವಿವರಿಸಿ ಹೇಳಿದರು. ಸಮಾರಂಭದಲ್ಲಿ ಮಾತಾಡಿದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ಸಂಘ ಹಾಗೂ ಕರ್ನಾಟಕ ಭವನ ಮತ್ತು ಕರ್ನಾಟಕ ಸರ್ಕಾರದ ನಡುವಿನ ಮಧುರ ಬಾಂಧವ್ಯದ ಬಗ್ಗೆ ಮಾತನಾಡಿದರು.

ಕರ್ನಾಟಕ ಭವನದ ಮಾಜಿ ನಿವಾಸಿ ಆಯುಕ್ತರು ಹಾಗೂ ಕೇಂದ್ರ ಆಡಳಿತ ನ್ಯಾಯಮಂಡಳಿ ಸದಸ್ಯರಾದ ಶ್ರೀ ಸುಧೀರ್ ಕುಮಾರ್ ಅವರು ಮಾತನಾಡಿ ಕರ್ನಾಟಕದ ಪೌರಾಣಿಕ ಮತ್ತು ಐತಿಹಾಸಿಕ ನಾಯಕರ ಕೊಡಗೆ ಬಗ್ಗೆ ತಿಳಿಸಿದರು. ಜಂಟಿ ನಿವಾಸಿ ಆಯುಕ್ತರಾದ ಶ್ರೀ ಸಿ.ಜಿ ಸುಪ್ರಸನ್ನ ಅವರ ಪ್ರಸ್ತಾವಿಕ ಭಾಷಣಮಾಡಿದರು. ಕ್ರೀಡಾ ಚಟುವಟಿಕೆಗಳಲ್ಲಿ ವಿಜೇತರಾದ ಕರ್ನಾಟಕ ಭವನದ ಸಿಬ್ಬಂದಿವರ್ಗದವರಿಗೆ ಬಹುಮಾನ ವಿತರಣೆಯನ್ನು ಮತ್ತೊಬ್ಬ ಜಂಟಿ ನಿವಾಸಿ ಆಯುಕ್ತರಾದ ಶ್ರೀ ಟಿ.ಎಂ. ರಂಗಸ್ವಾಮಿ ಅವರು ನಡೆಸಿಕೊಟ್ಟರು. ಸರಕಾರದ ಪ್ರಧಾನ ಕಾರ್ಯದರ್ಶಿಗಳು ಹಾಗೂ ನಿವಾಸಿ ಆಯುಕ್ತರಾದ ಶ್ರೀಮತಿ ವಂದನಾ ಗುರ್ನಾನಿ ಅವರು ವಂದನಾರ್ಪಣೆ ಮಾಡಿದರು. ಕರ್ನಾಟಕ ಭವನದ ಅಧಿಕಾರಿಗಳಾದ ಶ್ರೀಮತಿ ಶ್ರೀಲಕ್ಷ್ಮಿ ಹಾಗೂ ಶ್ರೀ ಆರ್. ರೇಣುಕುಮಾರ್ ಅವರು ಕಾರ್ಯಕ್ರಮವನ್ನು ನಿರೂಪಿಸಿದರು. ಅ .

***ನಾರಾಯಣ ಬಿ.***







## ಅಭಿನಂದನೆ







ದೆಹಲಿ ಕರ್ನಾಟಕ ಸಂಘದ 2014–15ರ ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ಚಟುವಟಿಕೆಗಳಿಗೆ ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ 20 ಲಕ್ಷ ರೂಗಳನ್ನು ಬಿಡುಗಡೆ ಮಾಡಿದೆ. ಕರ್ನಾಟಕ ಸರಕಾರದ ಕ್ರಿಯಾಯೋಜನೆಯಡಿಯಲ್ಲಿ ಕಳೆದ ವರ್ಷ ಕೂಡ 20 ಲಕ್ಷ ರೂಗಳನ್ನು ಬಿಡುಗಡೆ ಮಾಡಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವೆ ಶ್ರೀಮತಿ ಉಮಾಶ್ರೀ, ಇಲಾಖೆಯ ಕಾರ್ಯದರ್ಶಿ ಶೀಮತಿ ಶಾಲಿನಿ ರಜನೀಶ್, ನಿರ್ದೇಶಕರಾದ ಶ್ರೀ ದಯಾನಂದ ಅವರುಗಳಿಗೆ ಹಾಗೂ ಸಿಬ್ಬಂದಿ ವರ್ಗಕ್ಕೆ ದೆಹಲಿ ಕನ್ನಡಿಗರ ಚಟುಟಿಕೆಗಳಿಗೆ ಪ್ರೋತ್ಸಾಹ ನೀಡಿ ಸಹಕರಿಸಿದ್ದಕ್ಕಾಗಿ ದೆಹಲಿ ಕರ್ನಾಟಕ ಸಂಘ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆ ಹಾಗೂ ಕೃತಜ್ಞತೆಯನ್ನು ಸಲ್ಲಿಸುತ್ತದೆ.

***ಸಿ.ಎಂ.ನಾಗರಾಜ***
***ಪ್ರಧಾನ ಕಾರ್ಯದರ್ಶಿ***

Delhi Karnataka Sangha Abhimatha Monthly,
Dec-2014, Vol. No.25, Issue No.3, Price Rs.1/- RNI Regn. No. 53405/91, DL-SW-1/4016/13-15
Printout Date : Dec 8th / 9th, Postal Date :10th / 11th, Total Pages-28
Printed & Published by C.M. Nagaraja, General Secretary on behalf of Delhi Karnataka Sangha (R)
Rao Tularam Marg, Sector-12, R.K.Puram, New Delhi-110022, Tel: 26109615
Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Balakrishna Naik D.

# ವಾರ್ಷಿಕ ಕ್ರೀಡೋತ್ಸವದಲ್ಲಿ ಬಹುಮಾನ ವಿಜೇತ ತಂಡಗಳು





## ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಪಂದ್ಯಾವಳಿ ಪ್ರಶಸ್ತಿ ವಿಜೇತರು

ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಪಂದ್ಯಾವಳಿಯಲ್ಲಿ ಪ್ರಥಮ ಕೆಬಿಎಲ್ ಯುನೈಟೆಡ್ ಮತ್ತು ದ್ವಿತೀಯ ಸೌತ್ ಕೆನರಾ ತಂಡದವರು ಬಹುಮಾನಗಳನ್ನು ಪಡೆದರು



ಥ್ರೋ ಬಾಲ್ ಪಂದ್ಯದಲ್ಲಿ ಪ್ರಥಮ ಮತ್ತು ದ್ವಿತೀಯ ಬಹುಮಾನಗಳನ್ನು ಸೌತ್ ಕೆನರಾ ತಂಡದವರು ಪಡೆದುಕೊಂಡರು



ಕಬಡ್ಡಿ ಪಂದ್ಯದಲ್ಲಿ ಪ್ರಥಮ ಬೆಳ್ಳಿಯಪ್ಪಾಸ್ ಗ್ರೂಪ್ ಮತ್ತು ದ್ವಿತೀಯ ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿ ತಂಡದವರು ಬಹುಮಾನಗಳನ್ನು ಪಡೆದರು







ವಾಲಿಬಾಲ್ ಪಂದ್ಯದಲ್ಲಿ ಪ್ರಥಮ ಸೌತ್ ಕೆನರಾ ಮತ್ತು ದ್ವಿತೀಯ ಹೊಯ್ಸಳ ಗುರ್‌ಗಾಂವ್ ತಂಡದವರು ಬಹುಮಾನಗಳನ್ನು ಪಡೆದರು